ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಹಿರಿಯ ರೈತ ನಾಯಕ ರಾಮಸ್ವಾಮಿ ಇನ್ನಿಲ್ಲ

ಸಂಪುಟ 11 | ಸಂಚಿಕೆ 41 | ಪುಟ 16 | ಅಕ್ಟೋಬರ್2–8, 2017 | ರೂ. 10/- web: www.janashakthi.co.in e-mail : js_weekly@yahoo.com



ವೈಫಲ್ಯಗಳನ್ನು ಮುಚ್ಚಲು "ಸೌಭಾಗ್ಯ"



ಕರ್ನಾಟಕದ ಚುನಾವಣಾ ಬಿಸಿ ಏರುತ್ತಿದೆ

#BJPBeatsWomen





ಬಿಜೆಪಿ ಮತ್ತು ತೈಲ ಬೆಲೆ ಏರಿಕೆ

ದ.ಏಶ್ಯಾ ಎಡ- ಕಮ್ಯುನಿಸ್ಟ ಪಕ್ಷಗಳ ಸಭೆ



ಅತ್ಯಾಚಾರ ಕೇಸಿನಲ್ಲಿ 'ಸಮ್ಮತಿ'– ದಿಗಿಲು ಹುಟ್ಟಿಸುವ ತೀರ್ಪು

ಭ್ರಷ್ಟಾಚಾರದ ವಿರುದ್ಧ ಮೋದಿ ಸರಕಾರದ ಹೋರಾಟ ಕೇವಲ ಬೂಟಾಟಿಕೆ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

"ಆಳುವ ಪಕ್ಷದ ಮುಖಂಡರ ಭ್ರಷ್ಟಾಚಾರಗಳನ್ನೂ ನಿಷ್ಪಕ್ಷಪಾತ ತನಿಖೆಗೆ ಗುರಿಮಾಡಿ"

ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪ್ರಧಾನ ಮಂತ್ರಿಗಳು ಭ್ರಷ್ಟಾಚಾರದೊಂದಿಗೆ ಯಾವುದೇ ರಾಜಿ ಇಲ್ಲ, ಅದಕ್ಕೆ ಯಾವುದೇ ರೀತಿಯ ಮೆದುತನ ತೋರುವುದಿಲ್ಲ ಎಂದು ಗುಡುಗಿದ್ದಾರೆ. ಆದರೆ ಇದು ಕೇವಲ ಬೂಟಾಟಿಕೆಯಷ್ಟೇ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ಪ್ರಧಾನಿಗಳ ಮತ್ತು ಬಿಜೆಪಿಯ ಈ ಬೂಟಾಟಿಕೆ ಇರುವುದು ಪ್ರತಿಪಕ್ಷಗಳ ಮುಖಂಡರ ವಿರುದ್ಧ ಇರುವ ಭ್ರಷ್ಟಾಚಾರದ ಕೇಸುಗಳನ್ನು ಮಾತ್ರ ಎತ್ತಿಕೊಳ್ಳುವಲ್ಲಿ. ಮೂರುವರ್ಷಗಳು ಕಳೆದು ಹೋದರೂ ಲೋಕಪಾಲ ವ್ಯವಸ್ಥೆಯನ್ನು ಸ್ಥಾಪಿಸಲು ಸಂಸತ್ತು ತಂದಿರುವ ಕಾಯ್ದೆಯ ಅನುಷ್ಠಾನದ ಗೋಜಿಗೂ ಅವರ ಸರಕಾರ ಹೋಗಿಲ್ಲ ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಹೆಚ್ಚುತ್ತಿರುವ ರಾಜಕೀಯ ಭ್ರಷ್ಟಾಚಾರದ ವಿರುದ್ಧ ಹೋರಾಟ ಕುರಿತಂತೆ ಸಿಪಿಐ(ಎಂ)ನ ನಿಲುವು, ಅದನ್ನು ಹೇಗೆ ನಡೆಸಬೇಕು ಮತ್ತು ಈ ಪಿಡುಗನ್ನು ನಿವಾರಿಸಲು ಅದರ ಮೂರ್ತ ಪ್ರಸ್ತಾವಗಳೇನು ಎಂಬುದು ಚಿರಪರಿಚಿತ.

ಪ್ರತಿಪಕ್ಷಗಳ ಮುಖಂಡರ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಭಾರೀ ಮುತುವರ್ಜಿ ವಹಿಸುವ ಈ ಸರಕಾರ ಬಿಜೆಪಿ ಮುಖಂಡರುಗಳ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಮಧ್ಯಪ್ರದೇಶದ ವ್ಯಾಪಂ; ಬಿಹಾರದ ಶ್ರಿಜನ್ ವಸತಿ ಹಗರಣ; ಬಿರ್ಲಾ–ಸಹಾರಾ ಡೈರಿಗಳು; ಲಲಿತ್ ಮೋದಿ ಹಗರಣ; ಬಿಜೆಪಿ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕಾಗಿ ಬಂದ ಕರ್ನಾಟಕದ ಗಣಿ ಹಗರಣ; ಮಹಾರಾಷ್ಟ್ರ ಮತ್ತು ಉತ್ತರಾಖಂಡದಲ್ಲಿ ಬಿಜೆಪಿ ಮುಖಂಡರುಗಳ ಭೂಗ್ರಹಣ ಕೇಸುಗಳು; ಛತ್ತೀಸ್‌ಗಡದ ಪಡಿತರ ಹಗರಣ; ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್ ಹಗರಣ ಇತ್ಯಾದಿ ಇತ್ಯಾದಿ. ಬಿಜೆಪಿ ಆಳ್ವಿಕೆಯ ರಾಜ್ಯಗಳ ಭ್ರಷ್ಟಾಚಾರಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ ಇವುಗಳಲ್ಲಿ ಯಾವೊಂದರಲ್ಲಿಯೂ ತನಿಖೆ ನಡೆದಿಲ್ಲ.

ಪ್ರಧಾನ ಮಂತ್ರಿಗಳ ಉದ್ಗಾರಗಳು ಭ್ರಷ್ಟಾಚಾರದ ವಿರುದ್ಧ ಹೋರಾಟದ ಹೆಸರಿನಲ್ಲಿ ರಾಜಕೀಯ ವಿರೋಧಿಗಳ ವಿರುದ್ಧದ ಕೇಸುಗಳನ್ನು ತನಗೆ ಬೇಕಾದಂತೆ ಆರಿಸಿಕೊಳ್ಳುತ್ತಲೇ ಆಮೂಲಕ ಅವನ್ನು ಉನ್ನತ ಸ್ಥಾನಗಳಲ್ಲಿ ಅಗಾಧ ಭ್ರಷ್ಟಾಚಾರಗಳಲ್ಲಿ ತೊಡಗಿರುವ ತನ್ನ ಸ್ವಂತ ಪಕ್ಷ ಮತ್ತು ಸರಕಾರಗಳನ್ನು ರಕ್ಷಿಸಿಕೊಳ್ಳಲು, ಅವನ್ನು ಮುಚ್ಚಿ ಹಾಕಲು ಬಳಸಿಕೊಳ್ಳುವುದಕ್ಕಾಗಿಯೇ ಎಂಬುದು ಸ್ಪಷ್ಟ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಎಲ್ಲ ಆಪಾದನೆಗಳನ್ನು ಒಂದು ನಿಷ್ಪಕ್ಷಪಾತ ತನಿಖೆಗೆ ಒಳಪಡಿಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಹೈದರಾಬಾದ್ ವಿವಿಯಲ್ಲಿಯೂ ಸಾಮಾಜಿಕ ನ್ಯಾಯದ ಶಕ್ತಿಗಳಿಗೆ ಭಾರೀ ವಿಜಯ



ದೇಶದ ಯುವಜನ, ವಿದ್ಯಾರ್ಥಿಗಳು ಎದ್ದು ನಿಲ್ಲುತ್ತಿದ್ದಾರೆ; ದ್ವೇಷ–ದಮನ–ಒಡಕಿನ ರಾಜಕೀಯವನ್ನು ತಿರಸ್ಕರಿಸುತ್ತಿದ್ದಾರೆ–ಯೆಚುರಿ

ಸೆಪ್ಟಂಬರ್ 21ರಂದು ನಡೆದ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ 'ಸಾಮಾಜಿಕ ನ್ಯಾಯದ ಮೈತ್ರಿಕೂಟ'(ಎಎಸ್‌ಜೆ) ಎಲ್ಲ ಪ್ರಮುಖ ಪದಾಧಿಕಾರಿ ಹುದ್ದೆಗಳನ್ನು ಗೆದ್ದುಕೊಂಡಿದೆ. ಎಬಿವಿಪಿ 'ಒಬಿಸಿ ವೇದಿಕೆ'ಯೊಂದಿಗೆ ಮೈತ್ರಿಕೂಟ ರಚಿಸಿಕೊಂಡರೂ ಜೆಎನ್ಯು, ದಿಲ್ಲಿ ವಿವಿಯ ನಂತರ ಇಲ್ಲಿಯೂ ಭಾರೀ ಪರಾಭವ ಅನುಭವಿಸಿದೆ. ಎನ್‌ಎಸ್‌ಯುಐ ಕೂಡ ಸೋಲುಂಡಿದೆ.

ಎಸ್‌ಎಫ್‌ಐ(ಅಂಬೇಡ್ಕರ್ ವಿದ್ಯಾರ್ಥಿ ಸಂಘ), ಟಿಎಸ್‌ಎಫ್ (ಬುಡಕಟ್ಟು ವಿದ್ಯಾರ್ಥಿ ವೇದಿಕೆ), ಡಿಎಸ್‌ಯು(ದಲಿತ ವಿದ್ಯಾರ್ಥಿ ಸಂಘ), ಎಂಎಸ್‌ಎಫ್(ಮುಸ್ಲಿಂ ವಿದ್ಯಾರ್ಥಿ ಒಕ್ಕೂಟ) ಮತ್ತು ಟಿವಿವಿ(ತೆಲಂಗಾಣ ವಿದ್ಯಾರ್ಥಿ ವೇದಿಕ) ಸೇರಿಕೊಂಡು ರಚಿಸಿದ ಎಎಸ್‌ಜೆ ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಾಂಸ್ಕೃತಿಕ ಕಾರ್ಯದರ್ಶಿ ಮತ್ತು ಕ್ರೀಡಾ ಕಾರ್ಯದರ್ಶಿ ಸ್ಥಾನಗಳಲ್ಲಿ ಜಯ ಗಳಿಸಿದ್ದಲ್ಲದೆ, ವಿವಿಧ ವಿಭಾಗಗಳ ಮಂಡಳಿಗಳ ಸದಸ್ಯರು ಮತ್ತು ಕೌನ್ಸಿಲರುಗಳ ಸ್ಥಾನಗಳಲ್ಲಿ 80%ದಷ್ಟು ಗೆದ್ದುಕೊಂಡಿದೆ.'ಲೈಂಗಿಕ ಕಿರುಕುಳದ ವಿರುದ್ಧ ಲಿಂಗ ಸಂವೇದೀಕರಣ ಸಮಿತಿ'(ಜಿಎಸ್–ಸಿಎಎಸ್‌ಹೆಚ್)ಗೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ಆರಿಸುವ ಚುನಾವಣೆಗಳಲ್ಲೂ ಎಎಸ್‌ಜೆ ವಿಜಯ ಗಳಿಸಿದೆ.

ಎಎಸ್‌ಎ ನ ಶ್ರೀರಾಗ್ ಪೊಯ್ಕೆಡನ್ ತನ್ನ ಸಮೀಪದ ಎಬಿವಿಪಿ ಪ್ರತಿಸ್ಪರ್ಧಿಯನ್ನು ಸೋಲಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎಸ್‌ಎಫ್‌ಐ ನ ಆರಿಫ್ ಅಹಮ್ಮದ್ ಎಬಿವಿಪಿ ಕೂಟದ ಅಭ್ಯರ್ಥಿಯನ್ನು ಪರಾಭವಗೊಳಿಸಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದಾರೆ.

ಇದೇ ಎಬಿವಿಪಿ–ಒಬಿಸಿಎಫ್ ಕೂಟದ ಅಭ್ಯರ್ಥಿಗಳನ್ನು ಸೋಲಿಸಿ ಜಂಟಿ ಕಾರ್ಯದರ್ಶಿಯಾಗಿ, ಎಂಎಸ್‌ಎಫ್ ನ ಮುಹಮ್ಮದ್ ಆಶಿಕ್, ಡಿಎಸ್‌ಯು ನ ಗುಂಡೆತಿ ಅಭಿಷೇಕ್ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಮತ್ತು ಲೋಲಂ ಶ್ರವಣ ಕುಮಾರ್ ಕ್ರೀಡಾ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ.

ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿಯೂ ಎಬಿವಿಪಿ ಕೂಟದ ಅಭ್ಯರ್ಥಿಯನ್ನು ಟಿಎಸ್‌ಎಫ್ ನ ಲುನಾವತ್ ಸುರೇಶ್ ಸೋಲಿಸಿದ್ದಾರೆ. ಆದ–ರೆ ಹಾಜರಾತಿ ಕಡಿಮೆ ಇದೆ ಎಂದು ಇವರ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗಿದೆ. ಇದಕ್ಕೆ ವಿದ್ಯಾರ್ಥಿಗಳಿಂದ ಬಲವಾದ ಪ್ರತಿಭಟನೆ ಬಂದುದರಿಂದ 'ಕುಂದುಕೊರತೆ ಸಮಿತಿ'ಯ ಅಂತಿಮ ನಿರ್ಣಯದ ನಂತರ ಫಲಿತಾಂಶವನ್ನು ಘೋಷಿಸಲಾಗುವುದು ಎಂದು ತಿಳಿಸಲಾಗಿದೆ.

ಎಸ್‌ಎಫ್‌ಐನ ಚಾರು ನಿವೇದಿತ ಲಿಂಗ ಸಂವೇದೀಕರಣ ಸಮಿತಿಗೆ ಸ್ನಾತಕೋತ್ತರ ಪ್ರತಿನಿಧಿಯಾಗಿ ಮತ್ತು ತಿನಂಜಲಿ ದಾಮ್ ಸಮಗ್ರೀಕೃತ ಅಧ್ಯಯನಗಳ ಪ್ರತಿನಿಧಿಯಾಗಿ ಚುನಾಯಿತರಾಗಿದ್ದಾರೆ.

ಹಿಂದಿನ ಎರಡು ವಾರಗಳಲ್ಲಿ ವರದಿಯಾದಂತೆ ಜೆಎನ್ಯು ಮತ್ತು ದಿಲ್ಲಿ ವಿವಿಯಲ್ಲಿ ಪರಾಭಗಳ ನಂತರ, ಕೇರಳ ಮತ್ತು ತ್ರಿಪುರಾದಲ್ಲಿ ಮಾತ್ರವಲ್ಲ, ಬಿಜೆಪಿ ಅಧಿಕಾರದಲ್ಲಿರುವ ರಾಜಸ್ತಾನ ಮತ್ತು ಗುವಾಹಾಟಿಯಲ್ಲಿಯೂ ಎಬಿವಿಪಿ ಗಮನಾರ್ಹ ಸೋಲುಗಳನ್ನು ಉಂಡಿದೆ.

ಹೈದರಾಬಾದ್ ಕೇಂದ್ರೀಯ ವಿವಿಯಲ್ಲಿ ಆರುವರ್ಷಗಳ ನಂತರ ಎಸ್‌ಎಫ್‌ಐ ಮತ್ತು ಎಎಸ್‌ಎ

ಪುಟ 11 ನೋಡಿ

ವಿದ್ಯಾರ್ಥಿನಿಯರಿಗೆ ರಕ್ಷಣೆ ನೀಡದ ಕಾಶಿ ಹಿಂದೂ ವಿಶ್ವವಿದ್ಯಾಲಯ ಆಡಳಿತ, ಪೋಲೀಸ್ ಕರೆಸಿ ದಮನ–ಹಿಂಸಾಚಾರ: ಎಐಡಿಡಬ್ಲ್ಯುಎ ಖಂಡನೆ

ಕಾಶಿ ಹಿಂದೂ ವಿಶ್ವವಿದ್ಯಾಲಯ(ಬಿಹೆಚ್‌ಯು)ದ ವಿದ್ಯಾರ್ಥಿಗಳ ಮೇಲೆ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿನಿಯರ ಮೇಲೆ ವಿವಿ ಆಡಳಿತ ಸಪ್ಟಂಬರ್ 23ರಂದು ಹರಿಯಬಿಟ್ಟ ಅಮಾನುಷ ಪೋಲಿಸ್ ಹಿಂಸಾಚಾರವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ.

ಸಪ್ಟಂಬರ್ 21 ರಂದು ಸಂಜೆ 6.20ಕ್ಕೆ ತನ್ನ ಹಾಸ್ಟೆಲ್‌ಗೆ ಮರಳುತ್ತಿದ್ದ ವಿದ್ಯಾರ್ಥಿನಿಯ ಮೇಲೆ ಮೋಟಾರ್ ಸೈಕಲ್‌ನಲ್ಲಿ ಬಂದ ಮೂವರು ಪುರುಷರು ಲೈಂಗಿಕ ಕಿರುಕುಳಕ್ಕೆ ಇಳಿದರು. ಆಕೆ ಸಹಾಯಕ್ಕೆ ಕೂಗಿದಾಗ ಕೇವಲ ಕೆಲವೇ ಮೀಟರುಗಳ ದೂರದಲ್ಲಿದ್ದ ಗಾರ್ಡ್‌ಗಳು ಅದನ್ನು ಉಪೇಕ್ಷಿಸಿದರು. ಹಾಸ್ಟೆಲಿಗೆ ಓಡಿ ಹೋಗಿ ತನ್ನ ಸಹಪಾಠಿಗಳೊಂದಿಗೆ ಬಂದು ಗಾರ್ಡ್‌ಗಳಿಗೆ ದೂರು ನೀಡಿದಾಗ ಅವರು ಆಕೆಯನ್ನೇ ದೂಷಿಸುತ್ತ, ಕತ್ತಲೆಯಲ್ಲಿ ಬರುವಾಗ ಜಾಗರೂಕತೆಯಿಂದಿರಬೇಕು ಎಂದು ಹೆಂಗಸರನ್ನು ದೂಷಿಸುವ ಮಾತುಗಳನ್ನಾಡಿದರು. ಹಾಸ್ಟೆಲ್ ವಾರ್ಡನ್‌ಗೆ ದೂರು ನೀಡಿದಾಗ ಘಟನೆಯ ಸಮಯವನ್ನು ಬದಲಿಸುವಂತೆ ಹೇಳಿದರು. ನಂತರ ವಿವಿಯ ಪ್ರಾಕ್ಟರ್ ಕೂಡ ವಿದ್ಯಾರ್ಥಿನಿಯರನ್ನೇ ದೂಷಿಸುವ ಮಾತುಗಳನ್ನಾಡಿದರು. ಇದನ್ನು ವಿರೋಧಿಸಿ ವಿದ್ಯಾರ್ಥಿನಿಯರು ವಿವಿ ಆಡಳಿತದ ವಿರುದ್ಧ ಪ್ರತಿಭಟನೆ ಆರಂಭಿಸಿದರು. ಪುರುಷ ವಿದ್ಯಾರ್ಥಿಗಳೂ ಬೆಂಬಲಕ್ಕೆ ಬಂದರು. ಲೈಂಗಿಕ ಕಿರುಕುಳದ ವಿರುದ್ಧ ಲಿಂಗ ಸಂವೇದೀಕರಣ ಸಮಿತಿ ಈ ವಿವಿಯಲ್ಲಿ ಇಲ್ಲದ್ದರಿಂದ ಅದನ್ನು ಕೂಡಲೇ ರಚಿಸಬೇಕು, ಮಹಿಳಾ ಗಾರ್ಡ್‌ಗಳನ್ನು ನೇಮಿಸಬೇಕು, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಇತ್ಯಾದಿ ಅವರ ಬೇಡಿಕೆಗಳು. ಇವು ಅತ್ಯಂತ ನ್ಯಾಯಯುತ ಬೇಡಿಕೆಗಳಾಗಿದ್ದರೂ ವಿವಿ ಆಡಳಿತ ಈ ಪ್ರತಿಭಟನೆಯನ್ನು ಉಪೇಕ್ಷಿಸಿಲು ಪ್ರಯತ್ನಿಸಿತು. ಪ್ರತಿಭಟನೆ ಮೂರನೇ ದಿನವೂ ಮುಂದುವರೆಯಿತು. ಉಪಕುಲಪತಿಗಳೂ ವಿದ್ಯಾರ್ಥಿಗಳ ಬೇಡಿಕೆಗಳನ್ನು ಕೇಳುವ ಬದಲು ರಾಜಕೀಯ ಹಸ್ತಕ್ಷೇಪದ ಮಾತಾಡಿದರು. ಮುಂದುವರೆದ ಪ್ರತಿಭಟನೆಯನ್ನು ಮುರಿಯಲು ಪೋಲಿಸ್ ದಮನವನ್ನು ಬಳಸಲಾಯಿತು. ಪೋಲಿಸ್ ಲಾಠೀ ಪ್ರಹಾರದಲ್ಲಿ ಹಲವು ವಿದ್ಯಾರ್ಥಿನಿಯರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.



ವಿದ್ಯಾರ್ಥಿನಿಯರ ಬೇಡಿಕೆಗಳತ್ತ ಗಮನ ಹರಿಸುವ ಬದಲು ಅವರು ಹಾಸ್ಟೆಲ್‌ನ ಸಮಯ–ನಿಯಮಗಳನ್ನು ಪಾಲಿಸುತ್ತಿಲ್ಲ(ವಿದ್ಯಾರ್ಥಿನಿಯರಿಗೆ ಇಲ್ಲಿ ಕರ್ಫ್ಯೂ ಇದೆ, ಅಂದರೆ ಸಂಜೆ ನಿರ್ದಿಷ್ಟ ಸಮಯದೊಳಗೆ ಹಾಸ್ಟೆಲ್ ಸೇರಬೇಕು) ಎಂದು ದೂಷಿಸುವುದು ವಿವಿ ಆಡಳಿತದ ಸಂವೇದನಾಶೂನ್ಯತೆಯನ್ನು ಪ್ರದರ್ಶಿಸುತ್ತದೆ, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ವಿವಿ ಆವರಣದಲ್ಲಿ ಭದ್ರತೆ ಒದಗಿಸುವುದು ಆಡಳಿತದ ಜವಾಬ್ದಾರಿ , ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದಿರುವ ಎಐಡಿಡಬ್ಲ್ಯುಎ "ವಿಶ್ವವಿದ್ಯಾಲಯದ ಅಧಿಕಾರಿಗಳ ಇಂತಹ ಪ್ರತಿಗಾಮಿ ಮತ್ತು ಪುರುಷಪ್ರಾಬಲ್ಯದ ನಿಲುವು ಸಂಪ್ರದಾಯಶರಣ ಶಕ್ತಿಗಳಲ್ಲಿ ಧೈರ್ಯತುಂಬುವುದನ್ನು ತೋರಿಸುತ್ತದೆ, ಇದಕ್ಕೆ ಬಿಜೆಪಿ ನೇತೃತ್ವದ ಉತ್ತರಪ್ರದೇಶ ಸರಕಾರದಿಂದ

ಪುಟ 11 ನೋಡಿ

ಕರ್ನಾಟಕದಲ್ಲಿ ಚುನಾವಣೆ ಬಿಸಿಏರುತ್ತಿದೆ

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ಕಾವು ತೀವ್ರವಾಗಿ ಏರುತ್ತಿದೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಚುನಾವಣಾ ರಣತಂತ್ರದಲ್ಲಿ ಒಂದನ್ನೊಂದು ಹಿಮ್ಮೆಟ್ಟಿಸಲು ಹವಣಿಸುತ್ತಿವೆ. ಮೂರೂ ಪಕ್ಷಗಳು ಕೇಡರ್ ಕಾರ್ಯಾಚರಣೆಗೆ ಇಳಿದಿದ್ದು ಮತಗಟ್ಟೆ ಮಟ್ಟದ ಸಮಿತಿಗಳನ್ನು ರಚಿಸಿ ಕ್ರಿಯಾಶೀಲಗೊಳಿಸಲು ಮುಂದಾಗಿವೆ.

ಕಾಂಗ್ರೆಸ್–ಬಿಜೆಪಿ ಸಮರ:

ಎರಡೂ ಪಕ್ಷಗಳ ನಡುವೆ ಈಗಾಗಲೇ ತೀವ್ರ ಪೈಪೋಟಿ ಉಂಟಾಗಿದೆ. ಚುನಾವಣೆ ಹತ್ತಿರ ಬಂದಂತೆ ಅದು ಇನ್ನೂ ಹೆಚ್ಚಾಗುವ ಸಾಧ್ಯತೆಗಳಿವೆ. ನಂಜನಗೂಡು, ಗುಂಡ್ಲುಪೇಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ್ದು ಬಿಜೆಪಿಯನ್ನು ಸಾಕಷ್ಟು ಕೆರಳಿಸಿತ್ತು. ಈಗ ಎರಡೂ ಪಕ್ಷಗಳು ಪರಸ್ಪರ ಕೆಸರೆರಚಾಟದಲ್ಲಿ ಮುಳುಗಿದ್ದರೆ ಪಕ್ಷಗಳ ನಾಯಕರು ಕೀಳು ಅಭಿರುಚಿಯ ಪದಪುಂಜಗಳನ್ನು ಬಳಸುತ್ತಾ ಆರೋಪ ಪ್ರತ್ಯಾರೋಪಗಳಲ್ಲಿ ತೊಡಗಿದ್ದಾರೆ. ರಾಜ್ಯ ಕಾಂಗ್ರೆಸ್ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಲು ಕೇಂದ್ರ ಬಿಜೆಪಿ ಸರ್ಕಾರ ಆದಾಯ ತೆರಿಗೆ ಇಲಾಖೆಯಿಂದ ಧಾಳಿ ನಡೆಸುತ್ತಿದ್ದರೆ ರಾಜ್ಯ ಸರ್ಕಾರ ಬಿಜೆಪಿ ಮುಖಂಡರಿಗೆ ಕಿರುಕುಳ ನೀಡಲು ಎಸಿಬಿಯನ್ನು (ಭ್ರಷ್ಟಾಚಾರ ನಿಗ್ರಹ ದಳ) ಬಳಸುತ್ತಿದೆ. ಸೇಡಿನ ರಾಜಕೀಯದ ಈ ವಿದ್ಯಮಾನ ಆತಂಕ ಹುಟ್ಟಿಸುತ್ತದೆ. ಪ್ರಧಾನಿ ಮೋದಿ 'ನವ ಭಾರತ' ಕಲ್ಪನೆಯನ್ನು ತೇಲಿ ಬಿಡುತ್ತಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ನವ ಕರ್ನಾಟಕ'ದ ಕನಸನ್ನು ಬಿತ್ತುಲು ಮುಂದಾಗಿದ್ದಾರೆ. ಕೇಂದ್ರ ಸರ್ಕಾರದ 'ಉಜ್ವಲ' ಯೋಜನೆ ಮತ್ತು ರಾಜ್ಯದ ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಗಳ ನಡುವೆ ಸಮರವೇ ನಡೆದಿದೆ.

'ಮನೆ ಮನೆಗೆ ಕಾಂಗ್ರೆಸ್' ಅಭಿಯಾನ:

ರಾಜ್ಯದಲ್ಲಿ ಶತಾಯ ಗತಾಯ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದು ಛಲತೊಟ್ಟಿರುವ ಕಾಂಗ್ರೆಸ್, ಸಿದ್ದರಾಮಯ್ಯ ಸರ್ಕಾರದ ಸಾಧನೆಗಳನ್ನು ಜನರಿಗೆ ಮನವರಿಕೆ ಮಾಡಲು 'ಮನೆ ಮನೆಗೆ ಕಾಂಗ್ರೆಸ್' ಎಂಬ ಅಭಿಯಾನವನ್ನು ಆರಂಭಿಸಿದೆ. ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಪ್ರತಿ ಮತಗಟ್ಟೆಯಲ್ಲಿನ ಎಲ್ಲ ಮನೆಗಳಿಗೆ ತೆರಳಿ ಸರ್ಕಾರದ ಸಾಧನೆಗಳ ಪುಸ್ತಕಗಳನ್ನು ವಿತರಿಸುತ್ತಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಏಕಕಾಲಕ್ಕೆ ಆರಂಭಿಸಲಾದ ಅಭಿಯಾನ ಎಲ್ಲ 54 ಸಾವಿರ ಮತಗಟ್ಟೆಗಳನ್ನು ತಲುಪಿ ಚುನಾವಣಾ ಮುನ್ನ ರಾಜ್ಯದ ಜನತೆಗೆ ನೀಡಿದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಲಾಗಿದೆ ಎಂದು ಮನವರಿಕೆ ಮಾಡಲು ಗಂಭೀರ ಪ್ರಯತ್ನ ನಡೆಸಲಾಗುತ್ತಿದೆ. ಕಾಂಗ್ರೆಸ್ ಈಗಾಗಲೇ 28 ಸಾವಿರ ಮತಗಟ್ಟೆ ಸಮಿತಿಗಳನ್ನು ರಚನೆ ಮಾಡಿದ್ದು ಶೇ. 48 ರಷ್ಟು ಸಮಿತಿಗಳ ರಚನೆ ಬಾಕಿ ಇದೆ ಎನ್ನಲಾಗುತ್ತಿದೆ. ಇದರ ಜತೆಯಲ್ಲಿ ಬೃಹತ್ ಸಮಾವೇಶಗಳನ್ನು, ಜಾತಿ ಆಧಾರಿತ ಸಮಾರಂಭಗಳನ್ನು ಏರ್ಪಡಿಸಿ ಮತದಾರರನ್ನು ಸೆಳೆಯುವ ಪ್ರಯತ್ನ ನಡೆದಿದೆ. ವಾಟ್ಸ್‌ಆ್ಯಪ್, ಫೇಸ್‌ಬುಕ್ ಹಾಗೂ ಟ್ವಿಟರ್ ಮೂಲಕ ಸಾಮಾಜಿಕ ಜಾಲತಾಣವನ್ನು ಬಳಕೆಮಾಡಿ ದೊಡ್ಡ ಪ್ರಮಾಣದಲ್ಲಿ ಮತದಾರರನ್ನು ಮುಟ್ಟಲು ಸಹ ಕಾಂಗ್ರೆಸ್ ತಯಾರಾಗುತ್ತಿದೆ. ಅಲ್ಪ ಸಂಖ್ಯಾತರನ್ನು ದಲಿತರನ್ನು ಹೆಚ್ಚೆಚ್ಚು ಒಲಿಸಿಕೊಳ್ಳಲು ವಿಶೇಷ ಗಮನ ನೀಡುತ್ತಿರುವುದು ಕಂಡುಬರುತ್ತಿದೆ.

ಕಾಂಗ್ರೆಸ್‌ನಲ್ಲಿ ಮುಂದುವರೆದ ಮುಸುಕಿನ ಗುದ್ದಾಟ:

ಮುಖ್ಯ ಮಂತ್ರಿ ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ನಾನೇ ಎಂದು ಬೀಗುತ್ತಾ ರಾಜ್ಯದೆಲ್ಲೆಡೆ ಉತ್ಸಾಹದಿಂದ ಓಡಾಡುತ್ತಾ ಇರುವಾಗ ರಾಜ್ಯ ಕಾಂಗ್ರೆಸ್‌ನಲ್ಲಿ ಮುಸುಕಿನ ಗುದ್ದಾಟ ಒಳಗೊಳಗೆ ಹೊಗೆಯಾಡುತ್ತಾ ಇದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕೆ.ಸಿ. ವೇಣುಗೋಪಾಲ ಆಂತರಿಕ ವಿವಾದಗಳಿಗೆ ತೆರೆ ಎಳೆಯಲು ಪ್ರಯತ್ನಿಸಿದ್ದರೂ ಸಚಿವ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ತಮ್ಮನ್ನು ನಿರ್ಲಕ್ಷಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಜಿ. ಪರಮೇಶ್ವರ್ ಹಾಗೂ ಸಚಿವ ಸಂಪುಟದ ಪ್ರಭಾವಿ ಮಂತ್ರಿ ಡಿ.ಕೆ. ಶಿವಕುಮಾರ್ ಬೇಸರಗೊಂಡಿರುವುದು ಗುಟ್ಟಿನ ವಿಷಯವಾಗಿ ಉಳಿದಿಲ್ಲ. ಜೆಡಿಎಸ್‌ನ ಭಿನ್ನಮತಿಯರನ್ನು ಪಕ್ಷಕ್ಕೆ ಸೇರಿಸಿಕೊಂಡು ಅವರಿಗೆ ಟಿಕೆಟ್ ಕೊಡುವ ವಿಚಾರದಲ್ಲೂ ಪಕ್ಷದೊಳಗೆ ಅಸಮಾಧಾನ ವ್ಯಕ್ತವಾಗಿದೆ.

ಬಿಜೆಪಿಯ ಆಕ್ರಮಣಕಾರಿ ನಡೆ:

ರಾಜ್ಯದ ಬಿಜೆಪಿ, ಸಂಘ ಪರಿವಾರದ ಸಂಪೂರ್ಣ ಬೆಂಬಲದೊಂದಿಗೆ, ಕೋಮು ಗಲಭೆಗಳನ್ನು ಸೃಷ್ಟಿಸಿ ರಾಜಕೀಯ ಲಾಭ ಪಡೆಯುವ ತನ್ನ ರಣತಂತ್ರದೊಂದಿಗೆ ಮುನ್ನುಗ್ಗುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ ಹಾಗೂ ರಾಜ್ಯದ ಇತರ ಕಡೆಗಳಲ್ಲಿ ಗೋರಕ್ಷಕರ ಹಾವಳಿ ಅವ್ಯಾಹತವಾಗಿ ಮುಂದುವರೆದಿದೆ. ಗೋಮಾಂಸದ ಅಡುಗೆ ತಯಾರು ಮಾಡಿದ್ದಾರೆ ಎಂದು ಆರೋಪಿಸಿ ಅತ್ಯಂತ ದುರ್ಬಲ ದಲಿತ ಸಮುದಾಯಕ್ಕೆ ಸೇರಿದ ಕೊರಗರ ಮನೆಯ ಮೇಲೆ ಧಾಳಿ ಮಾಡಲಾಗಿದೆ. ಬಳ್ಳಾರಿ, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಕ್ರಿಶ್ಚಿಯನ್ ಪ್ರಾರ್ಥನಾಲಯಗಳ ಮೇಲೆ ಧಾಳಿ ಮಾಡುವುದನ್ನು ಮತ್ತೆ ಆರಂಭಿಸಲಾಗಿದೆ.

ದ.ಕ. ಜಿಲ್ಲೆಯಲ್ಲಿ ಆರೆಸ್ಸೆಸ್ ಕಾರ್ಯಕರ್ತನೊಬ್ಬನ ಕೊಲೆಯಾಗಿದ್ದನ್ನು ನೆಪಮಾಡಿ, ಕೊಲೆಗಡುಕರನ್ನು ಬಂಧಿಸುವಂತೆ ಹಾಗೂ ಅರಣ್ಯ ಮಂತ್ರಿ ರಮಾನಾಥ ರೈ ರಾಜಿನಾಮೆಗೆ ಒತ್ತಾಯಿಸಿ 'ಮಂಗಳೂರು ಚಲೋ' ಏರ್ಪಡಿಸಿ 10 ಸಾವಿರ ಬೈಕ್‌ಗಳ ರ‍್ಯಾಲಿ ನಡೆಸಲು ಸಿದ್ಧತೆ ಮಾಡಲಾಗಿತ್ತು. ರ‍್ಯಾಲಿಯ ನೆಪದಲ್ಲಿ ಮಂಗಳೂರು ನಗರದಲ್ಲಿ ಗಲಭೆ ಉಂಟುಮಾಡಿ ರಾಜ್ಯಾದ್ಯಂತ ಹಿಂಸಾತ್ಮಕ ಪ್ರತಿಭಟನೆಗೆ ಸಂಘ ಪರಿವಾರ ಸಜ್ಜಾಗಿತ್ತು. ಆದರೆ ರಾಜ್ಯ ಸರ್ಕಾರ ಕೊನೆಗೂ ಇದರ ಅಪಾಯವನ್ನು ಮನಗಂಡು ರ‍್ಯಾಲಿಯನ್ನು ನಿಷೇಧಿಸಲು ದೃಢವಾದ ಕ್ರಮಗಳನ್ನು ಕೈಗೊಂಡದ್ದು ಸ್ವಾಗತಾರ್ಹವಾಗಿದೆ. ಇದರಿಂದ ಭಾರೀ ಅನಾಹುತ ತಪ್ಪಿದಂತಾಗಿದೆ. ಸಿಪಿಐ(ಎಂ) ಮತ್ತು ಇತರ ಪ್ರಗತಿಪರ ಶಕ್ತಿಗಳು ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆಸಿದ ಜನಜಾಗೃತಿ ಕಾರ್ಯಕ್ರಮಗಳಿಂದಾಗಿ ನಿರ್ಮಾಣವಾದ ಸಂಘ ಪರಿವಾರ ವಿರುದ್ಧದ ಜನಾಭಿಪ್ರಾಯದ ಬಲದಿಂದ ಸರ್ಕಾರ ಈ ದಿಟ್ಟ ಕ್ರಮ ಕೈಗೊಳ್ಳಲು ಸಾಧ್ಯವಾಯಿತು ಎನ್ನಬಹುದು. ಇತ್ತೀಚೆಗೆ ಬಿಜೆಪಿ ಅಖಿಲ ಭಾರತ ಅಧ್ಯಕ್ಷ ಅಮಿತ್ ಶಾ ಕರ್ನಾಟಕಕ್ಕೆ ಬಂದು ಬಿಜೆಪಿ ಕಾರ್ಯಕರ್ತರನ್ನು ಪ್ರಚೋದಿಸಿ ಹೋದ ನಂತರ ಸಂಘ ಪರಿವಾರದ ಪಡೆಗಳು ಹೆಚ್ಚು ಆಕ್ರಮಣಕಾರಿಯಾಗಿ ವರ್ತಿಸತೊಡಗಿವೆ. ಈಗ ಮತ್ತೆ ಮಂಗಳೂರಿನಲ್ಲಿ ಪಾದಯಾತ್ರೆ ನಡೆಸಲು ಅಮಿತ್ ಶಾ ಅವರನ್ನು ಕರೆತರುವ ಪ್ರಯತ್ನ ನಡೆದಿದೆ. ಭಟ್ಕಳ ಆತ್ಮಹತ್ಯೆ ಪ್ರಕರಣವೊಂದನ್ನು ಬಳಸಿಕೊಂಡು ಭಟ್ಕಳ ಚಲೋ ಮುಂತಾದವುಗಳ ಮೂಲಕ ಉತ್ತರ ಕನ್ನಡ ಜಿಲ್ಲೆಯಲ್ಲೂ ಕೋಮುದಂಗೆ ನಡೆಸಲು ಪ್ರಯತ್ನಿಸುತ್ತಿದೆ.

ಅಲ್ಪಸಂಖ್ಯಾತರ ಮೇಲೆ, ದಲಿತರ ಮೇಲೆ ಹಿಂಸಾತ್ಮಕ ಕೃತ್ಯಗಳನ್ನು ಎಸಗುವ ಮೂಲಕ ಬಹುಸಂಖ್ಯಾತರ ಹಾಗೂ ಮೇಲ್ಜಾತಿ ಮೇಲ್ವರ್ಗಗಳ ಮತ ಬ್ಯಾಂಕ್ ಬಲಪಡಿಸುವುದರ ಜತೆಯಲ್ಲಿ ಬಿಜೆಪಿ ತನ್ನ ಚುನಾವಣಾ ಕೆಲಸವನ್ನು ವ್ಯವಸ್ಥಿತವಾಗಿ ಯೋಜಿಸಿಕೊಂಡಿದೆ. ಸಾವಿರಾರು ಆರೆಸ್ಸೆಸ್ ಕಾರ್ಯಕರ್ತರನ್ನು ನಿಯೋಜಿಸಿ ಕೆಲಸಕ್ಕೆ ಹಚ್ಚಿದೆ. ಮತಗಟ್ಟೆ ಮಟ್ಟದಲ್ಲಿ ವ್ಯಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಿಕೊಂಡು ಪಕ್ಷದ ಸಂದೇಶವನ್ನು ವ್ಯವಸ್ಥಿತವಾಗಿ ಮತದಾರರಿಗೆ ತಲುಪಿಸುವ ಕೆಲಸ ನಡೆದಿದೆ. ಶೇ. 99 ರಷ್ಟು ಮತಗಟ್ಟೆಗಳಲ್ಲಿ ಈಗಾಗಲೇ ಮತಗಟ್ಟೆ ಸಮಿತಿಗಳನ್ನು ರಚಿಸಿ, ಮತಗಟ್ಟೆ ಏಜೆಂಟರನ್ನು ನೇಮಿಸಲಾಗಿದೆ ಹಾಗೂ ಪ್ರತಿಯೊಂದು ಮತಗಟ್ಟೆಗೆ 5 ಮಂದಿ ಆರೆಸ್ಸೆಸ್ ಕಾರ್ಯಕರ್ತರನ್ನು ನಿಯೋಜಿಸಲಾಗಿದೆ.

ಜಾತಿ ಆಧಾರದಲ್ಲಿ ಮತದಾರರನ್ನು ಸೆಳೆಯಲು ತಂತ್ರಗಳನ್ನು ರೂಪಿಸಲಾಗುತ್ತಿದೆ. ರಾಜ್ಯ ಅಧ್ಯಕ್ಷ ಬಿ.ಎಸ್. ಯಡ್ಡಿಯೂರಪ್ಪನವರು ದಲಿತರ ಮನೆಗಳಲ್ಲಿ ಊಟ ಮಾಡಲು ಮುಂದಾಗಿರುವುದು ಅಂತಹ ಒಂದು ಗಿಮಿಕ್ ಆಗಿದೆ. ದ.ಕ. ಜಿಲ್ಲೆಯಲ್ಲಿ ಬಂಟ್ಸ್ ಜಾತಿಗೆ ಸೇರಿದ ಮೋಹನ್ ಆಳ್ವಾರವರ ಕಾಲೇಜಿನ ವಿದ್ಯಾರ್ಥಿನಿ ಕಾವ್ಯಾ ಹತ್ಯೆಗೀಡಾದಾಗ ಬಿಜೆಪಿ ಬಂಟ್ಸ್ ಬೆಂಬಲಕ್ಕೆ ನಿಂತಿತು. ಮುಸಲ್ಮಾನನೊಬ್ಬ ಕೋಟಿ ಚೆನ್ನಯ್ಯ ಅವರ ತಾಯಿಗೆ ಅವಮಾನ ಮಾಡಿದ್ದಾನೆ ಎಂದು ಆರೋಪಿಸಿ ಅದರ ವಿರುದ್ಧ ಬಿಲ್ಲವ ಜಾತಿಯವರನ್ನು ಒಗ್ಗೂಡಿಸಲು ಬಿಜೆಪಿ ಮುಂದಾಯಿತು.

ರಾಜ್ಯ ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಲು ನವೆಂಬರ್ 2 ರಿಂದ 70–75 ದಿನಗಳ ಕಾಲ ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸುವ ಮತ್ತು ಕೊನೆಯಲ್ಲಿ ಬೆಂಗಳೂರಿನಲ್ಲಿ ಸಮಾರೋಪಗೊಳ್ಳುವ 'ಪರಿವರ್ತನಾ ಯಾತ್ರೆ' ಅನ್ನು ಹಮ್ಮಿಕೊಳ್ಳಲಾಗಿದೆ. ತುಮಕೂರಿನಲ್ಲಿ ಉದ್ಘಾಟನೆಗೊಳ್ಳಲಿರುವ ಈ ಕಾರ್ಯಕ್ರಮ ದಲ್ಲಿ ಪ್ರಧಾನಿ ಮೋದಿ ಹಾಗೂ ಅಖಿಲ ಭಾರತ ಅಧ್ಯಕ್ಷ ಅಮಿತ್ ಶಾ ಪಾಲ್ಗೊಳ್ಳಲಿದ್ದಾರೆ. ಇದಕ್ಕೂ ಮುನ್ನ ಜಿಲ್ಲಾ ಸಮಾವೇಶಗಳನ್ನು ನಡೆಸಿ ಮುಖ್ಯ ಮಂತ್ರಿ ಹಾಗೂ ಕೆಲವು ಪ್ರಮುಖ ಮಂತ್ರಿಗಳ ಭ್ರಷ್ಟಾಚಾರದ ಹಗರಣಗಳ ದಾಖಲೆಗಳೊಂದಿಗೆ 'ಚಾರ್ಜ್‌ಶೀಟ್' ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಲಾಗುತ್ತಿದೆ. ಮಹದಾಯಿ ಬಿಕ್ಕಟ್ಟಿನ ವಿಷಯದಲ್ಲಿ ಇದುವರೆಗೂ ಮಧ್ಯ ಪ್ರವೇಶಿಸಲು ಹಿಂದೇಟು ಹಾಕುತ್ತಿದ್ದ ಬಿಜೆಪಿ ಈಗ ಚುನಾವಣಾ ಲಾಭದ ದೃಷ್ಟಿಯಿಂದ ಗೋವಾ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಜತೆಗೆ ಮಾತುಕತೆ ನಡೆಸಲು ಮುಂದಾಗಿದೆ. ಮೋಹನ್ ಪರಿಕ್ಕರ್ ಮಾತ್ರ ಆ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ. ರಾಜ್ಯದಲ್ಲಿ 150 ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಗುರಿ ಇಟ್ಟುಕೊಂಡಿರುವ ಬಿಜೆಪಿ ಉತ್ತರ ಕರ್ನಾಟಕದಲ್ಲಿ 75 ಸ್ಥಾನ ಗೆಲ್ಲುವ ತಂತ್ರಗಾರಿಕೆಯ ಭಾಗವಾಗಿ ಯಡಿಯೂರಪ್ಪ ಉತ್ತರ ಕರ್ನಾಟಕದಿಂದ ಸ್ಪರ್ಧಿಸುತ್ತಾರೆ ಎನ್ನಲಾಗುತ್ತಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಹೆಚ್ಚುತ್ತಿರುವ ಆರೆಸ್ಸೆಸ್ ಹಿಡಿತ:

ಇದುವರೆಗೆ ರಿಮೋಟ್ ಕಂಟ್ರೋಲ್‌ನಂತಿದ್ದ ಆರೆಸ್ಸೆಸ್ ಈಗ ಬಿಜೆಪಿಯ ಮೇಲೆ ತನ್ನ ಹಿಡಿತವನ್ನು ಬಹಿರಂಗವಾಗಿ ಬಿಗಿಗೊಳಿಸಿದೆ. ಕರ್ನಾಟಕಕ್ಕೆ ಭೇಟಿ ನೀಡಿದ ಅಮಿತ್ ಶಾ ಆರೆಸ್ಸೆಸ್ ಕಾರ್ಯಾಲಯಕ್ಕೆ ಭೇಟಿ ನೀಡಿ ಚರ್ಚಿಸಿದ್ದಾರೆ. ಈ ನಡುವೆ ಯಡಿಯೂರಪ್ಪ ಸಹ ಆರೆಸ್ಸೆಸ್ ಕಛೇರಿಗೆ ಹೋಗಿ ಮಾರ್ಗದರ್ಶನ ಪಡೆದು ಬಂದಿದ್ದಾರೆ. ಚುನಾವಣಾ ಉಸ್ತುವಾರಿ ಆರೆಸ್ಸೆಸ್ ಮುಖಂಡ ಜಾವ್ಡೇಕರ್ ಆಗಮಿಸಿದಾಗ ಆರೆಸ್ಸೆಸ್ ಮತ್ತು ಬಿಜೆಪಿ ಸಭೆ ನಡೆಸಿ ಬಿಜೆಪಿಯಲ್ಲಿ ಯಾವುದೇ ತೀರ್ಮಾನವನ್ನು ಕೈಗೊಳ್ಳುವಾಗ ಆರೆಸ್ಸೆಸ್ ಅನುಮತಿ ಪಡೆಯಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಬಿಜೆಪಿಗೆ ಹಿಂದುಗಳ ಮತಗಳನ್ನು ಕೊಡಿಸುವುದು ಆರೆಸ್ಸೆಸ್ ಜವಾಬ್ದಾರಿಯಾಗಿದೆ ಎಂದು ಹೇಳಿದ ಅವರು ದಲಿತ ಮತ್ತು ಅಲ್ಪ ಸಂಖ್ಯಾತರ ಮತಗಳನ್ನು ಪಡೆಯಲು ಪ್ರಯತ್ನಿಸುವಂತೆ ಬಿಜೆಪಿಗೆ ಆದೇಶ ನೀಡಿದ್ದಾರೆ. ಕಟ್ಟಾ ಆರೆಸ್ಸೆಸ್ ಕಾರ್ಯಕರ್ತನಾದ ಅನಂತಕುಮಾರ್ ಹೆಗ್ಡೆಯವರನ್ನು ಮಂತ್ರಿ ಮಾಡುವ ಮೂಲಕ ಬಿಜೆಪಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ.

ಬಿಜೆಪಿಯಲ್ಲಿಯೂ ಹೊಗೆಯಾಡುತ್ತಿರುವ ಅಸಮಾಧಾನ:

ಬಿಜೆಪಿಯಲ್ಲಿ ಯಡಿಯೂರಪ್ಪ ಮತ್ತು ಈಶ್ವರಪ್ಪ ನಡುವಿನ ವೈಮನಸ್ಸು ಇನ್ನೂ ಸಂಪೂರ್ಣವಾಗಿ ಶಮನವಾಗಿಲ್ಲ. ಮತಗಟ್ಟೆ ನಿಯಂತ್ರಣಾ ಸಮಿತಿಗಳ ಸಭೆಯಲ್ಲಿ ಹಲವಾರು ಪ್ರಮುಖರು ಭಾಗವಹಿಸಿರಲಿಲ್ಲ. ಇನ್ನು ಕೆಲವರಿಗೆ ಸಭೆಗೆ ಬಾರದಿರಲು ಸೂಚಿಸಲಾಗಿತ್ತು. ಅಮಿತ್ ಶಾ ಬಂದು ಹೋದ ಬಳಿಕ ಆರೆಸ್ಸೆಸ್ ಕಾರ್ಯಕರ್ತ ಬಿ.ಎಲ್. ಸಂತೋಷ್ ಅವರಿಗೆ ಮತ್ತೆ ಪಕ್ಷದಲ್ಲಿ ಪ್ರಾಮುಖ್ಯತೆ ನೀಡಿರುವುದು ಅಸಮಾಧಾನಕ್ಕೆ ಒಂದು ಕಾರಣವಾಗಿದೆ ಎನ್ನಲಾಗುತ್ತಿದೆ. ಅನಂತಕುಮಾರ್ ಹೆಗ್ಡೆಗೆ ಕೇಂದ್ರದಲ್ಲಿ ಮಂತ್ರಿ ಪದವಿ ಸಿಕ್ಕಿದ್ದು ಮಂತ್ರಿಗಿರಿಯ ಇತರ ಆಕಾಂಕ್ಷಿಗಳಲ್ಲಿ ಅಸಮಾಧಾನ ಉಂಟುಮಾಡಿದೆ.

ಅಧಿಕಾರದ ಕನಸು ಕಾಣುತ್ತಿರುವ ಜೆಡಿಎಸ್:

ಮೇಲೆ ಉಲ್ಲೇಖಿಸಲಾದ ಎರಡು ಪ್ರಮುಖ ಪಕ್ಷಗಳಿಗಿಂತ ಸಾಕಷ್ಟು ಮೊದಲೇ ಜೆಡಿಎಸ್ ತನ್ನ ಚುನಾವಣಾ ಕೆಲಸವನ್ನು ಆರಂಭಿಸಿದೆ. ಉತ್ತರ ಕರ್ನಾಟಕದಲ್ಲಿ ಪಕ್ಷದ ಪ್ರಭಾವವನ್ನು ಹೆಚ್ಚಿಸಲು ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ. ಪಕ್ಷದ ಅಖಿಲ ಭಾರತ ಅಧ್ಯಕ್ಷರಾದ ಹೆಚ್.ಡಿ. ದೇವೇಗೌಡರು ಸ್ವತಃ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಸಂಚರಿಸಿ ಕಾರ್ಯಕರ್ತರ ಸಭೆಗಳನ್ನು ನಡೆಸಿದ್ದಾರೆ. ಇತರ ಪಕ್ಷಗಳಂತೆ ಸಾಮಾಜಿಕ ಜಾಲ ತಾಣವನ್ನು ಬಳಕೆ ಮಾಡಲು ಆದ್ಯತೆ ನೀಡಲಾಗುತ್ತಿದೆ. ಮತಗಟ್ಟೆ ಮಟ್ಟದ ಸಮಿತಿಗಳನ್ನು ರಚಿಸುವ ನಿಟ್ಟಿನಲ್ಲಿ ಜೆಡಿಎಸ್ ಸಹ ಕಾರ್ಯೋನ್ಮುಖವಾಗಿದೆ.

ಶಾಸಕ ಜಮೀರ್‌ಖಾನ್ ನೇತೃತ್ವದಲ್ಲಿ ಕೆಲವು ಶಾಸಕರು ಪಕ್ಷದೊಳಗೆ ಬಂಡಾಯ ಹೂಡಿದ್ದು ಪಕ್ಷಕ್ಕೆ ದೊಡ್ಡ ಹಿನ್ನೆಡೆಯಾಗಿದೆ. ಪಕ್ಷದ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವುದು ಪಕ್ಷದ ಚಟುವಟಿಕೆಗಳ ಮೇಲೆ ಪ್ರಭಾವ ಬೀರದೆ ಇರಲಾರದು.

ಎಡ ಪಕ್ಷಗಳ ಮಧ್ಯಪ್ರವೇಶ:

ಕಾಂಗ್ರೆಸ್, ಬಿಜೆಪಿ ಮುಂತಾದ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲಲು ಬೇಕಾದ ತಂತ್ರಗಾರಿಕೆ ರೂಪಿಸುವುದರಲ್ಲಿ ಮುಳುಗಿದ್ದರೆ ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಜನರನ್ನು ಬಾಧಿಸುತ್ತಿರುವ ಆರ್ಥಿಕ, ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟಗಳನ್ನು ರೂಪಿಸುತ್ತಾ ಎಡಪ್ರಜಾಸತ್ತಾತ್ಮಕ ಪರ್ಯಾಯವನ್ನು ಜನತೆಯ ಮುಂದಿಡುತ್ತಿವೆ. ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧದ ಅತೃಪ್ತಿಯನ್ನು ಬಳಸಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಹೋರಾಟಗಳ ಅನುಭವ ತೋರಿಸುತ್ತದೆ.

ಚುನಾವಣಾ ಹೋರಾಟಕ್ಕೆ ಎಡ ಪಕ್ಷಗಳ ಸಿದ್ಧತೆ ಇನ್ನೂ ಚುರುಕಾಗಬೇಕಾಗಿದೆ. ರಾಜಕೀಯ ಸಮಾವೇಶಗಳು, ಕಾರ್ಯಕರ್ತರ ತರಬೇತಿ, ಸ್ಥಳೀಯ ಹೋರಾಟಗಳು, ಮತಗಟ್ಟೆ ಮಟ್ಟದ ಸಮಿತಿಗಳ ರಚನೆ, ನಿಧಿ ಸಂಗ್ರಹ, ಪೂರ್ಣಕಾಲದ ಕಾರ್ಯಕರ್ತರ ನೇಮಕ ಇತ್ಯಾದಿ ಕೆಲಸಗಳಿಗೆ ಆದ್ಯತೆ ನೀಡಬೇಕಾಗಿದೆ. ●



ಕರಾವಳಿಯಲ್ಲಿ ಡಿವೈಎಫ್ಐ ಪ್ರತಿಭಟನೆಗಳು

ತಳ್ಳುಗಾಡಿಗೆ ಮೋಟಾರ್‌ಬೈಕ್ ಕಟ್ಟಿ ಡಿವೈಎಫ್ಐ ಪ್ರತಿಭಟನೆ



ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕೇಂದ್ರ ಸರಕಾರ ಪದೇ ಪದೇ ಏರಿಸುತ್ತಿರುವುದರ ವಿರುದ್ಧ ಡಿವೈಎಫ್ಐ ನೇತೃತ್ವದಲ್ಲಿ ಸಪ್ಟೆಂಬರ್ 26 ರಂದು ಮಂಗಳೂರಿನಲ್ಲಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಮೋಟಾರ್ ಬೈಕುಗಳನ್ನು ತಳ್ಳುಗಾಡಿಗೆ ಕಟ್ಟಿ ಎಳೆಯುವುದರ ಮೂಲಕ ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು.

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಮುಖವಾಗಿದೆ. ಆದರೆ ಕೇಂದ್ರದ ಎನ್‌ಡಿಎ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಪದೇ ಪದೇ ಏರಿಸುತ್ತಾ ದೇಶದ ಜನರಿಗೆ ಮೋಸ ಮಾಡುತ್ತಿದೆ ಎಂಬುದಾಗಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಟೀಕಿಸಿದರು.

ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಇಳಿಕೆ ಮಾಡುವುದಾಗಿ ಭರವಸೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ಅಧಿಕಾರಕ್ಕೆ ಬಂದು ಮೂರು ವರ್ಷ ದಾಟಿದ್ದರೂ ಯಾವುದೇ ಬದಲಾವಣೆ ಆಗಿಲ್ಲ ಎಂಬುದಾಗಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಟೀಕಿಸಿದರು.

ಸಿಐಟಿಯು ಮುಖಂಡ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ಮುಖಂಡರಾದ ನಿತಿನ್ ಕುತ್ತಾರ್, ರಫೀಕ್ ಹರೇಕಳ, ನೌಶಾದ್ ಬೆಂಗ್ರೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹರೇಕಳ ಗ್ರಾಮ ಪಂಚಾಯತ್ ಎದುರು ನಿವೇಶನ ಕೋರಿ ಪ್ರತಿಭಟನೆ:

ನಿವೇಶನ ರಹಿತರ ಪಟ್ಟಿ ಮಾಡುವಲ್ಲಿ ಹರೇಕಳ ಗ್ರಾಮ ಪಂಚಾಯತ್ ನಿರ್ಲಕ್ಷ್ಯ ತೋರಿದೆ ಎಂದು ಆರೋಪಿಸಿ ಡಿವೈಎಫ್ಐ ಸ್ಥಳೀಯ ಘಟಕಗಳ ನೇತೃತ್ವದಲ್ಲಿ ಸಪ್ಟೆಂಬರ್ 25 ರಂದು ಹರೇಕಳ ಗ್ರಾಮ ಪಂಚಾಯತ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ನಿವೇಶನ ರಹಿತರಿಗೆ ನಿವೇಶನ ಒದಗಿಸುವ ಬಗ್ಗೆ ಚುನಾವಣೆ ವೇಳೆ ಆಶ್ವಾಸನೆ ನೀಡಿದ ಜನಪ್ರತಿನಿಧಿಗಳೂ ಆಸಕ್ತರಾಗಿಲ್ಲ, ಮಾತ್ರವಲ್ಲ ಗ್ರಾ.ಪಂ.ಅಧಿಕಾರಿಗಳೂ ಕಾರ್ಯಪ್ರವೃತ್ತವಾಗಿಲ್ಲ ಎಂಬುದಾಗಿ ಡಿವೈಎಫ್ಐ ಮುಖಂಡರು ಟೀಕಿಸಿದರು.

ಪ್ರತಿಭಟಕಾರರನ್ನುದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಸ್ಥಳೀಯ ಡಿವೈಎಫ್ಐ ಮುಖಂಡರಾದ ರಫೀಕ್ ಹರೇಕಳ, ಸುನಿಲ್ ತೇವುಲ, ಗ್ರಾ.ಪಂ.ಸದಸ್ಯ ಅಶ್ರಫ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮನವಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ಸಲ್ಲಿಸಲಾಯಿತು.

– ವಾಸುದೇವ ಉಚ್ಚಿಲ



ಬೈಂದೂರು

ಬೈಂದೂರು ಮನೆ ನಿವೇಶನ ರಹಿತರಿಂದ ಅರ್ಜಿ ಸ್ವೀಕಾರ ಕಾರ್ಯಕ್ರಮಕ್ಕೆ ಚಾಲನೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಮತ್ತು ಬೈಂದೂರು ತಗ್ಗರ್ಸೆ ಹಾಗೂ ಯಡ್ತರೆ ಗ್ರಾಮಗಳ ನಿವೇಶನ ರಹಿತರ ಹೋರಾಟ ಸಮಿತಿಗಳ ನೇತೃತ್ವದಲ್ಲಿ ಬೈಂದೂರು ತಗ್ಗರ್ಸೆ ಹಾಗೂ ಯಡ್ತರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡನಿವೇಶನ ರಹಿತರಿಂದ ಮನೆ ನಿವೇಶನ ಮಂಜೂರಾತಿ ಕೋರಿ ಸ್ವೀಕರಿಸಿದ ಅರ್ಜಿಗಳನ್ನು ಯಡ್ತರೆ ಗ್ರಾಮ ಪಂಚಾಯತ್ ಕಛೇರಿಗೆ ದಿನಾಂಕ 28 ಸೆಪ್ಟೆಂಬರ್ 2017 ಗುರುವಾರ ಬೆಳಿಗ್ಗೆ 11 ಗಂಟೆಗೆ, ಹಾಗೂ ಬೈಂದೂರು, ತಗ್ಗರ್ಸೆ ಗ್ರಾಮ ಪಂಚಾಯತ್ ಕಛೇರಿಗೆ ಮಧ್ಯಾಹ್ನ 3 ಗಂಟೆಗೆ ಸಾಮೂಹಿಕವಾಗಿ ಹಸ್ತಾಂತರಿಸುವ ಕಾರ್ಯಕ್ರಮದ ಅಂಗವಾಗಿ, ಮನೆ ನಿವೇಶನ ರಹಿತರಿಂದ ಅರ್ಜಿ ಸ್ವೀಕಾರ ಕಾರ್ಯಕ್ರಮ ಉದ್ಘಾಟನೆಯನ್ನು ಬೈಂದೂರು ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ಗಣೇಶ ತೊಂಡೆಮಕ್ಕಿ ನಿವೇಶನ ರಹಿತರ ಅರ್ಜಿ ಸ್ವೀಕರಿಸುವುದರ ಮೂಲಕ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಉಡುಪಿ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಕುಂದಾಪುರ ತಾಲೂಕು ಸಮಿತಿ ಕಾರ್ಯದರ್ಶಿ ನಾಗರತ್ನ ನಾಡ ಮುಖಂಡರಾದ ರಾಜೀವ ಪಡುಕೋಣೆ, ಪದ್ಮಾವತಿ ಶೆಟ್ಟಿ ಗಣೇಶ ಮೊಗವೀರ, ಸಮ್ಮದ್ ತೊಂಡೆಮಕ್ಕಿ ರಮೇಶ ಮೊಗವೀರ, ನಾಗೇಂದ್ರ ಪೂಜಾರಿ, ದಿನಕರ ಪೂಜಾರಿ ಉದ್ದಬೆಟ್ಟು ಗೋವಿಂದ ಪೂಜಾರಿ ಓಣಿಮನೆ, ಮಂಜುನಾಥ ಪೂಜಾರಿ, ಸಿದ್ದನಹಿತ್ಲು, ಜಯಲಕ್ಷ್ಮೀ ಯಡ್ತರೆ ಜಟ್ಟಿ ಪೂಜಾರಿ ಯಡ್ತರೆ, ಥೋಮಸ್ ಡಯಾಸ್ ಯಡ್ತರೆ ಕುಶಲ ಹಂಗಳೂರು ಶ್ಯಾಮಲ ಗುಜ್ಜಾಡಿ ಉಪಸ್ಥಿತರಿದ್ದರು.

– ವೆಂಕಟೇಶ ಕೋಣಿ

ಸರ್ಕಾರಿ ಬಸ್‌ಗೆ ಆಗ್ರಹಿಸಿ ಮೊಂಟೆಪದವಿನಲ್ಲಿ ಪ್ರತಿಭಟನೆ:

ಮೊಂಟೆಪದವು ಮಾರ್ಗವಾಗಿ ಮಂಗಳೂರಿನಿಂದ ಮುಡಿಪುವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಸಂಚಾರಕ್ಕೆ ಆಗ್ರಹಿಸಿ ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ವತಿಯಿಂದ ಸಪ್ಟೆಂಬರ್ 25 ರಂದು ಮೊಂಟೆಪದವು ಶಾಲೆಯ ಬಳಿ ಪ್ರತಿಭಟನೆ ನಡೆಸಲಾಯಿತು.

ಮೊಂಟೆಪದವು ಮಾರ್ಗವಾಗಿ ಸರ್ಕಾರಿ ಬಸ್ಸು ಬೇಕೆಂದು ಆಗ್ರಹಿಸಿ ಹಲವು ಬಾರಿ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳಿಗೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದರೂ ಆ ಮಾರ್ಗದಲ್ಲಿ ತಾತ್ಕಾಲಿಕ ಪರವಾನಗಿ ಪಡೆದ ಖಾಸಗಿ ಬಸ್ ಮಾಲಕರ ಪ್ರಭಾವದಿಂದಾಗಿ ಸರ್ಕಾರಿ ಬಸ್ಸುಗಳನ್ನು ಸಾರಿಗೆ ಅಧಿಕಾರಿಗಳು ಮಂಜೂರು ಮಾಡಿರುವುದಿಲ್ಲ ಎಂಬುದಾಗಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು ಕಟುವಾಗಿ ಟೀಕಿಸಿದರು. ಖಾಸಗಿ ಮಾಲಕರ ಒತ್ತಡಕ್ಕೆ ಒಳಗಾಗಿ ಮತ್ತು ಸರ್ಕಾರಿ ಬಸ್ ಸಂಚಾರ ಕಲ್ಪಿಸದಿದ್ದರೆ ಮುಂದೆ ರಸ್ತೆ ತಡೆ ನಡೆಸಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಉಳ್ಳಾಲ ವಲಯ ಕಾರ್ಯದರ್ಶಿ ರಝಾಕ್ ಮೊಂಟೆಪದವು, ದ.ಕ. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಎನ್. ಎಸ್.ಕರೀಂ ಮಾತನಾಡಿದರು. ಡಿವೈಎಫ್ಐ ಸ್ಥಳೀಯ ಮುಖಂಡರಾದ ಸುನಿಲ್, ಆಲಿ ಕುಂಞ, ಹಂಝು, ರೈತ ಸಂಘದ ಮುಖಂಡರಾದ ಜಯಂತ ಅಂಬ್ಲಮೊಗರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಸಿಂದಗಿ : ವಿಕಲಚೇತನರಿಗೆ ಸಾಧನಾ ಸಲಕರಣೆಗಳ ವಿತರಣೆ

2015–16 ನೇ ಸಾಲಿನ ಶೇ3 ರ ವಿಕಲಚೇತನರ ಅನುದಾನದಲ್ಲಿ ಸಿಂದಗಿಯಲ್ಲಿ ಸಾಧನಾ ಸಲಕರಣೆಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.

ವಿಕಲ ಚೇತನರಿಗೆ ಅನುಕಂಪ ತೊರದೇ ಸೌಲಭ್ಯ ಒದಗಿಸಿದಾಗ ಮಾತ್ರ ಅವರು ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗುತ್ತದೆ ಎಂದು ಪುರಸಭೆ ಸದಸ್ಯ ರಾಜಶೇಖರ ಕೂಚಬಾಳ ಹೇಳಿದರು.

ಅವರು ಪುರಸಭೆ ಮತ್ತು ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ ಹಮ್ಮಿಕೊಂಡ 2015–16 ನೇ ಸಾಲಿನ ಶೇ3 ರ ವಿಕಲಚೇತನರ ಅನುದಾನದಲ್ಲಿ ಸಾಧನಾ ಸಲಕರಣ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.


ಅಂಗವಿಕಲರಿಗೆ ಸರಕಾರ ಅನೇಕ ಯೋಜನೆಗಳನ್ನು ರೂಪಿಸಿದ್ದು ಅದರ ಸದ್ಬಳಕೆ ಸರಿಯಾಗಿ ಆಗುತ್ತಿಲ್ಲ. ಪುರಸಭೆಯ ವ್ಯಾಪ್ತಿಯಲ್ಲಿ ಸುಮಾರು 21 ಜನ ತೀವ್ರತರ ಇರುವ ಅಂಗವಿಕಲರಿಗೆ ವಿವಿಧ ಸಾಧನಾ ಸಲಕರಣೆ ನೀಡಲಾಗಿದ್ದು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಅಂಗವಿಕಲರಿಗೆ ಸೌಲಭ್ಯ ನೀಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ತಿಳಿಸಿದರು.

ಈ ಸಂಧರ್ಬದಲ್ಲಿ ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆಯ ತಾಲೂಕಾ ಕಾರ್ಯದರ್ಶಿ ಗಂಗಾಧರ ಸಿ. ಮಾತನಾಡಿ, ತಾಲೂಕಿನಲ್ಲಿ ಸುಮಾರು 7 ಸಾವಿರ ಜನ ಅಂಗವೀಕಲರಿದ್ದು ಇಲ್ಲಿಯವರೆಗೆ ಕೇವಲ 2 ಸಾವಿರ ಅಂಗವೀಕಲರಿಗೆ ಸರಕಾರದಿಂದ ಸೌಲಭ್ಯ ನೀಡಲಾಗಿದೆ. ಆದರೆ ಇನ್ನೂ ಅನೇಕ ಅಂಗವೀಕಲರು ಸೌಲಭ್ಯದಿಂದ ವಂಚಿತರಾಗಿದ್ದಾರೆ. ಮುಂಬರುವ ದಿನಗಳಲ್ಲಿ ಎಲ್ಲಾ ಇಲಾಖೆಗಳಲ್ಲಿ ಶೇ.5 ಅನುದಾನವನ್ನು ವಿವಿಧ ಕಾರ್ಯಗಳಿಗೆ ನೀಡಬೇಕು. 2016 ರ ಅಂಗವಿಕಲರ ಕಾಯ್ದೆಯ ಅನ್ವಯ 21 ವಿಧಗಳಲ್ಲಿ ಅಂಗವೀಕಲತೆಯನ್ನು ಗುರುತಿಸಲಾಗಿದ್ದು ಅಂತವರ ಬದುಕನ್ನು ಸ್ವಚ್ಛಂದಗೊಳಿಸುವ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು, ಸರಕಾರ, ಜನಪ್ರತಿನಿಧಿಗಳು ಶ್ರಮವಹಿಸಬೇಕು ಎಂದು ಮನವಿ ಮಾಡಿಕೊಂಡರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಯೋಜನಾ ಸಮಿತಿಯ ಮತ್ತು ಪುರಸಭೆ ಸದಸ್ಯ ಮಂಜುನಾಥ ಬಿಜಾಪೂರ, ಪುರಸಭೆ ವ್ಯವಸ್ಥಾಪಕ ಸುನೀಲಕುಮಾರ ಸಾಬೋಜಿ ಮಾತನಾಡಿ, ಪುರಭೆಯ ಎಸ್.ಎಫ್.ಸಿ ಮತ್ತು 7.25 ಯೋಜನೆಯಡಿಯಲ್ಲಿ ಅಂಗವಿಕಲರಿಗಾಗಿ ಶೌಚಾಲಯಗಳ ನಿರ್ಮಾಣಕ್ಕಾಗಿ ಹಣ ಮೀಸಲಿರಿಸಿದ್ದು ಮುಂಬರುವ ದಿನಗಳಲ್ಲಿ ಕ್ರೀಯಾ ಯೋಜನೆ ರೂಪಿಸಿ ಸೌಲಭ್ಯ ಒದಗಿಸುವದಾಗಿ ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ನೇರವಾಗುವ ಸಾಧನ ಸಲಕರಣೆಗಳನ್ನು ನೀಡುವಲ್ಲಿ ಪ್ರಯತ್ನ ಮಾಡುವದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆಯ ತಾಲೂಕಾಧ್ಯಕ್ಷೆ ಸಬೀಯಾಬೇಗಂ ಮರ್ತೂರ, ಮುತ್ತುರಾಜ ಸಾತಿಹಾಳ ವೇದಿಕೆ ಮೇಲಿದ್ದರು. ಲಕ್ಷ್ಮೀ ವಡ್ಡರ ಪ್ರಾರ್ಥಿಸಿದರು, ಶಾಬುದ್ದಿನ ಬುಕ್ಕದ ಸ್ವಾಗತಿಸಿದರು, ಸುರೇಖಾ ಗುರವ ನಿರೂಪಿಸಿದರು, ಯಲ್ಲಮ್ಮ ಮುಳವಾಡ ವಂದಿಸಿದರು.

ಹಿರಿಯ ರೈತ ಹೋರಾಟಗಾರ ರಾಮಸ್ವಾಮಿಯವರು ಇನ್ನಿಲ್ಲ



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕು ರಾಮಸ್ವಾಮಿಪಾಳ್ಯ ಗ್ರಾಮದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಿಪಿಐ(ಎಂ) ಪಕ್ಷದ ಹಿತೈಷಿಗಳೂ ಆದ ಶ್ರೀ ಆರ್. ರಾಮಸ್ವಾಮಿಯವರು ಸೆಪ್ಟೆಂಬರ್ 28. 2017 ರಂದು ಬೆಳಗಿನ ಜಾವ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ನಿಧನ ರಾಗಿದ್ದಾರೆ. ಅವರಿಗೆ 96 ವಯಸ್ಸಾಗಿತ್ತು.

ಅವರು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಜೋಡಿ ಇನಾಮ್ತಿ ಪದ್ಧತಿ ವಿರುದ್ಧ ದ ರೈತರ ಹೋರಾಟದಲ್ಲಿ ಮುಂಚೂಣಿಯ ಪಾತ್ರ ವಹಿಸಿದ್ದರು.

ಅವರ ಇಡೀ ಕುಟುಂಬ ಕಮ್ಯೂನಿಸ್ಟ್ ಚಳುವಳಿಯ ಪ್ರಬಲ ಬೆಂಬಲಿಗ ರಾಗಿದ್ದಾರೆ. ಹಿರಿಯ ವಕೀಲರಾದ ಆರ್. ಆರ್. ಹರೀಂದ್ರ, ಪ್ರಾಂತ ರೈತ ಸಂಘದ ಮುಖಂಡ ಆರ್. ಆರ್.ಮನೋಹರ , ಆರ್. ಆರ್.ಆನಂದ ಮತ್ತು ಇಬ್ಬರು ಹೆಣ್ಣುಮಕ್ಕಳು ಅವರ ಮಕ್ಕಳು.

ಅವರ ಅಂತ್ಯಕ್ರಿಯೆ ರಾಮಸ್ವಾಮಿ ಪಾಳ್ಯದಲ್ಲಿ ಸೆಪ್ಟೆಂಬರ್ 28. 2017 ರಂದು ಮಧ್ಯಾಹ್ನ 2 ಗಂಟೆಗೆ ನೆರವೇರಿತು.

ಅಗಲಿದ ಹಿರಿಯರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಎಂ.ಎಂ.ಕಲಬುರ್ಗಿ ಮತ್ತು ಗೌರಿ ಹತ್ಯೆ ಖಂಡಿಸಿ ಗೊತ್ತುವಳಿ ಲಿಂಗಾಯತ ಸ್ವತಂತ್ರ ಧರ್ಮ ಸಾಂವಿಧಾನಿಕ ಮಾನ್ಯತೆಗಾಗಿ ಸಮಾವೇಶ



ಕಲಬುರಗಿಯಲ್ಲಿ "ಲಿಂಗಾಯತ ಧರ್ಮ ಸ್ವತಂತ್ರ ಧರ್ಮ. ಸಂವಿಧಾನಿಕ ಮಾನ್ಯತೆಗಾಗಿ" ಸೆ.24ರಂದು ಬೃಹತ್ ಸಮಾವೇಶ ನಡೆಯಿತು. ಸಮಾವೇಶದಲ್ಲಿ ಎಂ.ಎಂ.ಕಲಬುರ್ಗಿ ಮತ್ತು ಗೌರಿ ಹತ್ಯೆ ಖಂಡಿಸಿ ಈ ಕೆಳಗಿನ ನಿರ್ಣಯ ಅಂಗೀಕರಿಸಲಾಯಿತು: ನಿರ್ಣಯವನ್ನು ನೀಲಾ ಕೆ. ಅವರು ಮಂಡಿಸಿದರು. ಉಮಾಕಾಂತ ನಿಗ್ಗುಡಗಿ ಅನುಮೋದಿಸಿದರು.

ಲಿಂಗಾಯತ ಸ್ವತಂತ್ರ ಧರ್ಮ ಎಂಬುದನ್ನು ತಮ್ಮ ವಸ್ತುನಿಷ್ಠ ಸಂಶೋಧನೆಗಳ ಮೂಲಕ ಜಗತ್ತಿಗೆ ಎತ್ತಿ ತೋರಿಸಿದ ಪ್ರಖರ ವಿಚಾರವಾದಿ ಡಾ ಎಂ ಎಂ ಕಲಬುರಗಿ ಅವರ ಹಂತಕರನ್ನು ಕೂಡಲೇ ಬಂಧಿಸಬೇಕು.

ಅದರಂತೆ ನಿಷ್ಠುರವಾದಿ, ನಿಭೀಢೆ ಪತ್ರಕತರ ಜನಸಾಮಾನ್ಯರ ಧ್ವನಿಯಾಗಿದ್ದ ಗೌರಿ ಲಂಕೇಶ ಅವರ ಕೊಲೆಗಡುಕರನ್ನು ವಿಳಂಬ ಮಾಡದೆ ಬಂಧಿಸಬೇಕು. ಅದರೊಟ್ಟಿಗೆ ಹತ್ಯೆಯ ಹಿಂದಿರುವ ಸಂಚುಕೋರರನ್ನು ಬಯಲಿಗೆಳೆಯಬೇಕು. ಕಲಬುರಗಿ ಮತ್ತು ಗೌರಿ ಲಂಕೇಶ ಇಬ್ಬರೂ ಲಿಂಗಾಯತರು ಮಾತ್ರವಲ್ಲದೆ ಸಕಲ ಜೀವಾತ್ಮರಿಗೆ ಲೇಸ ಬಯಸುವವರಾಗಿದ್ದರು. ಆದ್ದರಿಂದ ಇಬ್ಬರ ಹಂತಕರನ್ನು ಯಾವುದೇ ಕಾರಣ–ಕ್ಕೂ ತಪ್ಪಿಸಿಕೊಳ್ಳಲು ಬಿಡಬಾರದೆಂದು ಈ ಮೂಲಕ ಆಗ್ರಹಿಸುತ್ತಿದ್ದೇವೆ. ಸಭೆ ಖಂಡನಾ ನಿರ್ಣಯ ಮಾಡಿ ಈ ಗೊತ್ತುವಳಿಯನ್ನು ಮಂಡಿಸುತ್ತಿದ್ದೇವೆ. ತಕ್ಷಣವೇ ಸರಕಾರ ನಮ್ಮ ಗೊತ್ತುವಳಿಗೆ ಸ್ಪಂದಿಸಿ ಕಾರ್ಯಪ್ರವೃತ್ತವಾಗಬೇಕೆಂದು ಆಗ್ರಹಿಸುತ್ತೇವೆ.

ವಿಜಯಪುರ : ವಾರನಿ ಕಡಿತಕ್ಕೆ ಹಮಾಲರ ಪ್ರತಿಭಟನೆ



ಜಿಲ್ಲಾ ಲಾರಿ ಹಮಾಲರ ಸಂಘ ಹಾಗೂ ವಿಜಯಪುರ ಜಿಲ್ಲಾ ಗೂಡ್ಸ್ ಟ್ರಾನ್ಸ್‌ಪೋರ್ಟ್ ಮತ್ತುಕಿರಾನಿ ಬಜಾರ್ ಹಮಾಲರ ಸಂಘ ಜಂಟಿಯಾಗಿ ಕೋರಿ ಚೌಕದಿಂದ ಬೃಹತ್ ಮೆರವಣಿಗೆ ಹೊರಟು ಗಾಂಧಿ ವೃತ್ತ ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ ಹಾಯ್ದು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ಹಮಾಲ ಕಾರ್ಮಿಕರ ಹಾಗೂ ಲಾರಿ ಮಾಲಿಕರ ನಡುವೆ ಒಪ್ಪಂದಂತೆ ವಾರ್ನಿ ಕೂಲಿ 45 ಕೊಡಬೇಕು ಎಂದು ಆಗ್ರಹಿಸಿದರು. ಈ ಹಿಂದೆ ಮಾಡಿಕೊಂಡ ಒಪ್ಪದಂತೆ 45 ರೂಗಳು ಕೊಡಬೇಕಾಗಿದ್ದ ವಾರ್ನಿ ಕೂಲಿ ಕೊಡುವ ಬದಲು ರು. 20 ರುಗಳು ಕೊಡುತ್ತೇವೆ ಎಂದು ಲಾರಿ ಮಾಲಿಕರು ಹೇಳುತ್ತಿದ್ದಾರೆ. ಇದು ಸರಿಯಾದ ನೀತಿಯಲ್ಲ ತಕ್ಷಣವೇ ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಿ ಹಮಾಲಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ದೊರಕುವಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಯಿತು.

ಮನವಿಗೂ ಮುಂಚೆ ಪ್ರತಿಭಟನಾಕಾರರನ್ನು ಉದ್ದೇಶಿಸಿ ಹಮಾಲಿ ಕಾರ್ಮಿಕ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಅವರು ಮಾತನಾಡಿ, ಹಮಾಲಿ ಕಾರ್ಮಿಕರು ಸರಕುಗಳಿಗೆ ಬೆನ್ನುಕೊಟ್ಟಾಗಲೆ ವ್ಯಾಪಾರ ವಹಿವಾಟದ ಚಕ್ರ ತಿರುಗುತ್ತದೆ ಇಲ್ಲದೆ ಹೋದರೆ ಈ ಚಕ್ರ ನಿಂತು ಹೋಗುತ್ತದೆ. ರೈತರ ಹೊಲದಿಂದ ಹಿಡಿದು ಅಡತಿ ಅಂಗಡಿ, ಕಾರ್ಖಾನೆ, ಮರಳಿ ಕಿರಾಣಿ ಅಂಗಡಿ ಮುಂತಾದ ವ್ಯಾಪಾರ ವಹಿವಾಟಗಳಿಗೆ ಕಾರಣಿ ಭೂತರಾದ ಹಮಾಲಿ ಕಾರ್ಮಿಕರಿಗೆ ಈ ರೀತಿ ಮೋಸ ಮಾಡುವುದು ಸರಿಯಲ್ಲವೆಂದು ಖಂಡಿಸಿದ ಅವರು ಸರಕಾರಗಳು ಹಮಾಲಿ ಕಾರ್ಮಿಕರಿಗೆ ನಿವೃತ್ತಿ ವೇತನ ನೀಡಿ ವಿಶ್ರಾಂತಿ ಜೀವನ ಸುಗಮಗೊಳಿಸಬೇಕು ಎಂದರು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಅಣ್ಣಾರಾಯ ಈಳಗೇರ ಮಾತನಾಡಿ, ದಿನ ನಿತ್ಯವು ಬೆಲೆಗಳು ಗಗನ ಮುಖಿಯಾಗಿರುವಾಗ ಹಮಾಲಿ ಕೂಲಿ ಕಡಿಮೆ ಮಾಡುತ್ತೇವೆ ಎನ್ನುವ ಲಾರಿ ಮಾಲಿಕರ ನೀತಿಯೂ ಕಾರ್ಮಿಕ ವಿರೋಧಿ ನೀತಿಯಾಗಿದೆ ಎಂದು ತೀವ್ರವಾಗಿ ಖಂಡಿಸಿದರು. ಜನವಾದಿ ಮಹಿಳಾ ಸಂಘದ ಜಿಲ್ಲಾ ಮುಖಂಡರಾದ ಸು–ರೇಖಾ ರಜಪೂತ ಅವರು ಮಾತನಾಡಿ, ಹಮಾಲಿ ಕಾರ್ಮಿಕರ ಬೇಡಿಕೆ ಈಡೇರುವವರೆಗೂ ಕೋರಿ ಚೌಕದಲ್ಲಿ ಅನಿರ್ಧಿಷ್ಟ ಮುಷ್ಕರ ಮುಂದುವರೆಸುವುದಾಗಿ ಹೇಳಿದರು. ಅಕ್ರಂಮಾಶ್ಯಾಳಕರ ಮಾತನಾಡಿ, ಕಿರಣಾ ಬಜಾರ ಹಾಗೂ ಲಾರಿ ಹಮಾಲರು ಒಕ್ಕಟ್ಟಿನಿಂದ ಹೋರಾಟ ಮಾಡಿಕೊಂಡು ಹೋಗಬೇಕು ಎಂದು ಕರೆ ನೀಡಿದರು.

ಅದರಂತೆ ಪ್ರತಿಭಟನಾ ಮೆರವಣಿಗೆಯೂ ನಗರದ ಬಸವೇಶ್ವರ ವೃತ್ತಕ್ಕೆ ಆಗಮಿಸಿದ್ದಂತೆ ಪ್ರತಿಭಟನಾಕಾರರು ತಟ್ಟಿನ ಮೇಲೆ ಅನ್ನಸಾಂಬಾರ ಬಳಸಿ ಅವುಗಳನ್ನು ಕೈಯಿಂದ ಮುಟ್ಟದೆ ಪಶುಗಳಂತೆ ತಲೆಯನ್ನು ತಗ್ಗಿಸಿ ಆಹಾರ ಸೇವಿಸುವ ಮೂಲಕ ವಿಶಿಷ್ಟವಾಗಿ ಪ್ರತಿಭಟಿಸಿದರು..


ಈ ಸಂದರ್ಭದಲ್ಲಿ ಮಲ್ಲಿಕಸಾಬ ಟಕ್ಕಳಕಿ, ಸಾಬು ಗುಗದಡ್ಡಿ, ಅದಮಸಾಬ ಸೈಯ್ಯದ, ಚಾಂದಸಾಬ, ಶ್ರೀಕಾಂತ ಇಟ್ಟಂಗಿಹಾಳ, ಕಲ್ಲಪ್ಪ ಅಗಸರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.


ಅಣ್ಣಾರಾಯ ಈಳಗೇರ

ರೈತ ಮುಕ್ತಿ ದಕ್ಷಿಣ ಭಾರತ ಯಾತ್ರಾ ಸಮಾರೋಪ ಬೆಂಗಳೂರಿನಲ್ಲಿ

"ದೇಶವ್ಯಾಪಿ ರೈತ ಮುಕ್ತಿ ಯಾತ್ರಾ" ದಕ್ಷಿಣ ಭಾರತ ಯಾತ್ರಾ ಸಮಾರೋಪ ಬೆಂಗಳೂರಿನ ಶಿಕ್ಷಕರ ಸದನದಲ್ಲಿ ನಡೆಯಿತು. ತೆಲಂಗಾಣ, ಆಂಧ್ರ, ಕೇರಳದಲ್ಲಿ ಸಂಚರಿಸಿ ಕರ್ನಾಟಕ ಪ್ರವೇಶಿಸಿದ್ದ ಈ ಜಾಥಾ ಚಾಮರಾಜನಗರ, ಮೈಸೂರು, ಪಾಂಡವಪುರ, ತುಮಕೂರು ಗಳಲ್ಲಿ ಸಭೆ ನಡೆಸಿ ಬೆಂಗಳೂರು ತಲುಪಿತು. ದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ರೈತರ ಆತ್ಮಹತ್ಯೆ ತಡೆಗಟ್ಟಬೇಕು.ರೈತರ ಫಸಲಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಬೆಂಬಲ ಬೆಲೆ ನೀಡಬೇಕು. ಮತ್ತು ರೈತ ವಿರೋಧಿ ನೀತಿಗಳನ್ನು ಕೈಬಿಡಲು ಒತ್ತಾಯಿಸಿ ಸುಮಾರು 2000 ಕೀಮೀ ಯಾತ್ರೆಯನ್ನು ದೇಶದ ಸುಮಾರು 175 ರೈತ ಸಂಘಗಳು ಸೇರಿ ಇಡೀ ದೇಶದ ಉದ್ದಕ್ಕೂ ಇಂತಹ ಯಾತ್ರೆಗಳನ್ನು ಆಯೋಜಿಸಿವೆ ಅಂತಿಮವಾಗಿ ಮುಂಬರುವ ನವೆಂಬರ್ 20 ರಿಂದ ಪಾರ್ಲಿಮೆಂಟ್ ಮುಂದೆ ಲಕ್ಷಾಂತರ ಬೃಹತ್ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಈ ಸಭೆಯಲ್ಲಿ ರೈತಮುಕ್ತಿ ಮೋರ್ಚಾದ ಸಂಚಾಲಕರಾದ ವಿ.ಎನ್ ಸಿಂಗ್, ಯೋಗೇಂದ ್ರಯಾದವ್,ವಿಜು ಕೃಷ್ಣನ್, ಶಾಸಕರಾದ ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ್, ಜಿ.ಎನ್.ನಾಗರಾಜ್, ಜಿಸಿ ಬಯ್ಯಾರೆಡ್ಡಿ, ಅನುಸೂಯಮ್ಮ, ವೀರಸಂಗಯ್ಯ, ಯು.ಬಸವರಾಜ್, ಚಂದ್ರಪ್ಪ ಹೋಸ್ಕೆರಾ, ಕವಿತಾ ಕುರುಗಂಟಿ, ಮೀನಾಕ್ಷಿ ಸುಂದರಂ ಅಲ್ಲದೆ ಆಂಧ್ರ, ತೆಲಂಗಾಣ ರಾಜ್ಯದ ರೈತಮುಖಂಡರು ಮೊದಲಾದವರು ವೇದಿಕೆಯಲ್ಲಿದ್ದು ಮಾತನಾಡಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಸರಕಾರದ ನೀತಿಗಳಿಂದ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ, ಮಧ್ಯಪ್ರದೇಶ ಬಿಜೆಪಿ ಸರಕಾರದ ಪೊಲೀಸ ಗುಂಡಿಗೆ ಬಲಿಯಾದ ರೈತರಿಗೆ ಮತ್ತು ರೈತ ಕಾರ್ಮಿಕರ ಪರವಾಗಿ ಹೋರಾಡುತ್ತಾ ಹಂತಕರಿಂದ ಹತ್ಯೆಯಾದ ಪತ್ರಕರ್ತೆ ಗೌರಿ ಲಂಕೇಶ ಅವರಿಗೆ ಸಭೆ ಒಂದು ನಿಮಿಷ ಶ್ರದ್ಧಾಂಜಲಿ ಸಲ್ಲಿಸಲಾಯಿತು.







ಭರತ್ ರಾಜ್ ಅವರಿಗೆ ಕಾವ್ಯಶ್ರೀ ಪ್ರಶಸ್ತಿ

ಡಾ..ಜೀ .ಶಂ ಪ ಸಾಹಿತ್ಯ ವೇದಿಕೆ .ಕನ್ನಂಬಾಡಿ ದಿನಪತ್ರಿಕೆ. ಜಿಲ್ಲಾ ವೀರಶೈವ ಮಹಾಸಭಾ ಮಂಡ್ಯ ರವರಿಂದ 22 ನೇ ರಾಜ್ಯ ಮಟ್ಟದ ಕವಿ ಕಾವ್ಯಮೇಳ ಮಂಡ್ಯದ ಕಲಾ ಮಂದಿರದಲ್ಲಿ ಜರುಗಿತು .ಆ ಕಾರ್ಯಕ್ರಮದಲ್ಲಿ ಸಂಗಾತಿ ಎನ್ ಎಲ್ ಭರತ್ ರಾಜ್ ಮಳವಳ್ಳಿ ಅವರಿಗೆ ಕಾವ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು ಮತ್ತು ಭರತ್ ರಾಜ್ ಕವನ ವಚನ ಮಾಡಿದರು.

ಬೆಂಗಳೂರಿನಲ್ಲಿ ನಡೆದ ಗೌರಿ ಲಂಕೇಶ್ ಹತ್ಯಾ ವಿರೋಧಿ "ನಾನು ಗೌರಿ" ಸಮಾವೇಶದಲ್ಲಿ ಪಿ. ಸಾಯಿನಾಥ್ ಹೇಳಿದಂತೆ ಗೌರಿ ಲಂಕೇಶ್‌ರ ಕೊಲೆ ಕೊನೆಯದಲ್ಲ. ಪಟ್ಟಿ ಸಿದ್ಧ ಮಾಡಿಕೊಂಡು ಹೊರಟಿರುವವರು ಮಾಡಲಿರುವ ಅನೇಕ ಹತ್ಯೆಗಳಲ್ಲಿ ಒಂದು. ಹಾಗಿದ್ದರೆ ಅಪಾರ ಸಂಖ್ಯೆಯಲ್ಲಿ ಸೇರಿ ಜನರು ಮಾಡುತ್ತಿರುವ ಪ್ರತಿಭಟನೆಗಳ ಫಲವೇನು? ಪರಿಣಾಮವೇನು? ಉತ್ತರಗಳು ಸುಲಭವಾಗಿ ಗೋಚರಿಸುತ್ತಿಲ್ಲ. ಒಂದಂತೂ ನಿಜ. ಎಲ್ಲಿ ಜನಸಮುದಾಯಗಳು ಬೆದರಿಕೆಗೆ ಬಗ್ಗುವುದಿಲ್ಲವೋ ಅಲ್ಲಿ ಮೊದಲು ಹಿಂಸೆಯು ಪ್ರಬಲವಾಗಿ ಬೆಳೆದರೂ ಅಂತಿಮವಾಗಿ ಪ್ರಭುತ್ವವು ಸೋಲುತ್ತದೆ. ಹೆದರುವುದಿಲ್ಲ ಎನ್ನುವವರಿಗೆ ಪ್ರಭುತ್ವವು ಹೆದರುತ್ತಿದೆ. ಈಗಿರುವ ಸವಾಲೆಂದರೆ ಈ ಪ್ರತಿಭಟನೆಯನ್ನು ತಾಳಿಕೆಯುಳ್ಳ ರಾಜಕೀಯ ಶಕ್ತಿಯಾಗಿ ಪರಿವರ್ತಿಸುವುದಾಗಿದೆ.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಹೆದರುವುದಿಲ್ಲ ಎನ್ನುವವರಿಗೆ ಪ್ರಭುತ್ವವು ಹೆದರುತ್ತದೆ



ಗೌರಿ ಲಂಕೇಶ್‌ರ ಬರ್ಬರ ಹತ್ಯೆಯ ವಿರುದ್ಧ ಕರ್ನಾಟಕವಂತೂ ತನ್ನ ಸಾತ್ವಿಕ ರೋಷವನ್ನು ಇನ್ನಿಲ್ಲದಂತೆ ಅಭಿವ್ಯಕ್ತಿಸಿದೆ. ಭಾರತ ಮಾತ್ರವಲ್ಲ ಇಡೀ ವಿಶ್ವದಲ್ಲಿ ಪ್ರತಿಭಟನೆಗಳು ನಡೆದಿವೆ. ಆದರೆ ಕಳೆದ ಒಂದೆರಡು ದಿನಗಳಲ್ಲಿ ಮತ್ತೆ ಪತ್ರಿಕೋದ್ಯಮಿಗಳ ಮೇಲೆ ಹಲ್ಲೆಗಳು ನಡೆದಿವೆ. ಒಬ್ಬರ ಹತ್ಯೆಯಾಗಿದೆ. ಬನಾರಸ್ ಹಿಂದು ವಿಶ್ವವಿದ್ಯಾನಿಲಯದ ಘಟನೆಗಳು ದಿಗ್ಭ್ರಮೆ ಹುಟ್ಟಿಸುವಂತಿವೆ. ಒಬ್ಬಳು ವಿದ್ಯಾರ್ಥಿನಿಯ ಮೇಲೆ ಕ್ಯಾಂಪಸ್‌ನಲ್ಲಿಯೇ ಲೈಂಗಿಕ ಆಕ್ರಮಣ ನಡೆಯುತ್ತದೆ. ಅಲ್ಲಿಯೇ ಇದ್ದ ಕಾವಲುಗಾರರು ಮತ್ತು ಆನಂತರ ಅವಳ ಹಾಸ್ಟೆಲ್‌ನ ವಾರ್ಡನ್‌ರು ಆ ವಿದ್ಯಾರ್ಥಿನಿಯನ್ನೇ ಒಬ್ಬಂಟಿಯಾಗಿ ಅಷ್ಟು ತಡವಾಗಿ (ಸಾಯಂಕಾಲ 6 ಗಂಟೆಗೆ) ಓಡಾಡಿದ್ದಕ್ಕಾಗಿ ಬೈಯುತ್ತಾರೆ. ವಿದ್ಯಾರ್ಥಿನಿಯರು ಪ್ರತಿಭಟನೆ ಆರಂಭಿಸಿದ ಮೇಲೆ ಪೋಲೀಸರು ಅವರ ಮೇಲೆ ಹಲ್ಲೆ ನಡೆಸುತ್ತಾರೆ. ಅಷ್ಟು ಮಾತ್ರವಲ್ಲ ಘಟನೆಯನ್ನು ವರದಿ ಮಾಡಲು ಬಂದಿದ್ದ ಪತ್ರಕರ್ತರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿ ಅವರಲ್ಲಿ ಅನೇಕರು ಗಂಭೀರವಾಗಿ ಗಾಯಗೊಳ್ಳುತ್ತಾರೆ.

ಇಲ್ಲ ಇನ್ನು ಯಾವ ಅನುಮಾನವೂ ಇಲ್ಲ. ಇಂದಿನ ಪ್ರಭುತ್ವದ ಸಂಪೂರ್ಣ ಬೆಂಬಲದೊಂದಿಗೆ ಸತ್ಯ ಹೇಳಲು ಹೊರಡುವ ಪತ್ರಕರ್ತರನ್ನು ಥಳಿಸುವುದು ಮತ್ತು ಕೊಲ್ಲುವುದು ದಿನನಿತ್ಯದ ಕ್ರಿಯೆಯಾಗಲಿದೆ. ಬರಹಗಾರರನ್ನು ಕೊಂದಾಗ ಅನೇಕ ಪತ್ರಿಕೆಗಳು ಮತ್ತು ಟಿ.ವಿ ವಾಹಿನಿಗಳು ಬರಹಗಾರರ ವಿರುದ್ಧವೇ ಸಲ್ಲದ ಮಾತುಗಳನ್ನು ಹಾಗೂ ಅವಮಾನಕರ ಸುಳ್ಳುಗಳನ್ನು ಬಿತ್ತರಿಸಿದವು. ಗೌರಿ ಲಂಕೇಶ್ ರನ್ನು ಹತ್ಯೆಮಾಡಿದವರು ನಕ್ಸಲರೇ ಎಂದು ಅಧಿಕೃತವಾಗಿ ಮಾಧ್ಯಮಗಳು ಘೋಷಣೆ ಮಾಡಿದವು. ಭಾರತದ ಮಾಧ್ಯಮಗಳು ಜಗತ್ತಿನ ಅತ್ಯಂತ ನಂಬಲು ಅನರ್ಹವಾದವುಗಳು ಎನ್ನುವ ಸಮೀಕ್ಷೆಗಳು ನಿಜವೆನ್ನುವುದನ್ನು ಪ್ರತಿನಿತ್ಯ ಅವು ಸಾಬೀತು ಮಾಡುತ್ತಿವೆ. ಅರ್ನಬ್ ಗೋಸ್ವಾಮಿಯಂಥ ವಿಷಕ್ರಿಮಿಯನ್ನು ಬಂಡವಾಳಶಾಹಿ– ಮೂಲಭೂತವಾದಿ ಜಂಟಿ ಶಕ್ತಿಗಳು ಕೊಂಡುಕೊಂಡುಬಿಟ್ಟಿವೆ. ನಮ್ಮ ಟಿ.ವಿ ವಾಹಿನಿಗಳು ತಮ್ಮನ್ನು ಮಾರಿಕೊಂಡು ಗುಲಾಮರಾಗಿವೆ. ಇಂಥ ಭಯಾನಕ ಸ್ಥಿತಿಯಲ್ಲಿ ಅಪಾರ ಧೈರ್ಯದಿಂದ ಸತ್ಯವನ್ನು ಬರೆಯುವ ಪತ್ರಕರ್ತರನ್ನು ಮುಗಿಸಲಾಗುತ್ತಿದೆ. ಮಾಹಿತಿ ಹಕ್ಕು ಕಾರ್ಯಕರ್ತರಲ್ಲಿ ಎಷ್ಟು ಜನರ ಬಲಿ ತೆಗೆದುಕೊಳ್ಳಲಾಗಿದೆ ಎನ್ನುವ ಲೆಕ್ಕವೇ ಇಲ್ಲ.

ಕನ್ನಡ ಪತ್ರಕರ್ತನೊಬ್ಬ ಗೌರಿ ಲಂಕೇಶ್ ಗುಂಡಿನಿಂದ ಸಾಯದಿದ್ದರೆ ಗುಂಡಿನಿಂದ (ಮದ್ಯದಿಂದ) ಸಾಯುತ್ತಿದ್ದರು ಎಂದು ಬರೆದ. ಗೋಮೂತ್ರ ಕುಡಿದೇ ಕೊಲೆಗಡುಕ ರಾಜಕೀಯವನ್ನು ಹಾಗೂ ಸಂಸ್ಕೃತಿಯನ್ನು ದುಡ್ಡಿಗಾಗಿ ಸಮರ್ಥಿಸುವ ಪತ್ರಕರ್ತರು ಇದ್ದಾರಲ್ಲವೇ? ಇದೆಲ್ಲ ಪ್ರಸ್ತಾಪವೇಕೆಂದರೆ ಪತ್ರಕರ್ತರ ಕೊಲೆಗಳನ್ನು ಪ್ರತಿಭಟಿಸುವ ನೈತಿಕ ಅಧಿಕಾರವನ್ನೇ ನಮ್ಮ ಮಾಧ್ಯಮಗಳು ಕಳೆದುಕೊಂಡು ಬಿಟ್ಟಿವೆ. ಏಕೆಂದರೆ ಹಿಂಸೆ ಹಾಗೂ ಕೊಲೆಯ ರಾಜಕೀಯವನ್ನು ಸಮರ್ಥಿಸುವ ಪ್ರಭುತ್ವದೊಂದಿಗೆ ಮಾಧ್ಯಮದವರು ಶಾಮೀಲಾಗಿದ್ದಾರೆ. ತಮ್ಮನ್ನು ಮಾರಿಕೊಂಡಿದ್ದಾರೆ. ಇಂಥ ಸ್ಥಿತಿಯಲ್ಲಿ ಸತ್ಯವನ್ನು ಬರೆಯುವ ನಿರ್ಭೀತ ಪತ್ರಕರ್ತರು ಇನ್ನು ಮೌನ ಸಂಸ್ಕೃತಿಗೆ ಮೊರೆ ಹೋಗುವುದು ಅನಿವಾರ್ಯವಾಗಬಹುದು. ಗಾಂಧಿ ಮತ್ತು ಅಂಬೇಡ್ಕರ್‌ರು ಸಹ ಪತ್ರಕರ್ತರಾಗಿದ್ದರು ಮತ್ತು ಅವರ ಕಾಲದ ಅತ್ಯಂತ ಪ್ರಬಲ ಜಾಗತಿಕ ಶಕ್ತಿಯಾಗಿದ್ದ ವಸಾಹತುಶಾಹಿಯನ್ನು ಎದುರಿಸಿದ್ದರು ಎನ್ನುವುದನ್ನು ನೆನಪು ಮಾಡಿಕೊಂಡರೆ ಇಂದಿನ ದುರ್ದಶೆ ಅರ್ಥವಾಗುತ್ತದೆ.

ಭಾರತದ ಪತ್ರಿಕೋದ್ಯಮದ ಒಂದು ಶ್ರೇಷ್ಠ ಪರಂಪರೆಯೇ ಇತ್ತು. ಇದು "ಅಧಿಕಾರಕ್ಕೆ ಸತ್ಯವನ್ನು ಹೇಳುವ" ತನ್ನ ಧೀಮಂತಿಕೆ ಹಾಗೂ ನೈತಿಕ ಶಕ್ತಿಯನ್ನು ರಾಜಕೀಯದ ರಾಕ್ಷಸ ಶಕ್ತಿಯ ವಿರುದ್ಧ ಉಳಿಸಿಕೊಂಡಿತ್ತು. ನೆಹರು ಅವರ ಅಧಿಕಾರದ ಕಾಲದಲ್ಲಿ 'ಶಂಕರ್ಸ್ ವೀಕ್‌ಲಿ' ತನ್ನ ಅದ್ಭುತ ವ್ಯಂಗ್ಯ ಚಿತ್ರಗಳಿಂದ ಅವರನ್ನು ಛೇಡಿಸುತ್ತಿತ್ತು. ಹಾಗೆಯೇ ಅಂದಿನ ಸಂಪಾದಕರು ಕೂಡ ತಮ್ಮ ವೈಯಕ್ತಿಕ ಘನತೆಯಿಂದಾಗಿ ಅಧಿಕಾರದಲ್ಲಿರುವ ಯಾರನ್ನಾದರೂ ಪ್ರಶ್ನಿಸುವ ತಮ್ಮ ಹಕ್ಕನ್ನು ಚಲಾಯಿಸುತ್ತಿದ್ದರು. ಗಮನಿಸಬೇಕಾದ ಅಂಶವೆಂದರೆ ತಮ್ಮ ವಿರುದ್ಧ ಬರೆಯುವ ಪತ್ರಕರ್ತರನ್ನು ಪೀಡಿಸುವುದು, ಥಳಿಸುವಂತೆ ಮಾಡುವುದು, ಕೊಲೆಮಾಡಿಸುವುದು ಇದನ್ನು ನೆಹರು ಎಂದೂ ಮಾಡಲಿಲ್ಲ. ಅಂದಿನ ಸರಕಾರಗಳು ಕೂಡ.



ಇಂದಿರಾಗಾಂಧಿ ಹೇರಿದ ತುರ್ತು ಪರಿಸ್ಥಿತಿಯಲ್ಲಿ "ತಗ್ಗಿ ನಡೆಯಿರಿ ಎಂದರೆ ತೆವಳಲು ಸಿದ್ಧರಾದ" ಪತ್ರಕರ್ತರು ಹುಟ್ಟಿಕೊಂಡರು. ಆದರೆ ಸೆರೆಮನೆಗೆ ಹೋದರೂ ಸತ್ಯವನ್ನೇ ಹೇಳುತ್ತೇವೆ ಎಂದ ಅನೇಕರಿದ್ದರು. ಈಗ ರಾಜಕೀಯ ವ್ಯವಸ್ಥೆಯು ಹಿಂಸೆ ಮತ್ತು ಹತ್ಯೆಗಳನ್ನು ಏಕೆ ಬಳಸುತ್ತಿದೆ? ಒಂದು ಕಾರಣವೆಂದರೆ ಕರ್ನಾಟಕದ ಪ್ರಜ್ಞಾವಂತ ರಾಜಕಾರಣಿಯೊಬ್ಬರು ಚರ್ಚೆಯಲ್ಲಿ ವಿವರಿಸಿದ ಹಾಗೆ ಈ ಹಿಂದೆ ಲಾಬಿಗಳು, ಮಾಫಿಯಾಗಳು ತೆರೆಮರೆಯ ಹಿಂದೆ ನಿಂತು ರಾಜಕಾರಣಿಗಳಿಂದ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಈಗ ಈ ಮಾಫಿಯಾಗಳೇ ಖುದ್ದು ರಾಜಕಾರಣಿಗಳಾಗಿ ನಮ್ಮ ಶಾಸಕರಾಗಿ, ಸಂಸದರಾಗಿ ಅವತಾರ ಹೊಂದಿವೆ. ಹೀಗಾಗಿ 'ಹೊಡಿ, ಬಡಿ ಕೊಲ್ಲು' ಈ ಮಂತ್ರವು ಅವರಿಗೆ ತಪ್ಪಾಗಿ ಕಾಣುವುದಿಲ್ಲ. ಅನೇಕ ಸಾರ್ವಜನಿಕ ಸಂಸ್ಥೆಗಳು ತಮ್ಮ ಸಮೀಕ್ಷೆಗಳಲ್ಲಿ ಸಾಕ್ಷ್ಯಾಧಾರ ಸಮೇತ ಹೇಳಿರುವಂತೆ ನಮ್ಮ ಶಾಸಕರು, ಸಂಸದರು ಹಾಗೂ ಮಂತ್ರಿಗಳಲ್ಲಿ ಬಹುಪಾಲು ಅಪರಾಧಿಗಳು, ಗಂಭೀರ ಆರೋಪವಿರುವ ಅಪರಾಧಿಗಳು. ಇವರು ಪತ್ರಕರ್ತರು ಸತ್ಯಹೇಳುವುದನ್ನು ಒಪ್ಪುವುದಿಲ್ಲ.

ಎರಡನೇ ಕಾರಣವೆಂದರೆ ದಶಕಗಳಿಂದ ಅನೇಕ ಬಲಪಂಥೀಯ ಸಂಘಟನೆಗಳು ತಾವು ಪ್ರಜಾಪ್ರಭುತ್ವದ ಶಕ್ತಿಯೇ ಆಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಂಬುವುದಿಲ್ಲವೆನ್ನುವುದನ್ನು ಸಾಬೀತು ಮಾಡುತ್ತ ಬಂದಿವೆ. ಅಲ್ಲದೆ ಇವು ಹಿಂಸೆಯನ್ನು ಆಯುಧವಾಗಿ ಬಳಸಿಕೊಳ್ಳುತ್ತಿವೆ. ಸಮಸ್ಯೆಯೆಂದರೆ ನಮ್ಮ ಪ್ರಧಾನ ರಾಜಕೀಯ ಪಕ್ಷಗಳೇ ಇಂಥ ಸಂಘಟನೆಗಳನ್ನು ಹುಟ್ಟು ಹಾಕಿ ಬೆಂಬಲಿಸುತ್ತ ಬಂದಿವೆ. ಬಿ.ಜೆ.ಪಿ ಅಧಿಕಾರಕ್ಕೆ ಬಂದ ಮೇಲೆ ಈ ಸಂಸ್ಥೆಗಳು ತಾವೇ ಸ್ವತಂತ್ರವಾಗಿ ಕೆಲಸ ಮಾಡುತ್ತಿವೆ. ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ಇತ್ತೀಚಿನ ವರ್ಷಗಳಲ್ಲಿ ಮಾಹಿತಿ ಹಕ್ಕು ಕಾರ್ಯಕರ್ತರನ್ನು, ಬರಹಗಾರರನ್ನು ಹಾಗೂ ಪತ್ರಕರ್ತರನ್ನು ಹಿಂಸೆಯ ಮೂಲಕ ಹತ್ತಿಕ್ಕುತ್ತಲೇ ಬಂದಿವೆ. ವ್ಯತ್ಯಾಸವೆಂದರೆ ಇಂದಿನ ಪ್ರಭುತ್ವದ ಹಿಂದಿರುವ ಮಾತೃಸಂಸ್ಥೆಯು ಹುಟ್ಟಿನಿಂದಲೇ ಹಿಂಸೆಯನ್ನೇ ನಂಬಿಕೊಂಡು ಬಂದಿದೆ. ಗಾಂಧಿಯವರ ಕೊಲೆಗೆ ಪರೋಕ್ಷವಾಗಿ ಕಾರಣವಾಗಿದೆ. ಭಾರತದಲ್ಲಿ ನಡೆದ ಅನೇಕ ಕೋಮುಗಲಭೆಗಳಿಗೆ ಕಾರಣವಾಗಿದೆ. ಈ ಸಂಸ್ಥೆಯು ಇಂದು ರಾಜಕೀಯ ಅಧಿಕಾರದ ಬೆಂಬಲದಿಂದ ಹಿಂಸಾ ರಾಜಕೀಯದ ಪರ್ವವನ್ನು ಆರಂಭಿಸಿದೆ.

ಬೆಂಗಳೂರಿನಲ್ಲಿ ನಡೆದ ಗೌರಿ ಲಂಕೇಶ್ ಹತ್ಯಾ ವಿರೋಧಿ "ನಾನು ಗೌರಿ" ಸಮಾವೇಶದಲ್ಲಿ ಪಿ. ಸಾಯಿನಾಥ್ ಹೇಳಿದಂತೆ ಗೌರಿ ಲಂಕೇಶ್‌ರ ಕೊಲೆ ಕೊನೆಯದಲ್ಲ. ಪಟ್ಟಿ ಸಿದ್ಧ ಮಾಡಿಕೊಂಡು ಹೊರಟಿರುವವರು ಮಾಡಲಿರುವ ಅನೇಕ ಹತ್ಯೆಗಳಲ್ಲಿ ಒಂದು. ಹಾಗಿದ್ದರೆ ಅಪಾರ ಸಂಖ್ಯೆಯಲ್ಲಿ ಸೇರಿ ಜನರು ಮಾಡುತ್ತಿರುವ ಪ್ರತಿಭಟನೆಗಳ ಫಲವೇನು? ಪರಿಣಾಮವೇನು? ಉತ್ತರಗಳು ಸುಲಭವಾಗಿ ಗೋಚರಿಸುತ್ತಿಲ್ಲ. ಒಂದಂತೂ ನಿಜ. ಎಲ್ಲಿ ಜನಸಮುದಾಯಗಳು ಬೆದರಿಕೆಗೆ ಬಗ್ಗುವುದಿಲ್ಲವೋ ಅಲ್ಲಿ ಮೊದಲು ಹಿಂಸೆಯು ಪ್ರಬಲವಾಗಿ ಬೆಳೆದರೂ ಅಂತಿಮವಾಗಿ ಪ್ರಭುತ್ವವು ಸೋಲುತ್ತದೆ. ಹೆದರುವುದಿಲ್ಲ ಎನ್ನುವವರಿಗೆ ಪ್ರಭುತ್ವವು ಹೆದರುತ್ತಿದೆ.

'ನಾನು ಗೌರಿ' ಸಮಾವೇಶದ ವಿಶೇಷವೆಂದರೆ 'ಉಡುಪಿ ಚಲೋ' ಕಾರ್ಯಕ್ರಮದಲ್ಲಿಯಂತೆ ಇಲ್ಲಿಯೂ ಯುವಜನರ ಒಂದು ಬಹುದೊಡ್ಡ ತಂಡವೇ ಇತ್ತು. ಇವರು ಕ್ರಿಯಾಶೀಲರು; ಸಂವೇದನಾಶೀಲರು; ಕವಿಗಳು, ಹಾಡುಗಾರರು, ಕೆಚ್ಚಿನ ಪ್ರತಿಭಟನಾಕಾರರೂ ಆಗಿದ್ದಾರೆ. ಅವರ ಪ್ರತಿಭಟನೆ ಸ್ವಯಂಸ್ಫೂರ್ತಿಯದಾಗಿತ್ತು. ಆದ್ದರಿಂದ ಸಹಜವೂ ಆಗಿತ್ತು. ಈಗಿರುವ ಸವಾಲೆಂದರೆ ಈ ಪ್ರತಿಭಟನೆಯನ್ನು ತಾಳಿಕೆಯುಳ್ಳ ರಾಜಕೀಯ ಶಕ್ತಿಯಾಗಿ ಪರಿವರ್ತಿಸುವುದಾಗಿದೆ. ■

ನಾಳಿನ ಕಾರ್ಯಕ್ರಮಗಳು

- **ಡಿ.ವೈ.ಎಫ್.ಐ. ರಾಜ್ಯ ಸಮ್ಮೇಳನ** ಅಕ್ಟೋಬರ್ 1–3, ಬೆಂಗಳೂರು
- **ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆಯ ಸಮಾವೇಶ** ಅಕ್ಟೋಬರ್ 5, ದೆಹಲಿ
- **"ಸಮಾಜವಾದ ಮತ್ತು ಕನ್ನಡ ಸಾಹಿತ್ಯ"** ಅಕ್ಟೋಬರ್ 8, ಬೆಂಗಳೂರು, ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿ,
- **"ಹಾಸ್ಟೆಲ್ ಹೊರಗುತ್ತಿಗೆ & ದಿನಗೂಲಿ ನೌಕರರ ಹೋರಾಟ"** ಅಕ್ಟೋಬರ್ 16 ರಂದು ಬೆಂಗಳೂರಿನಲ್ಲಿ
- ಜಂಟಿ ಭೂಮಿ ಹೋರಾಟ – ಅಹೋರಾತ್ರಿ ಧರಣಿ – ಅಕ್ಟೋಬರ್ 21 ಸಾಮಾಜಿಕ ಮಾಧ್ಯಮ ಕಾರ್ಯಾಗಾರ ಅಕ್ಟೋಬರ್ 22
- **ಜನ ಏಕತಾ ಪಂಜಿನ ಮೆರವಣಿಗೆ** ಅಕ್ಟೋಬರ್ 30, ದೇಶದಾದ್ಯಂತ
- **ಕಾರ್ಮಿಕರ ಮಹಾಪಡಾವ್** ದೆಹಲಿ, ನವೆಂಬರ್ 9–11
- **ಕಿಸಾನ್ ಸಂಸತ್ ಚಲೋ,** ದೆಹಲಿ, ನವೆಂಬರ್ 20
- **ಸಿಪಿಐ(ಎಂ) ರಾಜ್ಯ ಸಮ್ಮೇಳನ** ಜನವರಿ 5–8,ಮೂಡಬಿದರೆ
- **ಸೌಹಾರ್ದ ಕರ್ನಾಟಕ ಮಾನವ ಸರಪಣಿ** ಜನವರಿ 30, ರಾಜ್ಯದಾದ್ಯಂತ

ಸಿಪಿಐ(ಎಂ) ರಾಜ್ಯ ಸಮ್ಮೇಳನ ಲೊಗೊ ಸ್ಪರ್ಧೆ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ ಜನವರಿ 5–8ರಿಂದ ದಕ್ಷಿಣ ಕನ್ನಡದ ಮೂಡಬಿದರೆಯಲ್ಲಿ ನಡೆಯಲಿದ್ದು ಅದಕ್ಕೆ ಸೂಕ್ತವಾದ ಲೊಗೊ ವಿನ್ಯಾಸಕ್ಕೆ ಒಂದು ಸ್ಪರ್ಧೆ ಏರ್ಪಡಿಸಲು ನಿರ್ಧರಿಸಲಾಗಿದೆ. ಲೊಗೊ ದಕ್ಷಿಣ ಕನ್ನಡ ಮತ್ತು ಕರಾವಳಿ ಕರ್ನಾಟಕದ ವೈಶಿಷ್ಟ್ಯವನ್ನು ಒಳಗೊಳ್ಳಬೇಕು. ಸ್ಪರ್ಧೆಯಲ್ಲಿ ಗೆದ್ದ ಲೊಗೊ ಡಿಸೈನರ್ ಗೆ ಸೂಕ್ತ ಬಹುಮಾನ ನೀಡಲಾಗುವುದು.

Coral Draw ದಲ್ಲಿ ಮಾಡುವುದಾದರೆ cdr ಫೈಲ್, Photoshop ನಲ್ಲಿ ಮಾಡುವುದಾದರೆ psd ಫೈಲ್‌ನ್ನು ಕನಿಷ್ಟ 5 inch x 5 inch ಆಳತೆಗೆ ಲೊಗೊ ಡಿಸೈನ್ ಕಳಿಸಲು ಕೊನೆಯ ದಿನಾಂಕ ಅಕ್ಟೋಬರ್ 9, 2017. ಲೊಗೊ ಡಿಸೈನನ್ನು cpimkarnataka@gmail.com ಗೆ ಕಳಿಸಬೇಕು.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ

ಹುರುಳಿಲ್ಲದ ಬಡಾಯಿ; ಆರ್ಥಿಕತೆ ಕುಸಿತಕ್ಕೆ ದಿವ್ಯ ಮೌನ



*** ಪ್ರಕಾಶ್ ಕಾರಟ್**

ಸ್ವಯಂ-ಅಭಿನಂದನೆಗಾಗಿಯೇ ಏರ್ಪಡಿಸದಂತಿದ್ದ ಈ ಸಭೆಯಲ್ಲಿ ಮಂಡಿಸಿದ ರಾಜಕೀಯ ಗೊತ್ತುವಳಿ ಪ್ರಧಾನಿ ಹೆಸರನ್ನು 21 ಬಾರಿ ಉಲ್ಲೇಖಿಸಿದೆ, ಆದರೆ ಕೈಗಾರಿಕೆ ಉತ್ಪಾದನೆ ಕುಸಿತ, ರಫ್ತು ಸ್ಥಗಿತ, ಸಂಘಟಿತ ವಲಯದಲ್ಲಿ ಉದ್ಯೋಗದಲ್ಲಿ ಕುಸಿತ ಮತ್ತು ಹೊಸ ಉದ್ಯೋಗ ಸೃಷ್ಟಿಯಾಗದೆ ಆರ್ಥಿಕತೆ ಕುಂಟುತ್ತಿರುವುದರ ಬಗ್ಗೆ ಯಾವುದೇ ವಿವರಣೆಯನ್ನೂ ನೀಡಿಲ್ಲ. ಮುಂದಿನ 12 ತಿಂಗಳಲ್ಲಿ ಆರು ರಾಜ್ಯಗಳಿಗೆ ನಡೆಯಬೇಕಾಗಿರುವ ವಿಧಾನಸಭೆ ಚುನಾವಣೆಗಳ ಹಿನ್ನೆಲೆಯಲ್ಲಿ ಮೋದಿ ಸರಕಾರದ ಸಾಧನೆಗಳನ್ನು ಪ್ರದರ್ಶಿಸುವುದಷ್ಟೆ ಬಿಜೆಪಿ ರಾಷ್ಟ್ರೀಯ ಮಂಡಳಿಯ ವಿಸ್ತರಿತ ಸಭೆಯ ಉದ್ದೇಶ.

ನವದೆಹಲಿಯಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಅಂಗೀಕರಿಸಿದ ರಾಜಕೀಯ ಗೊತ್ತುವಳಿಯಾಗಲೀ ಅದರ ಅಧ್ಯಕ್ಷ ಅಮಿತಾ ಷಾ ಅಥವಾ ಪ್ರಧಾನಿ ನರೇಂದ್ರ ಮೋದಿ ಮಾಡಿದ ಭಾಷಣವಾಗಲೀ ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರಲ್ಲಿ ಯಾವುದೇ ಹುರುಪನ್ನು ತುಂಬುವಲ್ಲಿ ವಿಫಲವಾಗಿವೆ. ವಾಸ್ತವವಾಗಿ, ಆರ್ಥಿಕತೆಯನ್ನು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಸಭೆ ಕಡೆಗಣಿಸಿದೆ ಎಂಬ ಅತೃಪ್ತಿ ಎಲ್ಲೆಡೆ ಕಂಡುಬಂದಿದೆ. ದೇಶದ ಆಡಳಿತವನ್ನು ಕಾಡುತ್ತಿರುವ ಅನೇಕ ಕೊರತೆಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳದಿರುವ ಬಗ್ಗೆಯೂ ಟೀಕೆ ವ್ಯಕ್ತವಾಗಿದೆ.

ದೇಶದಾದ್ಯಂತದಿಂದ ಬಂದಿದ್ದ ಸುಮಾರು ಎರಡು ಸಾವಿರ ನಾಯಕರು ಮತ್ತು ಶಾಸಕರು ಭಾಗವಹಿಸಿದ್ದ ಸಭೆಯು ಪಕ್ಷ ಹಾಗೂ ಸರಕಾರದ ವ್ಯವಹಾರಗಳಲ್ಲಿ ನರೇಂದ್ರ ಮೋದಿ ಮೇಲುಗೈ ಪಡೆದಿರುವುದರ ಹಾಗೂ ಅಮಿತ್ ಷಾ ಪಕ್ಷದಲ್ಲಿ ಒಬ್ಬ ನೆಚ್ಚಿಗೆಯ ಬಲಗೈ ಬಂಟನ ಪಾತ್ರ ನಿರ್ವಹಿಸುತ್ತಿರುವುದರ ಪ್ರದರ್ಶನವೂ ಆಗಿತ್ತು. ರಾಜಕೀಯ ನಿರ್ಣಯವು ಪ್ರಧಾನಿ ಹೆಸರನ್ನು 21 ಬಾರಿ ಉಲ್ಲೇಖಿಸಿದೆ ಹಾಗೂ ವರದಿಯು ಸರಕಾರದ ಕಾರ್ಯಕ್ರಮಗಳ ವರದಿಯಂತೆ ಇತ್ತು .

ಎಲ್ಲಾ ವಾಸ್ತವಾಂಶಗಳನ್ನು ಕಡೆಗಣಿಸಿ ನೋಟುರದ್ದತಿಯನ್ನು ಒಂದು ಪ್ರಮುಖ ನಿರ್ಧಾರ ಎಂದು ಗೊತ್ತುವಳಿ ಶ್ಲಾಘಿಸಿದೆ. ಅದು "ಕಾಳಸಂತೆ ಮತ್ತು ಕಾಳಧನಿಕರ ಬೆನ್ನುಮೂಳೆ ಮುರಿದಿದೆ" ಎಂದು ಅದು ಹೇಳಿದೆ. ರದ್ದುಗೊಂಡ ಶೇಕಡ 99ರಷ್ಟು ನೋಟುಗಳು ಹೇಗೆ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸೇರಿತು ಎಂಬುದರ ಬಗ್ಗೆ ಗೊತ್ತುವಳಿ ಚಕಾರವೆತ್ತಿಲ್ಲ.

ಜಿಎಸ್‌ಟಿಗೆ ಸಂಬಂಧಿಸಿದಂತೆ, ವ್ಯಾಪಾರಿ ವಲಯದವರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ವ್ಯವಹಾರವನ್ನು ಹೆಚ್ಚು ಸುಲಭಗೊಳಿಸಲಾಗಿದೆ ಎಂದು ಅದು ಹೇಳಿಕೊಂಡಿದೆ. ಇದು ರಿಟರ್ನ್ಸ್ ಆನ್‌ಲೈನ್‌ನಲ್ಲಿ ಸಲ್ಲಿಸಲು ಇರುವಂಥ ಸೂಕ್ಷ್ಮ ಎಡರುತೊಡರುಗಳನ್ನು ಎದುರಿಸುತ್ತಿರುವ ಸಣ್ಣ ಪ್ರಮಾಣದ ಸಂಸ್ಥೆಗಳ ಸಣ್ಣ ವ್ಯಾಪಾರಸ್ಥರು ಮತ್ತು ವರ್ತಕರ ಸಂಕಟಗಳನ್ನು ಮತ್ತು ಅನೌಪಚಾರಿಕ ವಲಯವನ್ನು ಹಿಂಡುತ್ತಿರುವುದರಿಂದ ಆಗುತ್ತಿರುವ ತೊಂದರೆಗಳನ್ನು ಅಣಕಿಸುವಂತಿದೆ.

ಕೈಗಾರಿಕೆ ಉತ್ಪಾದನೆ ಕುಸಿತ, ರಫ್ತು ಸ್ಥಗಿತ, ಸಂಘಟಿತ ವಲಯದಲ್ಲಿ ಉದ್ಯೋಗದಲ್ಲಿ ಕುಸಿತ ಮತ್ತು ಹೊಸ ಉದ್ಯೋಗ ಸೃಷ್ಟಿಯಾಗದೆ ಆರ್ಥಿಕತೆ ಕುಂಟುತ್ತಿರುವುದರ ಬಗ್ಗೆ ಯಾವುದೇ ವಿವರಣೆಯನ್ನೂ ನೀಡಿಲ್ಲ.

ತನ್ನನ್ನು ತಾನೇ ಅಭಿನಂದಿಸಿಕೊಳ್ಳುವ ಈ ಗೊತ್ತುವಳಿಯ ದನಿಗೆ ಅನುಗುಣವಾಗಿ, ಜಮ್ಮು ಮತ್ತು ಕಾಶ್ಮೀರ ವಿಚಾರದಲ್ಲಿ ಸರಕಾರ ಅದ್ಭುತ ಸಾಧನೆ ಮಾಡಿದೆ ಎಂದು ಬಡಾಯಿ ಕೊಚ್ಚಿಕೊಂಡಿದೆ. 'ಭಯೋತ್ಪಾದಕರಿಗೆ ದಯೆ ತೋರದಿರುವ ಮತ್ತು ಭಯೋತ್ಪಾದಕ ಶಕ್ತಿಗಳು ಬಳಸಿಕೊಳ್ಳುವ ಸಾಮಾನ್ಯ ಜನರತ್ತ ತೋರುವ ಸೂಕ್ಷ್ಮತೆಯಲ್ಲಿ ಗಣನೀಯ ಸಮತೋಲವನ್ನು ಸರಕಾರ ಸಾಧಿಸಿದೆ' ಎಂದು ಅದು ಹೇಳಿದೆ. ಇದು ಕಾಶ್ಮೀರ ಕಣಿವೆಯ ಜನರಿಗೆ ಮತ್ತೊಮ್ಮೆ ಮಾಡಿದ ಅವಮಾನವಾಗಿದೆ ಅವರ ವಿರುದ್ಧ ಪೆಲ್ಲೆಟ್ ಗನ್‌ಗಳನ್ನು ಬಳಸಿ ಅನೇಕ ಯುವಜನರನ್ನು ಕುರುಡರನ್ನಾಗಿ ಮಾಡಿದ್ದು ಅದ್ಭಾವ . 'ಸೂಕ್ಷ್ಮತೆ'ಯ ಪ್ರದರ್ಶನವಾಗುತ್ತದೆಯೋ. ಸೇನೆಯ ಒಂದು ಘಟಕ ಫರೂಕ್ ಅಹಮದ್ ದಾರ್‌ನನ್ನು ಜೀಪ್‌ಗೆ ಮಾನವ ಗುರಾಣಿಯನ್ನಾಗಿ ಕಟ್ಟಿ ಎಳೆದೊಯ್ದಿದ್ದರಲ್ಲಿ ಕೂಡ ಈ 'ಸೂಕ್ಷ್ಮತೆ' ಕಾಣುತ್ತದೆ!. ರಾಜ್ಯದ ಸಾಮಾನ್ಯ ಜನರನ್ನು ಭಯೋತ್ಪಾದಕ ಶಕ್ತಿಗಳು ಬಳಸಿಕೊಳ್ಳುತ್ತಿವೆ ಎಂಬ ಬಿಜೆಪಿಯ ಅಭಿಪ್ರಾಯ ಕೂಡ ಅದು ಸಾಮಾನ್ಯ ಜನರು ಹಾಗೂ ಉಗ್ರಗಾಮಿಗಳ ನಡುವೆ ಯಾವುದೇ ವ್ಯತ್ಯಾಸ ಮಾಡುವುದಿಲ್ಲ ಎನ್ನುವುದನ್ನು ಬಯಲು ಮಾಡುತ್ತದೆ.

ಮಹಿಳೆಯರ ಕಲ್ಯಾಣಕ್ಕೆ ಹಾಗೂ 'ಅವರು ಗೌರವಯುತ ಜೀವನ ನಡೆಸಲು ನೆರವಾಗಿದ್ದಕ್ಕಾಗಿ'ಯೂ ಸರಕಾರವನ್ನು ಗೊತ್ತುವಳಿ ಅಭಿನಂದಿಸಿದೆ. ಅದೂ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ ವಿಡಿಯೋ ವೈರಲ್ ಆದ ಸಮಯದಲ್ಲಿ .

ಭಾರತದ ವಿದೇಶಾಂಗ ಸಂಬಂಧಗಳ ವಿಚಾರದಲ್ಲಿ ಹೇಳುವುದಾದರೆ ನೆರೆಯ ದೇಶಗಳಿಗೆ ನೀಡಲಾದ ನೆರವುಗಳನ್ನು ಮುಲಾಮು ಹಚ್ಚುವ ರೀತಿಯಲ್ಲಿ ಉಲ್ಲೇಖಿಸಲಾಗಿದೆ. ನೇಪಾಳದ ಭೂಕಂಪ ಸಂತ್ರಸ್ತರಿಗೆ ನೆರವು, ಬಾಂಗ್ಲಾದೇಶದ ಪ್ರವಾಹ ಪೀಡಿತರಿಗೆ ಸಹಾಯ ಮತ್ತು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದ ಮಾಲ್ದೀವ್ಸ್‌ಗೆ ಕೊಟ್ಟ ನೆರವುಗಳನ್ನು ಪ್ರಸ್ತಾವಿಸಲಾಗಿದೆ. ಕೋಣೆಯಲ್ಲಿರುವ ದೊಡ್ಡ ಆನೆಯ ಬಗ್ಗೆ, ಅಂದರೆ ಅಮೆರಿಕದೊಂದಿಗೆ ಹೆಚ್ಚುತ್ತಿರುವ ಸಾಮರಿಕ ಅಪ್ಪುಗೆ ಬಗ್ಗೆ ಮಾತ್ರ ಏನನ್ನೂ ಹೇಳಿಲ್ಲ.

ಗೋರಕ್ಷಕರು ಮತ್ತು ಹಂತಕ ಗುಂಪುಗಳ ಬಗ್ಗೆ ಗೊತ್ತುವಳಿ ಉದ್ದೇಶಪೂರ್ವಕ ಮೌನ ತಾಳಿದೆ. ಅದರ ಬದಲು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿ ಬಿಜೆಪಿ ಕಾರ್ಯಕರ್ತರ ವಿರುದ್ಧದ ಹಿಂಸಾಚಾರದ ಬಗ್ಗೆ ಅದು ಮಾತನಾಡಿದೆ. ಗೊತ್ತುವಳಿ ಮತ್ತು ಅಮಿತ್ ಷಾ ಭಾಷಣ ಕೇರಳದಲ್ಲಿ ಬಿಜೆಪಿ ಕಾರ್ಯಕರ್ತರ ಕೊಲೆಗಳು ಹಾಗೂ ಕೇರಳದಲ್ಲಿ ಷಾ 14 ದಿನಗಳ ಪಾದಯಾತ್ರೆ ನಡೆಸುವ ಯೋಜನೆ ಬಗ್ಗೆ ಪ್ರಸ್ತಾವಿಸಿದೆ. ಕೇರಳ ಮತ್ತು ತ್ರಿಪುರಾಗಳಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಲ್ಲಿನ ಎಡ ನೇತೃತ್ವದ ಸರಕಾರಗಳನ್ನು ಗುರಿಯಾಗಿರಿಸಿಕೊಂಡು ಸಂಘರ್ಷ ಹಾಗೂ ಹಿಂಸಾತ್ಮಕ ಹಾದಿ ತುಳಿದಿದೆ.

ಸಭೆಯ ಸಮಾರೋಪ ಭಾಷಣದಲ್ಲಿ ಪ್ರಧಾನಿ ಭ್ರಷ್ಟಾಚಾರದ ವಿರುದ್ಧ ಯಾವುದೇ ರಾಜಿ ಇಲ್ಲದ ಹೋರಾಟ ನಡೆಸುವುದಾಗಿ ಹೇಳಿದ್ದಾರೆ. ಆದರೆ, ಅಧಿಕಾರಕ್ಕೆ ಬಂದು ಮೂರು ವರ್ಷಕ್ಕಿಂತ ಹೆಚ್ಚು ಸಮಯವಾದರೂ ಲೋಕಪಾಲ್ ಸಂಸ್ಥೆಯ ಯಾಕೆ ಸ್ಥಾಪಿಸಿಲ್ಲ ಎಂಬ ಬಗ್ಗೆ ಅವರು ಮೌನ ಮುರಿದಿಲ್ಲ.

ತನ್ನ ಟ್ರೇಡ್‌ಮಾರ್ಕ್ ಶೈಲಿಯಲ್ಲಿ ಮೋದಿ ಸೌಭಾಗ್ಯ ಎಂಬ ಇನ್ನೊಂದು ಹೊಸ ಯೋಜನೆಯನ್ನು ಪ್ರಕಟಿಸಿದ್ದಾರೆ. 2018 ಡಿಸೆಂಬರ್‌ನಿಂದ ವಿದ್ಯುತ್ ಸಂಪರ್ಕ ಇಲ್ಲದ ನಾಲ್ಕು ಕೋಟಿ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಈ ಯೋಜನೆಯ ಉದ್ದೇಶ ಎನ್ನಲಾಗಿದೆ.

ಪ್ರಧಾನ ಮಂತ್ರಿ ಸೆಹಜ್ ಬಿಜ್ಲಿ ಹರ್ ಘರ್ ಯೋಜನಾ (ಸೌಭಾಗ್ಯ) – ಇದು ಹಿಂದಿನ ಯುಪಿಎ ಸರಕಾರದ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಪರಿಷ್ಕೃತ ಆವೃತ್ತಿಯಾಗಿದೆ ಅಷ್ಟೇ. ಈ ಯೋಜನೆಯನ್ನು ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಜ್ಯೋತಿ ಯೋಜನೆ ಎಂಬುದಾಗಿ ಪರಿಚಯಿಸಲಾಗಿತ್ತು. ಬಿಪಿಎಲ್ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡುವುದು ಅದರ ಉದ್ದೇಶವಾಗಿತ್ತು. ಬಿಪಿಎಲ್ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ, ಬಡತನರೇಖೆ ಮೇಲಿನ ಕುಟುಂಬಗಳು ಹತ್ತು ಕಂತುಗಳಲ್ಲಿ 500 ರೂಪಾಯಿ ಪಾವತಿ ಮಾಡಬೇಕಾಗುತ್ತದೆ. ಬಡ ಕುಟುಂಬಗಳು ಪ್ರತಿ ತಿಂಗಳು ವಿದ್ಯುತ್ ಬಿಲ್ ಪಾವತಿ ಮಾಡಬೇಕಾಗಿದ್ದು ಈ ಯೋಜನೆ ಯಾವ ರೀತಿಯಲ್ಲಿ ಸಂಪೂರ್ಣ ಗ್ರಾಮೀಣ ವಿದ್ಯುದೀಕರಣಕ್ಕೆ ನೆರವಾಗುತ್ತದೆ ಎನ್ನುವುದನ್ನು ಕಾದು ನೋಡಬೇಕು.

ಮುಂದಿನ 12 ತಿಂಗಳಲ್ಲಿ ಆರು ರಾಜ್ಯಗಳಿಗೆ ನಡೆಯಬೇಕಾಗಿರುವ ವಿಧಾನಸಭೆ ಚುನಾವಣೆಗಳ ಹಿನ್ನೆಲೆಯಲ್ಲಿ ಮೋದಿ ಸರಕಾರದ ಸಾಧನೆಗಳನ್ನು ಪ್ರದರ್ಶಿಸುವುದಷ್ಟೆ ಬಿಜೆಪಿ ರಾಷ್ಟ್ರೀಯ ಮಂಡಳಿಯ ವಿಸ್ತರಿತ ಸಭೆಯ ಉದ್ದೇಶ.

ಅನು: ವಿಶ್ವ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



ದಿನಕ್ಕೊಂದು ಹೊಸ ಘೋಷಣೆ, ಜುಮ್ಲಾಗಳಿಂದ ಜನಗಳ ಹೊಟ್ಟೆ ತುಂಬದು

–ಸೀತಾರಾಮ್ ಯೆಚುರಿ

ಕೇಂದ್ರ ಸರಕಾರ ದೇಶದ ಆರ್ಥಿಕವನ್ನು ಹಾಳುಗೆಡವುತ್ತಿದೆ. ಜಿಡಿಪಿ ಕಳೆದ ಮೂರು ವರ್ಷಗಳಲ್ಲಿ ಅತಿ ಕೆಳಕ್ಕೆ ಇಳಿದಿದೆ, ವಿಪರೀತ ಕರೆಂಟ್ ಅಕೌಂಟ್ ಕೊರತೆಯಿಂದ ಆರ್ಥಿಕವು ಮುಳುಗುತ್ತಿದೆ, ರಿಟ್ರೆಂಚ್‌ಮೆಂಟ್, ನಿರುದ್ಯೋಗ ಹಬ್ಬಿದೆ, ನೋಟುರದ್ದತಿ ಮತ್ತು ಜಿಎಸ್‌ಟಿ ಅನೌಪಚಾರಿಕ ಆರ್ಥಿಕ ವಲಯವನ್ನು ಸುಮಾರಾಗಿ ನಾಶ ಮಾಡಿಬಿಟ್ಟಿವೆ ಎಂದು ಎಎನ್‌ಐ ಸುದ್ದಿಸಂಸ್ಥೆಯ ವರದಿಗಾರರೊಂದಿಗೆ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೇಂದ್ರ ಸರಕಾರವನ್ನು ತರಾಟೆಗೆ ತಗೊಂಡಿದ್ದಾರೆ.

ಮುಂದುವರೆದು, ಕೃಷಿರಂಗದಲ್ಲಿ ಹತಾಶೆ ತುಂಬಿದೆ, ಜತೆಗೆ ಬೆಲೆಗಳ ಏರಿಕೆ, ಅದರಲ್ಲೂ ಪೆಟ್ರೋಲ್–ಡೀಸೆಲ್ ದರ ಏರಿಕೆ–ಇದು ಈ ಸರಕಾರ ಎಸಗಿರುವ ಅತಿ ಕೆಟ್ಟ ಕ್ರಿಮಿನಲ್ ಕೃತ್ಯ ಎಂದು ಅವರು ವರ್ಣಿಸಿದ್ದಾರೆ. "ಅಂತರ್ರಾಷ್ಟ್ರೀಯ ಬೆಲೆಗಳು 85% ಬಿದ್ದಿರುವಾಗ, ಇವರು ಅಬಕಾರಿಯನ್ನು 125% ದಷ್ಟು ಹೆಚ್ಚಿಸಿದ್ದಾರೆ, ಫಲಿತಾಂಶ ಎಂದರೆ, ಈ ಸರಕಾರ ತಮ್ಮ ಜುಮ್ಲಾಗಳು (ಟೊಳ್ಳು ಆಶ್ವಾಸನೆಗಳು) ಮತ್ತು ಘೋಷಣೆಗಳಿಗೇ ಶರಣಾಗಿದೆ. ದಿನಕ್ಕೊಂದು ಹೊಸ ಘೋಷಣೆ ಸೃಷ್ಟಿಸಲಾಗುತ್ತಿದೆ. ಆದರೆ ಇದು ಜನಗಳ ಹೊಟ್ಟೆಗಳನ್ನು ತುಂಬಿಸದು" ಎಂದು ಯೆಚುರಿ ಹೇಳಿದ್ದಾರೆ.

ಇನ್ನೊಂದೆಡೆಯಲ್ಲಿ ಕಾರ್ಪೊರೇಟ್‌ಗಳನ್ನು ಪ್ರೋತ್ಸಾಹಿಸುವ ಧೋರಣೆಯನ್ನು ಅನುಸರಿಸಲಾಗುತ್ತಿದೆ. "ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಬಹುದಾದ ಮೂಲರಚನೆಗಳಲ್ಲಿ ಹೂಡಿಕೆ ಮಾಡದೆ, ಕಾರ್ಪೊರೇಟ್‌ಗಳಿಗೆ ಹೆಚ್ಚೆಚ್ಚು ಸಾಲಗಳನ್ನು ಕೊಡಮಾಡುತ್ತಿದ್ದಾರೆ. ಆ ಕಾರ್ಪೊರೇಟ್‌ಗಳೋ, ಜನಗಳ ಬಳಿ ಖರೀದಿಸಲು ಹಣ ಇಲ್ಲದೆ ಆಥಿಕ ವ್ಯವಸ್ಥೆ ಸತತವಾಗಿ ಮುಳುಗುತ್ತಿರುವಾಗ, ತಮ್ಮ ಲಾಭಗಳನ್ನು ವಿಸ್ತರಿಸುವುದರಲ್ಲೇ ಮಗ್ನರಾಗಿದ್ದಾರೆ" ಎಂದು ಯೆಚುರಿ ಟೀಕಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಯಾವುದೇ ಪೂರ್ವ ಶರತ್ತುಗಳಿಲ್ಲದೆ ಸಂಬಂಧಪಟ್ಟ ಎಲ್ಲರೊಂದಿಗೆ ಮಾತುಕತೆ ನಡೆಸಲು ಸಿದ್ಧ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ರಾಮ್ ಮಾಧವ ಹೇಳಿರುವುದಕ್ಕೆ ಪ್ರತಿಕ್ರಿಯಿಸುತ್ತ, ಹಾಗೆ ಮಾಡದಂತೆ "ನಿಮ್ಮನ್ನು ತಡೆದಿರುವವರಾದರೂ ಯಾರು?" ಎಂದು ಪ್ರಶ್ನಿಸಿದ್ದಾರೆ. "ನೀವು ಹಾಗೆ ಮಾಡುತ್ತಿಲ್ಲ, ಏಕೆಂದರೆ ನೀವು ಕಾಶ್ಮೀರದ ಪರಿಸ್ಥಿತಿಯನ್ನು ನಿಮ್ಮ ಕೋಮುವಾದಿ ಧ್ರುವೀಕರಣಕ್ಕೆ ಬಳಸ ಬಯಸುತ್ತೀರಿ ಎಂಬುದು ಸ್ಪಷ್ಟ" ಎಂದು ಬಿಜೆಪಿ ಮುಖಂಡರಿಗೆ ಹೇಳಿದ್ದಾರೆ.

ಸುಪ್ರಿಂ ಕೋರ್ಟ್ ಗೋಕಾವಲುಕೋರತನದ ಕೇಸುಗಳಲ್ಲಿ ಎಲ್ಲ ರಾಜ್ಯ ಸರಕಾರಗಳು ಏನು ಮಾಡಿದ್ದೀರಿ ಎಂದು ವರದಿ ಒಪ್ಪಿಸಬೇಕು ಎಂದು ಹೇಳಿರುವುದು ಸರಿಯಾಗಿಯೇ ಇದೆ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಕೇಂದ್ರ ಸರಕಾರ ಗೋಕಾವಲುಕೋರರ ಮೇಲೆ ಒಂದು ರಾಷ್ಟ್ರೀಯ ನಿಷೇಧ ಹಾಕಿದರೆ ಮಾತ್ರವೇ ಇದಕ್ಕೆ ಪರಿಹಾರ ಸಾಧ್ಯ ಎಂದಿದ್ದಾರೆ. "ನ್ಯಾಯಾಲಯ, ಮುಸ್ಲಿಮರು ಮತ್ತು ದಲಿತರ ಮೇಲೆ ಗುರಿಯಿಟ್ಟಿರುವ, ಇವರನ್ನು ಸಾಯಿಸುತ್ತಿರುವ ಖಾಸಗಿ ಸೇನೆಗಳನ್ನು ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸರಕಾರ ನಿಷೇಧಿಸುವಂತೆ ನಿರ್ದೇಶನವನ್ನು ಕೊಡಬೇಕು" ಎಂದೂ ಯೆಚುರಿಯವರು ಹೇಳಿದರು.

ಈ ಸರಕಾರದ ನಿರ್ಗಮನದ ಕ್ಷಣಗಣನೆ ಶುರುವಾಗಿದೆ

ಇನ್ನೊಂದು ಸಂದರ್ಭದಲ್ಲಿ ಮಾತನಾಡುತ್ತ ಅವರು ಹೇಳಿದ್ದಾರೆ. ಅತ್ತ ದೊಡ್ಡ ಕಾರ್ಪೊರೇಟ್ ಸಮೂಹಗಳು ಬಾಕಿಯಿಟ್ಟುಕೊಂಡ ಸಾಲಗಳನ್ನು ವಸೂಲಿ ಮಾಡಲು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಇತ್ತ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಬಗ್ಗೆ ಅಜ್ಞಾನ ಪ್ರಕಟಿಸುತ್ತಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು.



ಮಹಾನ್ ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ಸಿಪಿಐ(ಎಂ) ದಕ್ಷಿಣ ಏಶ್ಯಾದ ಕಮ್ಯುನಿಸ್ಟ್ ಪಕ್ಷಗಳ ಒಂದು ಪ್ರಾದೇಶಿಕ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. "ದಕ್ಷಿಣ ಏಶ್ಯಾದಲ್ಲಿ ಸಾಮ್ರಾಜ್ಯಶಾಹಿ, ರಾಷ್ಟ್ರೀಯ ಸಾರ್ವಭೌಮತೆ, ಕೋಮುವಾದ ಮತ್ತು ಧಾರ್ಮಿಕ ಸಂಕುಚಿತವಾದ" ಎಂಬ ವಿಷಯದ ಮೇಲೆ ಕೇರಳದ ಕೊಚ್ಚಿಯಲ್ಲಿ ಸಪ್ಟಂಬರ್ 23 ಮತ್ತು 24ರಂದು ನಡೆದ ಈ ವಿಚಾರ ಸಂಕಿರಣದಲ್ಲಿ ಒಟ್ಟು 27 ಪ್ರತಿನಿಧಿಗಳು ಭಾಗವಹಿಸಿದ್ದರು. ಬಾಂಗ್ಲಾ ದೇಶ್, ಶ್ರೀಲಂಕಾ ಮತ್ತು ನೇಪಾಳದ ಪ್ರತಿನಿಧಿಗಳು, ಏಳು ಮಂದಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರು ಹಾಗು ಮೂವರು ಸಿಪಿಐ ಮುಖಂಡರು ಭಾಗವಹಿಸಿದ್ದರು. ಪಾಕಿಸ್ತಾನದ ಕಮುನಿಸ್ಟ್ ಪಕ್ಷದಿಂದ ಸಲಹೆ–ಸೂಚನೆಗಳು ಬಂದಿದ್ದವು ಈ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಯ ಬೆದರಿಕೆಗಳು, ರಾಷ್ಟ್ರೀಯ ಸಾರ್ವಭೌಮತೆಗೆ ಬೆದರಿಕೆ, ಕೋಮುವಾದ, ಧಾರ್ಮಿಕ ಜಗಳಗಳ ಬಗ್ಗೆ ಹಾಗೂ ಈ ಬೆದರಿಕೆಗಳಿಗೆ ಜಂಟಿಯಾಗಿ ಪ್ರತಿರೋಧ ಸಂಘಟಿಸುವ ಬಗ್ಗೆ ಚರ್ಚಿಸುವುದು ಇದರ ಉದ್ದೇಶ.

ಕೆಂಪು ಸ್ವಯಂಸೇವಕರ ಪರೇಡಿನ ಸ್ವಾಗತದಿಂದ ಆರಂಭವಾದ ವಿಚಾರ ಸಂಕಿರಣವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಉದ್ಘಾಟಿಸಿದರು. ಬಾಂಗ್ಲಾದೇಶ, ಶ್ರೀಲಂಕ ಮತ್ತು ನೇಪಾಳದಲ್ಲಿ ಪ್ರಜಾಪ್ರಭುತ್ವ ಮತ್ತು ಎಡ ಚಳುವಳಿ ಎದುರಿಸುತ್ತಿರುವ ಸನ್ನಿವೇಶಗಳ ಬಗ್ಗೆ ಪ್ರತ್ಯೇಕ ಚರ್ಚೆಗಳು ನಡೆದವು. ಸಮಾರೋಪದಲ್ಲಿಳನ್ನೊಂದು ಬೃಹತ್ ಕೆಂಪು ಸ್ವಯಂಸೇವಕರ ಪರೇಡ್ ಮತ್ತು ಸಾರ್ವಜನಿಕ ರ‍್ಯಾಲಿ ನಡೆಯಿತು.

ಭಾರತ ಮತ್ತು ಈ ಪ್ರದೇಶದ ಇತರ ದೇಶಗಳಿಗೆ ಈಗಲೂ ಪ್ರಸ್ತುತವಾದ ಅಕ್ಟೋಬರ್ ಕ್ರಾಂತಿಯ ನಾಲ್ಕು ಮುಖ್ಯ ಲಕ್ಷಣಗಳ ಬಗ್ಗೆ ಸೀತಾರಾಮ್ ಯೆಚುರಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಆರಂಭದಲ್ಲಿ ಪ್ರಸ್ತಾಪಿಸಿದರು. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಅಕ್ಟೋಬರ್ ಕ್ರಾಂತಿಯ ನಾಲ್ಕು ಚಿರಂತನ ಲಕ್ಷಣಗಳು

"ದಕ್ಷಿಣ ಏಶ್ಯಾದಲ್ಲಿ ಸಾಮ್ರಾಜ್ಯಶಾಹಿ, ರಾಷ್ಟ್ರೀಯ ಸಾರ್ವಭೌಮತೆ, ಕೋಮುವಾದ ಮತ್ತು ಧಾರ್ಮಿಕ ಸಂಕುಚಿತವಾದ"–ಈ ವಿಷಯವನ್ನು ನಾವು ನಮ್ಮ ಪ್ರದೇಶ, ದಕ್ಷಿಣ ಏಶ್ಯಾ ಎದುರಿಸುತ್ತಿರುವ ಅತ್ಯಂತ ಮಹತ್ವದ ಸವಾಲುಗಳಲ್ಲಿ ಕೆಲವದರ ಬಗ್ಗೆ ಚಿಂತನೆ ನಡೆಸಲು ಆರಿಸಿಕೊಂಡಿದ್ದೇವೆ. ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳಾಗಿ ಮೂರ್ತ ಪರಿಸ್ಥಿತಿಗಳನ್ನು ವಿಶ್ಲೇಷಿಸುವುದು ನಮ್ಮ ಕರ್ತವ್ಯ–ಅವುಗಳ ವ್ಯಾಖ್ಯಾನ ಮಾಡಲಿಕ್ಕಲ್ಲ, ಅವನ್ನು ಬದಲಿಸಲಿಕ್ಕೆ. ಈ ಪ್ರಯತ್ನದಲ್ಲಿ, ಈ ಸವಾಲುಗಳನ್ನು ವಿಶ್ಲೇಷಿಸುವುದು, ಮತ್ತು ಅವಕ್ಕೆ ಅನುಗುಣವಾದ ಸ್ಪಂದನಗಳನ್ನು ಬೆಳೆಸುವುದು ನಮಗೆ ಅನಿವಾರ್ಯ.

ಈ ನಾಲ್ಕೂ ಅಂಶಗಳ ವಿರುದ್ಧ ಹೋರಾಟಗಳು ವಿಶ್ವದ ನಮ್ಮ ಈ ಭಾಗದಲ್ಲಿ ಪರಸ್ಪರ ಹೆಣೆದುಕೊಂಡಿವೆ ಎಂಬುದು ನಮ್ಮ ಬಲವಾದ ಅಭಿಪ್ರಾಯ. ನಮ್ಮ–ನಮ್ಮ ದೇಶಗಳಲ್ಲಿ ಅಂತಿಮವಾಗಿ ಶೋಷಣೆಯ ವಿರುದ್ಧ ಮತ್ತು ನಮ್ಮ ಜನಗಳ ವಿಮೋಚನೆ ಮತ್ತು ಉದ್ಧಾರದ 'ಯುದ್ಧವನ್ನು ಗೆಲ್ಲಲು ಈ ಪ್ರತಿಯೊಂದು ರಂಗದಲ್ಲೂ ನಮ್ಮ ಕಾದಾಟಗಳಲ್ಲಿ ಗೆಲ್ಲಬೇಕಾಗಿದೆ.

ಅಕ್ಟೋಬರ್ ಕ್ರಾಂತಿಯು ಉತ್ಪನ್ನವಾದ ಸೋವಿಯೆತ್ ಒಕ್ಕೂಟ ಈಗಿಲ್ಲ, ಹಾಗಿರುವಾಗ ಇತಿಹಾಸದ ದಾಖಲೆಗಳಿಗೆ ಸೇರಿ ಬಿಟ್ಟಿರುವ ಒಂದು ಘಟನೆಯ ಶತಮಾನೋತ್ಸವವನ್ನು ಕಮ್ಯುನಿಸ್ಟರು ಏಕೆ ಆಚರಿಸುತ್ತಿದ್ದಾರೆ ಎಂದು ಕೇಳಲಾಗುತ್ತಿದೆ. ಸೋವಿಯೆತ್ ಒಕ್ಕೂಟ 20ನೇ ಶತಮಾನದಲ್ಲಿ ಮಾನವ ನಾಗರಿಕತೆಯ ಆಕಾರವನ್ನು ರೂಪಿಸುವಲ್ಲಿ ಎಷ್ಟೇ ಮಹತ್ವದ ಪಾತ್ರ ವಹಿಸಿರಬಹುದು. ಆದರೆ ನಾವೀಗ 21ನೇ ಶತಮಾನದಲ್ಲಿ ಇದ್ದೇವೆ. ಈಗ ಜೀವಂತವಾಗಿರದ ಒಂದು ಘಟನೆಯಿಂದ ಕಲಿಯುವುದೇನಿದೆ? ಸೋವಿಯೆತ್ ಒಕ್ಕೂಟ ಇಂದು ಅಸ್ತಿತ್ವದಲ್ಲಿ ಇಲ್ಲದಿರಬಹುದು. ಆದರೆ ಅಕ್ಟೋಬರ್ ಕ್ರಾಂತಿಯ ಶಾಶ್ವತ ಪರಂಪರೆ ಕನಿಷ್ಟ ನಾಲ್ಕು ಅಂಶಗಳಲ್ಲಿ ಇಂದಿನ ಜಗತ್ತಿನಲ್ಲಿ ಬಂಡವಾಳಶಾಹಿಯಿಂದ ಸಮಾಜವಾದದತ್ತ ಮಾನವ ಕುಲದ ಸಂಕ್ರಮಣದ ಅಚ್ಚುಗೂಟವಾಗೇ ಉಳಿದಿದೆ.

ಜನತೆಯ ಉದ್ಧಾರಕ್ಕಾಗಿ ಹೋರಾಟವನ್ನು ಮುನ್ನಡೆಸಲು ಅತ್ಯಗತ್ಯವಾದ ಈ ಅಂಶಗಳು ಹೀಗಿವೆ:

1. ಲೆನಿನ್ ಸಮಕಾಲೀನ ಜಗತ್ತಿನ ಮಾರ್ಕ್ಸ್‌ವಾದಿ ತಿಳುವಳಿಕೆಯನ್ನು ಬೆಳೆಸಿ ಬಂಡವಾಳಶಾಹಿಯು ಸಾಮ್ರಾಜ್ಯಶಾಹಿ ಘಟ್ಟವನ್ನು ತಲುಪಿದೆ ಎಂದು ತೆರೆದಿಟ್ಟರು. ಸಾಮ್ರಾಜ್ಯಶಾಹಿ ಇಡೀ ಜಗತ್ತನ್ನು ಬಂಡವಾಳಶಾಹಿ ಶೋಷಣೆಯ ಪರಿಧಿಯೊಳಕ್ಕೆ ತಂದಿದೆ, ಅದೇ ವೇಳೆಗೆ ಜಗತ್ತಿನ ಸಂಪನ್ಮೂಲಗಳ ಮೇಲೆ ಹತೋಟಿಯಿಡಲು ಸಾಮ್ರಾಜ್ಯಶಾಹಿ ಕೇಂದ್ರಗಳ ನಡುವಿನ ಒಂದು ಭೀಕರ ವೈರುಧ್ಯವನ್ನೂ ಅನಾವರಣಗೊಳಿಸಿತು. ಲೆನಿನ್ ಸಾಮ್ರಾಜ್ಯಶಾಹಿ ಸಂಕೋಲೆಯನ್ನು ಅದರ ಅತ್ಯಂತ ದುರ್ಬಲ ಕೊಂಡಿಯಲ್ಲಿ ಮುರಿಯಬಹುದು ಎಂಬುದನ್ನು ಸೈದ್ಧಾಂತಿಕವಾಗಿ ನಿರೂಪಿಸಿದರು. 20ನೇ ಶತಮಾನದ ಮೊದಲೆರಡು ದಶಕಗಳಲ್ಲಿ ಆ ದುರ್ಬಲ ಕೊಂಡಿ ಸಾಮ್ರಾಜ್ಯಶಾಹಿಗಳ ನಡುವಿನ ಯುದ್ಧವನ್ನು ವಿಮೋಚನೆಗಾಗಿ ಅಂತರ್ಯುದ್ಧವಾಗಿ ಪರಿವರ್ತಿಸುವ ಅವಕಾಶವನ್ನು ರಶ್ಯಾದ ಕಾರ್ಮಿಕ ವರ್ಗಕ್ಕೆ ಒದಗಿಸಿತು.

ಇಂದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣದ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯ ಎದ್ದು ಕಾಣದಿರಬಹುದು. ಆದರೂ, ಸಾಮ್ರಾಜ್ಯಶಾಹಿಯ ಮೇಲೆ ವರ್ಗದಾಳಿ ನಡೆಸದೆ ಬಂಡವಾಳದ ವರ್ಗ ಆಳ್ವಿಕೆಯ ಮೇಲೆ ರಾಜಕೀಯ ದಾಳಿ ಸಾಧ್ಯವಿಲ್ಲ. ಸಾಮ್ರಾಜ್ಯಶಾಹಿ ಜಾಗತೀಕರಣದ ಅತ್ಯಂತ ದುರ್ಬಲ ಕೊಂಡಿಗಳಾಗಿರುವ ದೇಶಗಳಲ್ಲಿ ಇಂತಹ ದಾಳಿಯನ್ನು ನಡೆಸಬೇಕಾಗಿದೆ.

2. ಸಾಮ್ರಾಜ್ಯಶಾಹಿಯ ಸಂಕೋಲೆಯನ್ನು ಮುರಿದ ಅಕ್ಟೋಬರ್ ಕ್ರಾಂತಿ ನಡೆದದ್ದು ಬಂಡವಾಳಶಾಹಿ ಅಷ್ಟೇನೂ ಮುಂದುವರೆಯದಿದ್ದ ರಶ್ಯಾದಲ್ಲಿ. ಸಮಾಜವಾದದತ್ತ ಸಂಕ್ರಮಣ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಆರಂಭವಾಗುತ್ತದೆ ಎಂಬುದು ಆಗಿದ್ದ ಪರಿಕಲ್ಪನೆ. ಆದರೆ ಮುಂದುವರೆದಿದ್ದ ಜರ್ಮನಿಯ ಕಾರ್ಮಿಕ ವರ್ಗ ಹಿಂದುಳಿದ ರಶ್ಯನ್ ಕಾರ್ಮಿಕ ವರ್ಗಕ್ಕೆ ಸಾಮಾಜಿಕ ಪರಿವರ್ತನೆಯಲ್ಲಿ ನೇತೃತ್ವ ನೀಡುತ್ತದೆ ಎಂಬ ಲೆನಿನ್ ನಿರೀಕ್ಷೆ ಅಲ್ಲಿ ಕಾರ್ಲ್ ಲೀಬ್ನೆಕ್ಟ್ ಮತ್ತು ರೋಸಾ ಲಕ್ಸೆಂಬರ್ಗ್‌ರವರ ಕೊಲೆಗಳಿಂದಾಗಿ ಈಡೇರಲಿಲ್ಲ. ರಶ್ಯಾದಲ್ಲಿ ಸಮಾಜವಾದದ ಉಳಿವಿನ ಗಂಭೀರ ಸವಾಲಿನ ಎದುರು ಲೆನಿನ್ ಜಾಗತಿಕ ಮಟ್ಟದ ಬದಲು ಒಂದು ದೇಶದಲ್ಲಿ ಸಮಾಜವಾದವನ್ನು ಕಟ್ಟುವ, ಒಂದು ಹಿಂದುಳಿದ ಆರ್ಥಿಕ ವ್ಯವಸ್ಥೆಯನ್ನು ಸಮಾಜವಾದದತ್ತ ಹೊರಳಿಸಲು ಹಂತ ಹಂತದ ಕ್ರಾಂತಿಯ ಪರಿಕಲ್ಪನೆಯನ್ನು ಬೆಳೆಸಿದರು. ಕ್ರಾಂತಿಯ ಪ್ರಜಾಪ್ರಭುತ್ವ ಹಂತವನ್ನು ಸಮಾಜವಾದಿ ಹಂತಕ್ಕೆ ಒಯ್ಯುವ ಅಕ್ಟೋಬರ್ ಕ್ರಾಂತಿಯ ಅನುಭವ ನಮಗೆ ಇಂದೂ ಪ್ರಸ್ತುತವಾಗಿದೆ.

ಭಾರತದಲ್ಲಿ ಸಿಪಿಐ(ಎಂ) ಕ್ರಾಂತಿಯು ಪ್ರಜಾಪ್ರಭುತ್ವ ಘಟ್ಟವನ್ನು, ಅಂದರೆ ಸಾಮ್ರಾಜ್ಯಶಾಹಿ–ವಿರೋಧಿ, ಭೂಮಾಲಕ–ವಿರೋಧಿ, ಗುತ್ತೇದಾರಿ ಬಂಡವಾಳಶಾಹಿ–ವಿರೋಧಿ ಕ್ರಾಂತಿಯನ್ನು ಪೂರ್ಣಗೊಳಿಸುವುದು ಕ್ರಾಂತಿಯ ಸಮಾಜವಾದಿ ಘಟ್ಟದತ್ತ ಸಾಗಲು ಪೂರ್ವತಯಾರಿ ಎಂದು ನಿರೂಪಿಸಿದೆ.

3. ಒಂದು ಹಿಂದುಳಿದ ದೇಶದಲ್ಲಿ ಕಾರ್ಮಿಕರ–ರೈತ ಸಖ್ಯವನ್ನು ಬೆಸೆಯುವ ಮೂಲಕ ಮಾತ್ರ ಕ್ರಾಂತಿ ಯಶಸ್ಸು ಪಡೆಯಲು ಸಾಧ್ಯ. ಪ್ಯಾರಿಸ್ ಕಮ್ಯೂನಿನಿಂದ ಕಲಿತ ಪಾಟವನ್ನು ಲೆನಿನ್ ಸ್ಪಷ್ಟವಾಗಿ ಮನವರಿಕೆ ಮಾಡಿಕೊಟ್ಟರು. ಕೃಷಿ ವಲಯದ ಶೋಷಿತ ವರ್ಗಗಳನ್ನು ಕ್ರಾಂತಿಯಲ್ಲಿ ಮಿತ್ರರಾಗಿ ದೃಢಗೊಳಿಸಿ ಕೊಳ್ಳಬೇಕು ಎಂದು ಪ್ರತಿಪಾದಿಸಿದರು. ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತ–ಕಾರ್ಮಿಕ ಸಖ್ಯತೆ ಸಾಮಾಜಿಕ ಪರಿವರ್ತನೆಗಾಗಿ ಸೆಣಸುತ್ತಿರುವ ಇಂದಿನ ಕ್ರಾಂತಿಕಾರರ ಕೈಗಳಲ್ಲಿ ಒಂದು ಸಮರ್ಥ ಅಸ್ತ್ರ.

ಈಗಲೂ ಮುಖ್ಯವಾಗಿ ಕೃಷಿ ಮತ್ತು ಗ್ರಾಮೀಣ ಜನಸಂಖ್ಯೆಯನ್ನೇ ಅವಲಂಬಿಸಿರುವ ಈ ಪ್ರದೇಶದ ನಮ್ಮ ದೇಶಗಳಲ್ಲಿ ಇಂತಹ ಸಖ್ಯ ವರ್ಗ ಹೋರಾಟಗಳನ್ನು ಮುಂದೊಯ್ಯುವಲ್ಲಿ ಒಂದು ಅತ್ಯಗತ್ಯ ಅಂಶ.

4. ಲೆನಿನ್‌ರವರ "ದೇಶೀಯ ಮತ್ತು ವಸಾಹತು ಪ್ರಶ್ನೆಗಳ ಮೇಲಿನ ಪ್ರಬಂಧ" ವಸಾಹತುಗಳ ಜನಗಳ ಸ್ವಾತಂತ್ರ್ಯದ ಹೋರಾಟವನ್ನು ಸಾಮ್ರಾಜ್ಯಶಾಹಿಯಿಂದ ವಿಮೋಚನೆಯ ಜಾಗತಿಕ ಹೋರಾಟದೊಂದಿಗೆ ಬೆಸೆಯುವ ಅಗತ್ಯವನ್ನು ತೀಕ್ಷ್ಣವಾಗಿ ಪ್ರತಿಪಾದಿಸಿತು. ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಕುರಿತ ಈ ಪ್ರತಿಪಾದನೆ ಎಷ್ಟು ಪ್ರಬಲವಾಗಿತ್ತೆಂದರೆ ವಿಯೆಟ್ನಾಮನ್ನು ಆಕ್ರಮಿಸಿಕೊಂಡಿದ್ದ ಫ್ರೆಂಚರ ವಿರುದ್ಧ ಹೋರಾಟಗಳನ್ನು ಸಂಘಟಿಸುತ್ತ ಫ್ರಾನ್ಸಿನಲ್ಲಿದ್ದ ಹೊ ಚಿ ಮಿನ್ಹ್ ಅದನ್ನು ಓದಿ 'ಇಲ್ಲಿದೆ ನಮ್ಮ ವಿಮೋಚನೆಯ ದಾರಿ' ಎಂದು ಗಟ್ಟಿಯಾಗಿ ಕೂಗಿ ಹೇಳಿದರಂತೆ.

ಇಂದಿನ ಜಾಗತಿಕ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಜಾಗತಿಕ ಹೋರಾಟವನ್ನು ಬಲಪಡಿಸುವುದು ಎಲ್ಲ ಕ್ರಾಂತಿಕಾರಿಗಳ ಮಹತ್ವದ ಕರ್ತವ್ಯ. ವಿವಿಧ ದೇಶಗಳಲ್ಲಿ, ಅದರಲ್ಲೂ ಲ್ಯಾಟಿನ್ ಅಮೆರಿಕಾದಲ್ಲಿ ಒಂದೆಡೆಯಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣ ಹೇರಿದ ಸಂಕಟಗಳು ಮತ್ತು ಇನ್ನೊಂದೆಡೆಯಲ್ಲಿ ಸಾಮ್ರಾಜ್ಯಶಾಹಿ ಮಿಲಿಟರಿ ಹಸ್ತಕ್ಷೇಪಗಳ ವಿರುದ್ಧ ಮೂಡಿ ಬರುತ್ತಿರುವ ಹೋರಾಟಗಳನ್ನು ಜಾಗತಿಕ ಮಟ್ಟದಲ್ಲೂ, ದೇಶದ ಮಟ್ಟದಲ್ಲೂ ಸಾಮ್ರಾಜ್ಯಶಾಹಿಯ ವಿರುದ್ಧ ಒಂದು ಏಕೀಕೃತ ಹೋರಾಟವಾಗಿ ಬೆಸೆಯಬೇಕು. ಈ ಜಾಗತಿಕ ಹೋರಾಟದ ಬಲವೇ ವಿಮೋಚನೆಯತ್ತ, ಸಮಾಜವಾದದತ್ತ ಮಾನವಕುಲದ ಸಂಕ್ರಮಣದ ವೇಗ ಮತ್ತು ಹೂರಣವನ್ನು ನಿರ್ಧರಿಸಲಿದೆ.

ಅಕ್ಟೋಬರ್ ಕ್ರಾಂತಿಯ ವಿಶಿಷ್ಟ ಪರಂಪರೆಯ ಈ ನಾಲ್ಕು ಲಕ್ಷಣಗಳು ಅದರ ಚಿರಂತನ ಪ್ರಸ್ತುತತೆಯನ್ನು ನಿರೂಪಿಸುವಂತವು.

....

ನಮ್ಮೆಲ್ಲ ಪಕ್ಷಗಳು ಲೇನಿನ್‌ರವರ 'ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆ'ಯ ಗಟ್ಟಿ ಸೂತ್ರದ ಆಧಾರದಲ್ಲಿ ನಮ್ಮ ಜನಗಳ ನಡುವೆ ವರ್ಗಶಕ್ತಿಗಳ ರಾಜಕೀಯ ಬಲಾಬಲವನ್ನು ನಮ್ಮ ಪರವಾಗಿ ಬದಲಿಸಲು ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕಾಗಿದೆ. ನಮ್ಮ ಸ್ವತಂತ್ರ ಶಕ್ತಿಯನ್ನು ಕಟ್ಟಿ ಬಂಡವಾಳದ ಆಳ್ವಿಕೆಯ ವಿರುದ್ಧ ಒಂದು ರಾಜಕೀಯ ದಾಳಿಯನ್ನು ಮಾಡಬೇಕಾಗಿದೆ.

ಆರಂಭದಲ್ಲಿ ಹೇಳಿದಂತೆ, ಈ ಎಲ್ಲ ನಾಲ್ಕು ರಂಗಗಳಲ್ಲಿ ಸಮರಗಳನ್ನು ನಾವು ಗೆಲ್ಲಬೇಕಾಗಿದೆ. ಈ ಯಶಸ್ಸಿನೊಂದಿಗೆ ಶೋಷಣೆಯ ವಿರುದ್ಧ, ನಮ್ಮ ಜನಗಳ ಉದ್ಧಾರ ಮತ್ತು ವಿಮೋಚನೆಯ ಯುದ್ಧವನ್ನು ಗೆಲ್ಲುವತ್ತ, ಮತ್ತು ಸಮಾಜವಾದವನ್ನು ಸ್ಥಾಪಿಸುವ ನಮ್ಮ ಅಂತಿಮ ಗುರಿ ಸಾಧನೆಯತ್ತ ಮುನ್ನುಗ್ಗಬೇಕು. ●



ರಾಜಸ್ಥಾನದ ರೈತರು ಸತತ ಹೋರಾಟ ನಡೆಸಿ ಅಲ್ಲಿ ಅಧಿಕಾರದಲ್ಲಿರುವ ಭಾರತೀಯ ಜನತಾ ಪಕ್ಷದ ಸರ್ಕಾರದಿಂದ 20,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಕಳೆದ ನಾಲಕ್ಕು ತಿಂಗಳಲ್ಲಿ ಈ ರೀತಿ ನಾಲಕ್ಕು ರಾಜ್ಯಗಳು ಸಾಲಮನ್ನಾವನ್ನು ಘೋಷಿಸಿವೆ. ಅಷ್ಟೇ ಅಲ್ಲ. ಇದೇ ಬಗೆಯ ರೈತ ಹೋರಾಟಗಳು ದೇಶದ ಇನ್ನೂ ಹಲವು ಕಡೆ ಹರಡಿಕೊಳ್ಳುವ ಸಾಧ್ಯತೆಗಳಿವೆ. ಇವೆಲ್ಲವೂ ಆ ರಾಜ್ಯಗಳಲ್ಲಿ ವಿತ್ತೀಯ ಮತ್ತು ರಾಜಕೀಯ ಬಿಕ್ಕಟ್ಟುಗಳನ್ನು ಸೃಷ್ಟಿಸಲಿವೆ. ಹಾಗಿದ್ದರೆ ಇದು ಬಿಜೆಪಿ ಅತ್ಯಂತ ಹೆಗ್ಗಳಿಕೆಯಿಂದ ಮುಂದುವರೆಸಿದ್ದ "ಆರ್ಥಿಕ ಸುಧಾರಣೆ" ಕ್ರಮಗಳಿಂದ ಹಿಂದೆ ಸರಿಯುವಂತೆ ಮಾಡಬಹುದೇ?



(ಇಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯ ಸಂಪಾದಕೀಯ)

ಪಂಜಾಬ್ ಮತ್ತು ಉತ್ತರಪ್ರದೇಶದಲ್ಲಿ ಘೋಷಿಸಲಾಗಿರುವ ಸಾಲಮನ್ನಾಗಳು ಆಯಾ ವಿಧಾನಸಭಾ ಚುನಾವಣೆಗಳಲ್ಲಿ ನೀಡಲಾದ ಭರವಸೆಗಳ ಭಾಗವಾಗಿ ಜಾರಿಗೆ ಬಂದ ಯೋಜನೆಗಳಾಗಿವೆ. ಅವುಗಳನ್ನು ಹೊರತುಪಡಿಸಿ ನೋಡಿದಲ್ಲಿ, ಈ ಗ್ರಾಮೀಣ–ಕೃಷಿ ಪ್ರತಿರೋಧದ ಅಲೆಯನ್ನು ಸಂಘಟಿಸಿ ಪ್ರತಿನಿಧಿಸಿದ ಏಕೈಕ ವಿರೋಧ ಪಕ್ಷವೆಂದರೆ ಸಿಪಿಎಂ ಪಕ್ಷವಾಗಿದೆ. ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ನಡೆದ ಸಾಮೂಹಿಕ ಧರಣಿಗಳು, ರೂಪಿಸಲಾದ ಹಕ್ಕೊತ್ತಾಯಗಳು, ಸರ್ಕಾರದೊಂದಿಗೆ ನಡೆಸಿದ ಮಾತುಕತೆಗಳಲ್ಲಿ ಆಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್) ಮುಂಚೂಣಿಯಲ್ಲಿದ್ದು, ಇದೀಗ ಹರ್ಯಾಣದಲ್ಲೂ ಹೋರಾಟವನ್ನು ಮುನ್ನಡೆಸಲು ಅಣಿಯಾಗುತ್ತಿದೆ. ಈ ಅಸಂಘಟಿತ ಮತ್ತು ಅನೌಪಚಾರಿಕ ಉದ್ಯೋಗಗಳ ಯುಗದಲ್ಲಿ ಸಾಂಪ್ರದಾಯಿಕ ಟ್ರೇಡ್ ಯೂನಿಯನ್ ಹೋರಾಟಗಳು ಗರಿಗೆದರುತ್ತಾ ಕಾರ್ಮಿಕ ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಬಗ್ಗಿಸಿರುವ ಈ ಪರಿ ನಿಜಕ್ಕೂ ಹೃದಯಸ್ಪರ್ಶಿಯಾಗಿದೆ.

ಭಾರತೀಯ ಜನತಾ ಪಕ್ಷದ ದುರ್ಬಲ ಕೊಂಡಿ

ರಾಜಸ್ಥಾನದ ಶೆಕಾವತ್ ಪ್ರಾಂತ್ಯದ ಸಿಕಾರ್, ಜುನ್‌ಜುನು ಮತ್ತು ಚುರು ಜಿಲ್ಲೆಯ ರೈತರು 2017ರ ಸೆಪ್ಟೆಂಬರ್ 1 ರಂದು ಸಿಕಾರ್ ನಲ್ಲಿ ಸಭೆ ಸೇರಿ ಅನಿರ್ದಿಷ್ಟ ಧರಣಿಯನ್ನು ಪ್ರಾರಂಭಿಸಿದರು. ನೋಟು ನಿಷೇಧದ ನಂತರದಲ್ಲಿ ಕುಸಿದ ಬೆಲೆಯ ಸಮಸ್ಯೆಗಳನ್ನೂ ಒಳಗೊಂಡಂತೆ ಆ ಪ್ರದೇಶದಲ್ಲಿ ಕೃಷಿಯು ಎದುರಿಸುತ್ತಿದ್ದ ಹಲವಾರು ಸಮಸ್ಯೆಗಳಿಂದ ರೈತರು ತತ್ತರಿಸಿದ್ದರು, ಹೀಗಾಗಿ 2017ರ ಜೂನ್‌ನಿಂದಲೇ ಇದರ ಬಗ್ಗೆ ದೊಡ್ಡ ಹೋರಾಟಗಳನ್ನು ನಡೆಸುವ ಹಲವಾರು ಪ್ರಯತ್ನಗಳೂ ಕೂಡ ನಡೆದು ವಿಫಲವಾಗಿದ್ದವು. ಎಂದಿನಂತೆ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರವು ರೈತಾಪಿಯ ಸಮಸ್ಯೆಗಳನ್ನು ಅರಿಯುವ ಗೋಜಿಗೇ ಹೋಗಲಿಲ್ಲ. ಬದಲಿಗೆ, ರೈತರ ಪ್ರತಿಭಟನೆಯನ್ನು ಮತ್ತು ಐಕ್ಯತೆಯನ್ನು ಮುರಿಯುವ ಸಂಚುಗಳಲ್ಲಿ ತೊಡಗಿತು. ಆದರೆ ಈ ಪ್ರಯತ್ನಗಳನ್ನು ಸಿಪಿಎಂ ಪಕ್ಷದ ಆಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್) ನೇತೃತ್ವದಲ್ಲಿ ಗಟ್ಟಿಯಾಗಿ ಮುಂದುವರೆಯುತ್ತಲೇ ಹೋದ ಪ್ರತಿರೋಧವು ವಿಫಲಗೊಳಿಸಿತು. ಈ ಬೃಹತ್ ಪ್ರತಿರೋಧದಲ್ಲಿ ಸಾಮಾನ್ಯ ಜನರೂ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳತೊಡಗಿದರು. ಜನ ಸಾಮಾನ್ಯರು, ಉದ್ಯಮಿಗಳು, ಜಿಲ್ಲಾ ಕೇಂದ್ರಗಳ ವರ್ತಕರು, ಸಣ್ಣಪುಟ್ಟ ಪಟ್ಟಣಗಳಲ್ಲಿನ ಸೇವಾ ವಲಯದ ಹಲವಾರು ಕಾರ್ಮಿಕ ಸಂಘಟನೆಗಳು ಈ ಪ್ರತಿಭಟನೆಗಳಲ್ಲಿ ಭಾಗವಹಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ, ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಬೀದಿಗಿಳಿದರು. ಹಳ್ಳಿ ಮತ್ತು ಪಟ್ಟಣಗಳಲ್ಲಿ ಜನರು ವಿಧಿಸಿದ್ದ ಕರ್ಫ್ಯೂ ಮತ್ತು ಸಂಪೂರ್ಣ ಬಂದ್‌ಗಳು ಯಶಸ್ವಿಯಾಗಿ ಜಾರಿಯಾಗುವಂತೆ ನೋಡಿಕೊಂಡರು. ಈ ವರ್ಷ ದೇಶದ ಇತರೆಡಗಳಲ್ಲಿ ಭುಗಿಲೆದ್ದ ರೈತ ಪ್ರತಿಭಟನೆಗಳಿಗಿಂತ ಭಿನ್ನವಾಗಿ ರಾಜಸ್ಥಾನದ ಈ ರೈತ ಹೋರಾಟವನ್ನು ಗ್ರಾಮೀಣ ಸಮಾಜದ ಎಲ್ಲಾ ವರ್ಗಗಳು ಪಾಲ್ಗೊಳ್ಳುವಂತೆ ಸಂಘಟಿಸಲಾಗಿತ್ತು. ಇದು ದೇಶದಲ್ಲಿ ಮುಂದುವರೆಯುತ್ತಲೇ ಇರುವ ಗ್ರಾಮೀಣ ಸಂಕ್ಷೋಭೆಯ ಸರಣಿಯಲ್ಲಿ ಒಂದು ಮಹತ್ತರ ಬದಲಾವಣೆಯನ್ನು ಕೂಡಾ ಸೂಚಿಸುತ್ತದೆ.

ಬಿಜೆಪಿಯ ಆರ್ಥಿಕಾ ಸುಧಾರಣ ಕಾರ್ಯಸೂಚಿಯಲ್ಲಿ ಗ್ರಾಮೀಣ ಭಾರತವು ಚರ್ಚೆಯ ಪ್ರಧಾನ ವಿಷಯವಾಗಿದ್ದು ಬಹಳ ಅಪರೂಪ. ಆ ಪಕ್ಷದ ರಾಜಕೀಯ ಚಟುವಟಿಕೆಗಳು ಮೊದಲಿಂದಲೂ ನಗರ ಮತ್ತು ಪಟ್ಟಣಗಳಿಗೆ ಮಾತ್ರ ಸೀಮಿತವಾಗಿತ್ತು. ಮತ್ತು ಈಗಲೂ ದೇಶವ್ಯಾಪಿ ನಗರ ಮತ್ತು ಪಟ್ಟಣಗಳ ಸಣ್ಣ ಮತ್ತು ದೊಡ್ಡ ಬಜಾರುಗಳು ಮತ್ತು ಮಂಡಿಗಳ ಮೇಲೆ ಪ್ರಭಾವ ಬೀರುವಷ್ಟು ಶಕ್ತರಾಗಿರುವ ಬ್ರಾಹ್ಮಣರು ಮತ್ತು ಬನಿಯಾಗಳೇ ಅದರ ಮುಖ್ಯ ಕಾರ್ಯಕರ್ತಗಣದಲ್ಲಿ ಪ್ರಧಾನವಾಗಿದ್ದಾರೆ. 2014ರ ತನಕ ಗ್ರಾಮೀಣ ಪ್ರದೇಶದಲ್ಲಿ ಅದಕ್ಕೆ ಬಲವಾದ ಬೇರುಗಳಿರಲಿಲ್ಲ. ಆದರೆ ಮೋದಿ ಅಲೆಯಿಂದಾಗಿ 2014ರಲ್ಲಿ ರಾಜಸ್ಥಾನದ ಗ್ರಾಮೀಣ ರೈತಾಪಿಯು ನಿರ್ಣಾಯಕವಾಗಿ ಬಿಜೆಪಿಯ ಪರ ವಾಲಿದರು ಎಂದು ಹೇಳಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಗ್ರಾಮೀಣ ಬೆಂಬಲ ಬಿಜೆಪಿಯ ಕೈ ತಪ್ಪುತ್ತಿರುವಂತಿದೆ. ಪ್ರಾಯಶಃ ಬಿಜೆಪಿಯ ಆರ್ಥಿಕ ಸುಧಾರಣ ಯೋಜನೆಗಳಲ್ಲಿ "ಗ್ರಾಮೀಣ" ವೆಂಬುದು ಎಂದಿಗೂ ಒಂದು ಅಂತರ್ಗತ ಭಾಗವಾಗದಿರುವುದು ಇದಕ್ಕೆ ಕಾರಣವಾಗಿರಬಹುದು.

ಉದಾರೀಕರಣದ 27 ವರ್ಷಗಳ ನಂತರವೂ ಗ್ರಾಮೀಣ ಅರ್ಥಿಕತೆಯ ಪ್ರಧಾನ ಭಾಗ ಕೃಷಿಯೇ ಆಗಿದೆ. ಆರ್ಥಿಕತೆಯ ಮೂಲಭೂತ ಬದಲಾವಣೆಗಳು ದೇಶದ ಶ್ರಮಶಕ್ತಿಯ ಸ್ವರೂಪದಲ್ಲಿ ಯಾವ ಬದಲಾವಣೆಗಳನ್ನು ತಂದಿಲ್ಲ. ದೇಶದ ಶ್ರಮಶಕ್ತಿಯ ಶೇ.60 ಭಾಗ ಕೃಷಿಯಲ್ಲಿ ತೊಡಗಿದ್ದರೂ, ಒಟ್ಟಾರೆ ಅಂತರಿಕ ಉತ್ಪನ್ನದಲ್ಲಿ ಕೃಷಿಯ ಭಾಗ ಕೇವಲ ಶೇ.15 ಮಾತ್ರ. ಕೃಷಿಯೇತರ ವಲಯದಲ್ಲಿ ಉದ್ಯೋಗ ಸೃಷ್ಟಿಯಾಗದಿರುವುದು, ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಾಗದಿರುವುದು ಮತ್ತು ಬಡವರ ಕಲ್ಯಾಣ ಯೋಜನೆಗಳ ಮೇಲಿನ ವೆಚ್ಚ ದಿನೇದಿನೇ ಕಡಿಮೆಯಾಗುತ್ತಿರುವುದರಿಂದ ಕೋಟ್ಯಾಂತರ ಶ್ರಮಜೀವಿಗಳು ಕೃಷಿ ಮತ್ತು ಕೃಷಿಯಾಧಾರಿತ ಸೇವೆಗಳಲ್ಲೇ ಬಂಧಿತರಾಗಿದ್ದಾರೆ. ಹೀಗಾಗಿ ಕೃಷಿಯ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯದಿಂದಾಗಿ ಇಡೀ ಗ್ರಾಮೀಣ ಆರ್ಥಿಕತೆಯನ್ನೇ ನಿರ್ಲಕ್ಷ್ಯ ಮಾಡಿದಂತಾಗಿದೆ.

ಬಿಜೆಪಿಯ ಇತ್ತೀಚಿನ ಮೂರು ನೀತಿಗಳಾದ ಗೋಹತ್ಯಾ ನಿಷೇಧ, ನೋಟು ನಿಷೇಧ ಮತ್ತು ಸರಕು ಹಾಗೂ ಸೇವಾ ತೆರಿಗೆ (ಜಿಎಸ್‌ಟಿ)ಗಳು ರೈತಾಪಿಯನ್ನು ಮತ್ತು ಗ್ರಾಮೀಣ ಆರ್ಥಿಕತೆಯನ್ನು ನೇರವಾಗಿ ಘಾಸಿಗೊಳಿಸಿದೆ. ನೋಟು ನಿಷೇಧವು ಗ್ರಾಮೀಣ ಮಾರುಕಟ್ಟೆ ಮತ್ತು ರೈತಾಪಿಯ ಚಲನೆಗೆ ಅತ್ಯಗತ್ಯವಾಗಿ ಬೇಕಾಗಿದ್ದ ಚಾಲ್ತಿ ನಗದನ್ನೇ ನಾಶಮಾಡಿತು. ಹೀಗಾಗಿ ಬಂಪರ್ ಬೆಳೆ ಬಂದ ವರ್ಷದಲ್ಲೂ ಬೆಲೆ ಕುಸಿತ ಉಂಟಾಗಿದ್ದರಿಂದ ರೈತಾಪಿಯ ಆದಾಯ ಕುಸಿಯಿತು. ಅದು ಮುಂದಿನ ಬೆಳೆಗೆ ಬಿತ್ತನೆಯನ್ನೂ ಮಾಡದ ಪರಿಸ್ಥಿತಿಗೆ ರೈತಾಪಿಯನ್ನು ದೂಡಿತು. ಈ ವಿದ್ಯಮಾನವೇ ದೇಶಾದ್ಯಂತ ರೈತಾಪಿಯು ಸಾಲಮನ್ನಾ ಮಾಡಬೇಕೆಂದು ಮಾಡುತ್ತಿರುವ ಒಕ್ಕೊರಲ ಬೇಡಿಕೆಗೆ ಕಾರಣವನ್ನು ವಿವರಿಸುತ್ತದೆ. ಹಾಗೆ ನೋಡಿದರೆ, ಸಾಲಮನ್ನಾವು ಮುಂದಿನ ಬೆಳೆಗೆ ಸಾಲ ತೆಗೆದುಕೊಳ್ಳಲು ರೈತಾಪಿಯನ್ನು ಅರ್ಹಗೊಳಿಸುತ್ತದಷ್ಟೆ. ಎರಡನೆಯದಾಗಿ, ಬಿಕ್ಕಟ್ಟಿನ ಕಾಲದಲ್ಲಿ ತಮ್ಮಲ್ಲಿರುವ ಜಾನುವಾರುಗಳನ್ನು ಮಾರುವ ಮೂಲಕ ರೈತಾಪಿ ತಮ್ಮ ತುರ್ತು ಬಿಕ್ಕಟ್ಟುಗಳಿಂದ ಪಾರಾಗುತ್ತಾರೆ. ಆದರೆ, ಜಾನುವಾರು ಹತ್ಯಾ ಮತ್ತು ಗೋ ಮಾಂಸ ಮಾರಾಟ ನಿಷೇಧಗಳು ಹಾಗೂ ಗೋ ರಕ್ಷಣೆಯ ಹೆಸರಿನಲ್ಲಿ ಪುಂಡಾಟಿಕೆ ಮತ್ತು ಹಿಂಸಾಚಾರಗಳನ್ನು ನಡೆಸುವವರ ಹಾವಳಿಯಿಂದಾಗಿ ಈ ಮಾರುಕಟ್ಟೆಯೇ ಸಂಪೂರ್ಣವಾಗಿ ಕುಸಿದು ಬೀಳುವಂತಾಯಿತು. ಜಾನುವಾರುಗಳ ನಿರ್ವಹಣಾ ವೆಚ್ಚ ಹೆಚ್ಚುತ್ತಿರುವುದರಿಂದ ಬೀಡಾಡಿ ಹಸು–ದನಗಳ ಸಂಖ್ಯೆ ಹೆಚ್ಚುತ್ತಿದ್ದು ಅವು ರೈತರ ಬೆಳೆಯನ್ನೂ ನಾಶಮಾಡುತ್ತಿವೆ. ಇದನ್ನು ನಿಯಂತ್ರಿಸಬೇಕೆಂಬುದು ಸಹ ರಾಜಸ್ಥಾನದ ರೈತರ ಬೇಡಿಕೆಗಳಲ್ಲಿ ಒಂದಾಗಿ–ತ್ತು. ಮೂರನೆಯದಾಗಿ ಸರಕು ಮತ್ತು ಸೇವಾ ತೆರಿಗೆಯು (ಜಿಎಸ್‌ಟಿ) ಸಣ್ಣ ಉತ್ಪಾದಕರು ಮತ್ತು ಸೇವಾ ಪೂರೈಕೆದಾರರ ಭವಿಷ್ಯಕ್ಕೆ ದೊಡ್ಡ ಪೆಟ್ಟು–ಕೊಟ್ಟಿದ್ದು ರೈತಾಪಿಯ ಹೊರಾಟಕ್ಕೆ ಮತ್ತಷ್ಟು ಬೆಂಬಲ ಹರಿದು ಬರುವಂತಾಯಿತು. ಅಷ್ಟು ಮಾತ್ರವಲ್ಲದೆ ಜಿಎಸ್‌ಟಿಯಿಂದ ರೈತಾಪಿಯ ಹೂಡಿಕಾ ವೆಚ್ಚವೂ ಹೆಚ್ಚಾಗಲಿದೆ. ಈ ಸದ್ಯಕ್ಕೆ ಈ ಮೂರೂ ತಥಾಕಥಿತ ಸುಧಾರಣೆಗಳ ಬಗ್ಗೆ ಸಾರ್ವಜನಿಕ ಚರ್ಚೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದಂತೆ ಕಾಣುತ್ತಿದ್ದರೂ ವಾಸ್ತವದಲ್ಲಿ ಅದರಿಂದ ಉಂಟಾಗುತ್ತಿರುವ ಪರಿಣಾಮಗಳು ಈ ಗ್ರಹಿಕೆಗಳನ್ನು ಬಹಳ ಬೇಗ ಬದಲಿಸಲಿವೆ.

ಪಂಜಾಬ್ ಮತ್ತು ಉತ್ತರಪ್ರದೇಶದಲ್ಲಿ ಘೋಷಿಸಲಾಗಿರುವ ಸಾಲಮನ್ನಾಗಳು ಆಯಾ ವಿಧಾನಸಭಾ ಚುನಾವಣೆಗಳಲ್ಲಿ ನೀಡಲಾದ ಭರವಸೆಗಳ ಭಾಗವಾಗಿ ಜಾರಿಗೆ ಬಂದ ಯೋಜನೆಗಳಾಗಿವೆ. ಅವುಗಳನ್ನು ಹೊರತುಪಡಿಸಿ ನೋಡಿದಲ್ಲಿ, ಈ ಗ್ರಾಮೀಣ–ಕೃಷಿ ಪ್ರತಿರೋಧದ ಅಲೆಯನ್ನು ಸಂಘಟಿಸಿ ಪ್ರತಿನಿಧಿಸಿದ ಏಕೈಕ ವಿರೋಧ ಪಕ್ಷವೆಂದರೆ ಸಿಪಿಎಂ ಪಕ್ಷವಾಗಿದೆ. ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ನಡೆದ ಸಾಮೂಹಿಕ ಧರಣಿಗಳು, ರೂಪಿಸಲಾದ ಹಕ್ಕೊತ್ತಾಯಗಳು, ಸರ್ಕಾರದೊಂದಿಗೆ ನಡೆಸಿದ ಮಾತುಕತೆಗಳಲ್ಲಿ ಆಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್) ಮುಂಚೂಣಿಯಲ್ಲಿದ್ದು, ಇದೀಗ ಹರ್ಯಾಣದಲ್ಲೂ ಹೋರಾಟವನ್ನು ಮುನ್ನಡೆಸಲು ಅಣಿಯಾಗುತ್ತಿದೆ. ಈ ಅಸಂಘಟಿತ ಮತ್ತು ಅನೌಪಚಾರಿಕ ಉದ್ಯೋಗಗಳ ಯುಗದಲ್ಲಿ ಸಾಂಪ್ರದಾಯಿಕ ಟ್ರೇಡ್ ಯೂನಿಯನ್ ಹೋರಾಟಗಳು ಗರಿಗೆದರುತ್ತಾ ಕಾರ್ಮಿಕ ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಬಗ್ಗಿಸಿರುವ ಈ ಪರಿ ನಿಜಕ್ಕೂ ಹೃದಯಸ್ಪರ್ಶಿಯಾಗಿದೆ. ಈ ಹೋರಾಟಗಳನ್ನು ರಾಜಕೀಯ ಗಳಿಕೆಯಾಗಿ ಪರಿವರ್ತಿಸಿಕೊಂಡು ಕುಸಿಯುತ್ತಲೇ ಇರುವ ತನ್ನ ಚುನಾವಣಾ ಸಾಧನೆಗಳನ್ನು ಉತ್ತಮಪಡಿಸಿಕೊಳ್ಳುವುದು ಹೇಗೆ ಎಂಬುದೇ ಇಂದು ಎಡಪಕ್ಷಗಳ ಮುಂದಿರುವ ಸವಾಲಾಗಿದೆ. ಮತ್ತೊಂದು ಕಡೆ ತನ್ನ "ನವ ಭಾರತ"ದ ಪರಿಪ್ರೇಕ್ಷ್ಯದಲ್ಲಿ ಗ್ರಾಮೀಣವನ್ನು ಹೇಗೆ ಒಳಗೊಳ್ಳುವುದು ಎಂಬುದೇ ಬಿಜೆಪಿಯ ಮುಂದಿರುವ ಸವಾಲಾಗಿದೆ.

ಕೃಪೆ: Economic and Political Weekly
Sep 23, 2017. Vol. 52. No. 38

ಅನು: ಶಿವಸುಂದರ್



ಪ್ರಸಕ್ತ

ಕೆ.ಎಸ್. ವಿಮಲಾ

ಪುರುಷ ಪ್ರಧಾನ ಪಾಳೆಯಗಾರೀ ಮೌಲ್ಯಗಳ ಸಾಮರ್ಥ್ಯವನ್ನು ಗುರುತಿಸಬೇಕಾದುದು ಇಲ್ಲಿಯೇ. ಅದರ ಬೇರುಗಳು ಎಷ್ಟು ಗಟ್ಟಿಯಾಗಿವೆ ಎಂದರೆ ಅದು ಕೇವಲ ಅತ್ಯಂತ ಬಡ ಕೂಲಿ ಮಾಡಿ ಬದುಕುವ ಮಥುರಾ, ಸಮಾಜ ಸೇವೆಯಲ್ಲಿ ತೊಡಗಿಕೊಂಡು ಬಾಲ್ಯ ವಿವಾಹವನ್ನು ತಡೆಯುವ ಕಾಯಕದಲ್ಲಿ ತೊಡಗಿ–ಕೊಂಡ ಭಾಂವ್ರಿದೇವಿ, ಗುರುವೆಂದು ನಂಬಿ ಪೂಜಿಸಿದ ಮಠದ ಸ್ವಾಮಿ ತನ್ನ ಮೇಲೆ ಅತ್ಯಾಚಾರ ನಡೆಸಿದರೆಂದು ನ್ಯಾಯಕ್ಕಾಗಿ ಕೇಳುತ್ತಿರುವ ಪ್ರೇಮಲತಾ ಇವರುಗಳು ಮಾತ್ರವಲ್ಲ ಅಮೇರಿಕಾದ ಪ್ರಜೆಯಾಗಿದ್ದು ರಾಜತಾಂತ್ರಿಕ ವ್ಯವಸ್ಥೆಯೇ ದೂರು ನೀಡಲು ಅಗತ್ಯವಾದ ಕ್ರಮಗಳನ್ನು ಕೈಗೊಂಡಾಗಲೂ ನ್ಯಾಯ ಸುಲಭವಾಗಿ ದಕ್ಕುವುದಿಲ್ಲ.

ಪೀಪ್ಲೀ ಲೈವ್ ಸಹ ನಿರ್ದೇಶಕ ಅತ್ಯಾಚಾರ ಕೇಸಿನಲ್ಲಿ ಖುಲಾಸೆ: ದೆಹಲಿ ಹೈ ಕೋರ್ಟಿನ ದಿಗಿಲು ಹುಟ್ಟಿಸುವ ತೀರ್ಪು

ನಿನಗೆ ಸಮ್ಮತಿ ಇತ್ತೇ.........ನೀನು ಗಟ್ಟಿಯಾಗಿ 'ಇಲ್ಲ' 'ಸಮ್ಮತಿ ಇಲ್ಲ'ವೆಂದು ಹೇಳಿದ್ದೆಯಾ? ಅದು ಯಾರಿಗಾದರೂ ಕೇಳುವಂತಿತ್ತಾ?....ಈ ಶಬ್ದ, ಇದೇ ಶಬ್ದ ಮಾತು, ಅದೇ ಭಾವ, ಒಳಗಿನ ಧ್ವನಿ ಅದೇ ಸ್ವರ ಮಾತ್ರ ಬೇರೆ. 80 ರ ದಶಕದಲ್ಲಿಯೂ ಕೇಳಿಸಿತ್ತು ಮತ್ತು ಆಗಾಗ ಆಗಾಗ ಮರೆಯಲೇ ಬಾರದು ಸದಾ ನೆನಪಿಸುತ್ತಲೇ ಇರಬೇಕೆನ್ನುವ ಹಠವೋ ಎಂಬಂತೆ ಕೇಳುತ್ತಲೇ ಇದೆ. ಯಾರು ಕಿವಿ ಮುಚ್ಚಿ ಕೊಂಡರೂ ಗಟ್ಟಿ ಧ್ವನಿಯಲ್ಲಿ ಕೇಳಿಸುತ್ತಲೇ ಇದೆ. 1972 ರಲ್ಲಿ ನಡೆದ ಮಹಾರಾಷ್ಟ್ರದ ಚಂದಾಪುರದಲ್ಲಿ ಮಥುರಾ ಎಂಬ ಆದಿವಾಸಿ ಅಪ್ರಾಪ್ತ ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಪ್ರಕರಣದ ತೀರ್ಪಿನ ಕೆಲವು ಭಾಗಗಳನ್ನು ತಿದ್ದಿ ಹೊಸ ರೂಪ ಕೊಟ್ಟಂತೆ ಇದೆ, ಈಗ ಬಂದ ಅತ್ಯಾಚಾರ ಪ್ರಕರಣದ ತೀರ್ಪು. ಪೀಪಲೀ ಲೈವ್ ಸಿನಿಮಾ ಸಹ ನಿರ್ದೇಶಕರನ್ನು ಅತ್ಯಾಚಾರ ಆರೋಪದಿಂದ ದೆಹಲಿ ಉಚ್ಚ ನ್ಯಾಯಾಲಯ ಮುಕ್ತಗೊಳಿಸಿ ತನ್ನ ಅಭಿಪ್ರಾಯ ಹೇಳಿದೆ, ಕ್ಷೀಣ ಅಥವಾ ದುರ್ಬಲವಾಗಿ ಅಸಮ್ಮತಿಯನ್ನು ಸೂಚಿಸಿದರೆ ಅದು ಅಸಮ್ಮತಿಯಾಗಲಾರದು!. ಅದೂ ಹಾಗೆ ವ್ಯಕ್ತಪಡಿಸಿದವಳು ವಿದ್ಯಾವಂತೆಯಾಗಿದ್ದರಂತೂ ಅದು ಅತ್ಯಾಚಾರವಾಗಲಾರದು. ಅಂದು ಮಥುರಾ, ಆಕೆ ಪುಟ್ಟ ಹುಡುಗಿ ಆದರೂ ಹೇಳಲಾಗಿತ್ತು 'ಆಕೆಗೆ ಈ ಹಿಂದೆ ಲೈಂಗಿಕ ಕ್ರಿಯೆಯ ಅನುಭವವಿತ್ತು. ಹಾಗಾಗಿ ಆಕೆಯೇ ತನ್ನ ಮೇಲೆ ಅತ್ಯಾಚಾರ ಎಸಗಿದವರನ್ನು ಲೈಂಗಿಕ ಕ್ರಿಯೆಗೆ ಆಹ್ವಾನಿಸಿರಬಹುದು!!, ಅವಳು ಗಟ್ಟಿಯಾಗಿ ಕೂಗಿ ಕೊಂಡಿಲ್ಲ, ಕೂಗಿಕೊಂಡಿದ್ದರೆ ಹೊರಗಡೆ ಇದ್ದವರಿಗೆ ಕೇಳಿಸುತ್ತಿತ್ತು.... ಇಂದು ಈಕೆ ವಿದ್ಯಾವಂತೆ ಮತ್ತು ಅವರಿಬ್ಬರೂ ಪರಿಚಿತರಿದ್ದರು....

ಯಾರಾದರೂ ಮರೆತಿದ್ದರೆ ಆ ಪ್ರಕರಣ ಮಥುರಾ ಅತ್ಯಾಚಾರ ಪ್ರಕರಣವೆಂದೇ ಪ್ರಖ್ಯಾತವಾದ ಭಾರತದಲ್ಲಿ ಅತ್ಯಾಚಾರಗಳ ಬಗ್ಗೆ ಸಾರ್ವಜನಿಕವಾಗಿ ದೊಡ್ಡ ಚರ್ಚೆ ಹುಟ್ಟು ಹಾಕಿದ ಮಹಾರಾಷ್ಟ್ರದಲ್ಲಿ 72ರಲ್ಲಿ ಸಾಮೂಹಿಕ ಅತ್ಯಾಚಾರ ನಡೆದು 80 ರ ದಶಕದಲ್ಲಿ ಬಂದ ತೀರ್ಪು ಅದಾಗಿತ್ತು. ಅಪ್ರಾಪ್ತ ಬಾಲಕಿಯ ಮೇಲೆ ಪೋಲೀಸ್ ಸ್ಟೇಷನ್ ನಲ್ಲಿ ಪೋಲೀಸರಿಂದ ಸಾಮೂಹಿಕ ಅತ್ಯಾಚಾರ ನಡೆದಿತ್ತು.. ಕೆಳ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಸರ್ವೋಚ್ಚ ನ್ಯಾಯಾಲಯ ಆರೋಪಿಗಳನ್ನು ಬಿಡುಗಡೆಗೊಳಿಸಿ ಕೊಟ್ಟ ತೀರ್ಪು ಅದಾಗಿತ್ತು. ಇಡೀ ದೇಶದಲ್ಲಿ ಪ್ರತಿಭಟನೆಗಳು ನಡೆದಿದ್ದವು. ನ್ಯಾಯಾಂಗದ ಮೇಲೆ ಬಿದ್ದ ಒತ್ತಡದಿಂದಾಗಿ ಕ್ರಿಮಿನಲ್ ಕೋಡ್ ಪ್ರೊಸೀಜರ್ ತಿದ್ದುಪಡಿಗೆ ಒಳಗಾಗಬೇಕಾದ ಒತ್ತಡ ನಿರ್ಮಾಣವಾಯ್ತು. 34 ವರ್ಷಗಳ ಕಾಲಘಟ್ಟ ಆಲೋಚನಾ ಕ್ರಮವನ್ನು ಒಂದಿನಿತೂ ಬದಲಾಯಿಸಿಲ್ಲ. ನಿರ್ಭಯಾ ಪ್ರಕರಣ, ದೇಶದುದ್ದಕ್ಕೂ ಕಿತ್ತೆದ್ದ ಆಕ್ರೋಶ ಅತ್ಯಾಚಾರ ಕಾನೂನಿಗೆ ತಿದ್ದುಪಡಿ ತರಲೇ ಬೇಕಾದ ಅನಿವಾರ್ಯತೆ ತಂದಿತು. ಇಂದು ಮತ್ತೆ ಅದೇ ಧ್ವನಿ, ಕರ್ಕಶವೆನಿಸುತ್ತಿದೆ, ಜೀವಭಾವವನ್ನು ಕಳೆದುಕೊಂಡ ನಿಸ್ಸತ್ವದೆಡೆಗೆ ಸಮಾಜ ಕ್ರಮಿಸುತ್ತಿರುವ ಸಂಕೇತವಿದು. ನ್ಯಾಯಮೂರ್ತಿ ವರ್ಮಾರಂಥವರು ಮಾದರಿಯಾಗಿದ ವ್ಯವಸ್ಥೆಯಲ್ಲ ಇದು.



ಅಮೇರಿಕ ಡಿಪ್ಲೊಮ್ಯಾಟ್ ಸಂಪರ್ಕಗಳ ಮೂಲಕ ದೆಹಲಿ ಪೋಲೀಸರ ಸಂಪರ್ಕಕ್ಕೆ ಬಂದು ಜೂನ್ 19 2015ರಂದು ಮರಳಿ ಭಾರತಕ್ಕೆ ಬಂದು ದೂರು ದಾಖಲಿಸುತ್ತಾಳೆ. ನಿರ್ಭಯಾ ಪ್ರಕರಣದ ನಂತರ ಆದ ತಿದ್ದುಪಡಿಯ ಅನುಸಾರವಾಗಿ ಚಾಲ್ತಿಗೆ ಬಂದ ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಪ್ರಥಮ ಬಾರಿಗೆ 'ಬಲವಂತದ ಬಾಯಿ ಮೂಲಕ ನಡೆಸುವ ಲೈಂಗಿಕ ಕ್ರಿಯೆ'ಯನ್ನು ಅಪರಾಧವಾಗಿಸಿದ ಪ್ರಕರಣವೆಂದು ದಾಖಲಾಗಿ 7 ವರ್ಷ ಕಠಿಣ ಸಜೆ ವಿಧಿಸಲಾಗುತ್ತದೆ. ಆದರೆ ಫರೂಕಿ ಮತ್ತವರ ಹೆಂಡತಿ ಇದನ್ನು ಸಂಚಿನ ಮತ್ತು ದೋಷಪೂರ್ಣ ಆರೋಪವೆಂದು ಮೇಲ್ಮನವಿ ಸಲ್ಲಿಸುತ್ತಾರೆ. ಮತ್ತು ದೆಹಲಿ ಉಚ್ಚನ್ಯಾಯಾಲಯ 'ಅನುಮಾನದ ಲಾಭ' ಹೆಸರಿನ ಅವಕಾಶವನ್ನು ಆರೋಪಿಗೆ ಕೊಟ್ಟು ಬಿಡುಗಡೆ ಮಾಡಿದೆ. ಕಾರಣ ಆ ಕೃತ್ಯ ನಡೆಯುವಾಗ ಆಕೆ ಮಾತ್ರ ಅವನ ಮನೆಯಲ್ಲಿ ಇದ್ದಳು. ಜೊತೆಗೆ ಆತನಿಗಿರುವ ಕೆಲವು ಮಾನಸಿಕ ಅಸ್ವಸ್ಥತೆ–'ಬೈ ಪೋಲಾರ್ ಡಿಸಾರ್ಡರ್' ನ್ನೂ ಆತನ ಪರವಾಗಿ ಕೊಟ್ಟ 'ಅನುಮಾನದ ಲಾಭ' ಕ್ಕೆ ಬಳಸಲಾಗಿದೆ!!. ಈ ವ್ಯವಸ್ಥೆ ಅದೆಷ್ಟು ಲಿಂಗ ಪಕ್ಷಪಾತಿ ಎಂಬುದಕ್ಕೆ ಇದೂ ಒಂದು ನಿರ್ದಿಷ್ಟ ಉದಾಹರಣೆಯಾಗುತ್ತದೆ. ಈ ಮಹಿಳೆಯ ಮೇಲೆ ಅತ್ಯಾಚಾರ ನಡೆದಿರಲಾರದು ಎಂದು ಅಭಿಪ್ರಾಯ ಪಟ್ಟು ಅವಳ ಮೇಲೆಯೇ ಆರೋಪ ಹೊರಿಸುವಂಥಹ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಾಗ ಆಕೆ ವಿದ್ಯಾವಂತಳೂ ಆಗಿದ್ದಾಗ ಎಂಬ ನೀಡಬಹುದು. ವೈದ್ಯಕೀಯ, ಸಾಂದರ್ಭಿಕ ಸಾಕ್ಷ್ಯಗಳು ಅತ್ಯಾಚಾರ ನಡೆದಿದೆ ಎಂದು ದೃಢಪಡಿಸಬೇಕಾದ ಸಾಕ್ಷಿ ಪುರಾವೆಗಳನ್ನು ಹಾಜರು ಪಡಿಸಬೇಕಿಲ್ಲ ಎಂದು ಹೇಳಿದೆ. ಮತ್ತು ಭಾರತದ ಸಂದರ್ಭದಲ್ಲಿ ಸುಲಭವಾಗಿ ಹೆಣ್ಣು ಮಕ್ಕಳು ತಮ್ಮ ಮೇಲೆ ನಡೆಯುವ ಅತ್ಯಾಚಾರ ಲೈಂಗಿಕ ಕಿರುಕುಳಗಳ ಬಗ್ಗೆ ದೂರು ನೀಡುವುದಿಲ್ಲ. ಯಾಕೆಂದರೆ ಅದು ಅವಳ ಮೇಲಿನ ದೌರ್ಜನ್ಯವಾಗಿ ಪರಿಗಣಿಸುವುದಕ್ಕಿಂತ ಹೆಚ್ಚಾಗಿ ಅವಳ ಮತ್ತು ಅವಳ ಕುಟುಂಬದ ಮರ್ಯಾದೆಯ ಪ್ರಶ್ನೆಯಾಗಿಯೇ ಪರಿಗಣಿಸುವ ದೇಶ ನಮ್ಮದು ಎಂದೂ ಅಭಿಪ್ರಾಯ ಪಡಲಾಗಿತ್ತು. ನಂತರ 2012ರ ನಿರ್ಭಯಾ ಪ್ರಕರಣ ಮತ್ತು ನಂತರ ಜಸ್ಟೀಸ್ ವರ್ಮಾ ಆಯೋಗದ ಶಿಫಾರಸುಗಳು, ಹಲವು ಸುತ್ತಿನ ಚರ್ಚೆಗಳು, ಪ್ರತಿಭಟನೆಗಳು ಎಲ್ಲವೂ ಹೊಳೆಯಲ್ಲಿ ಹುಣಿಸೇ ಹಣ್ಣು ತೊಳೆದಂತೆ ಆಗಿದೆಯೇ ಹೊರತೂ ತನಿಖಾಧಿಕಾರಿಗಳು, ನ್ಯಾಯವಾದಿಗಳು ನ್ಯಾಯಸ್ಥಾನದ ಮನೋಭಾವ ಬದಲಿಸಲು ಸಫಲವಾಗಿಲ್ಲ ಎಂದು ಮತ್ತೆ ದೃಢಪಟ್ಟಿದೆ. ಹರಿಯಬೇಕಿನ್ನೆಷ್ಟು ಕಣ್ಣೀರು, ಕೇಳಬೇಕಿನ್ನೆಷ್ಟು ಪ್ರತಿಭಟನೆಯ ಧ್ವನಿಗಳು. ಕುರುಡು ನ್ಯಾಯದೇವತೆಯ ಕಣ್ಣು ತೆರೆಸಲು?.

ಇನ್ನು ಈ ದೇಶದ ಪರಿಸ್ಥಿತಿ ನ್ಯಾಯಕ್ಕಾಗಿ ಮನವಿ ಮಾಡಲು ಎಲ್ಲರಿಗೂ ಹಕ್ಕಿದೆ, ಮತ್ತು ವಕೀಲ ವೃತ್ತಿ ಎಂಬುದು ನ್ಯಾಯಕ್ಕಾಗಿ ಕೆಲಸ ಮಾಡುವುದು ಹಾಗಾಗಿ ಅಪರಾಧಿಯೂ ವಕೀಲರ ಸಹಾಯ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

2016ರ ಜುಲೈ ತಿಂಗಳಿನಲ್ಲಿ ಮಹ್ಮದ್ ಫರೂಕಿ – ಪೀಪ್ಲೀ ಲೈವ್ ಸಿನಿಮಾದ ಸಹ ನಿರ್ದೇಶಕನೂ ಆದ ವ್ಯಕ್ತಿಯ ಮೇಲೆ ಅಮೇರಿಕಾ ದೇಶದ ಪ್ರಜೆಯಾಗಿರುವ ಮಹಿಳೆಯೊಬ್ಬಳು ಅತ್ಯಾಚಾರದ ಆರೋಪ ಹೊರಿಸಿ ದೂರು ದಾಖಲಿಸಿದ್ದಳು. ಕೆಳ ನ್ಯಾಯಾಲಯ ಆರೋಪಿಗೆ 7 ವರ್ಷಗಳ ಸಜಾ ಶಿಕ್ಷೆ ವಿಧಿಸಿತ್ತು. ಅದರ ವಿರುದ್ಧ ಸಲ್ಲಿಸಿದ ಮೇಲ್ಮನವಿಗೆ ಈಗ ಬಂದಿರುವ ಉಚ್ಚ ನ್ಯಾಯಾಲಯದ ತೀರ್ಪಿದು. ಫರೂಕಿಯ ಕಿರೀಟದಲ್ಲಿ ಹಲವು ಗರಿಗಳಿವೆ. ಅವರ ಸಿನಿಮಾ ಪೀಪ್ಲೀ ಲೈವ್ಸ್ ರೈತರ ಆತ್ಮಹತ್ಯೆಯ ಬಗ್ಗೆ ಮಾತಾಡುತ್ತದೆ. ಆತ ಓದಿದ್ದು ಪ್ರತಿಷ್ಠಿತ ಡೂನ್ ಶಾಲೆ, ನವದೆಹಲಿಯ ಸೇಂಟ್ ಸ್ಟೀಫನ್ ಕಾಲೇಜ್ ಮತ್ತು ನಂತರ ರೋಡ್ಸ್ ಸ್ಕಾಲರ್ ಶಿಪ್ ಪಡೆದು ಬ್ರಿಟನ್ ನ ಆಕ್ಸ ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿದ. ಬಹಳ ಪರಿಶ್ರಮದಿಂದ ಅಧ್ಯಯನ ಮಾಡಿ ಬರೆದ "ವಾಯಿಸ್ಸಸ್ ಫ್ರಂ ಡೆಲ್ಲಿ 1857' ಪುಸ್ತಕ ಪ್ರಶಸ್ತಿ ಗಳಿಸಿದೆ....ಮತ್ತು ದಸ್ತಾಂಗೋಯ್ ಎಂಬ 11 ನೇ ಶತಮಾನದ ಪ್ರದರ್ಶನ ಕಲೆಯನ್ನೂ ಅರಿತು ಅದ್ಭುತ ಪ್ರದರ್ಶನ ನೀಡುತ್ತಿದ್ದ ವ್ಯಕ್ತಿ. ಇತ್ಯಾದಿ ಇತ್ಯಾದಿ.

ಕೊಲಂಬಿಯಾ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾದ ಅಮೇರಿಕದ ಮಹಿಳೆಯೊಬ್ಬಳು ಗೋರಖ್ ನಾಥ್ ಪಂಥದ ಬಗ್ಗೆ ಸಂಶೋಧನೆ ನಡೆಸಲು ಬಯಸಿ ಬಂದವಳು. ಸಮಾನ ಸ್ನೇಹಿತರ ಮೂಲಕ ಫರೂಕಿಯ ಪರಿಚಯವಾಗಿ ಸಂಶೋಧನೆಗೆ ಸಹಾಯ ಮಾಡುವಂತಾಗಿತ್ತು. ಸಹಜವಾಗಿಯೇ ಅಧ್ಯಯನದ ಭಾಗವಾಗಿ ಪುನಃ ಪುನಃ ಭೇಟಿ ಮಾತು ಕತೆ ಸಾಧ್ಯವಾಗಬಹುದಾದ ಸಂದರ್ಭ. ಮಾರ್ಚಿ 2015 ರಲ್ಲಿ ಆತ ತನ್ನ ಮನೆಯಲ್ಲಿ ಮಾಡಿದ ಪಾರ್ಟಿಯ ಸಂದರ್ಭದಲಿ ಅಮೇರಿಕನ್ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತದೆ. ತಕ್ಷಣವೇ ಅಮೇರಿಕಾಕ್ಕೆ ತೆರಳಿದ ಮಹಿಳೆ ಆತನಿಗೆ ಮಿಂಚಂಚೆಯ ಮೂಲಕ ಆ ಬಗ್ಗೆ ಬರೆಯುತ್ತಾಳೆ. ಫರೂಕಿ ಅವಳಿಗೆ ಕ್ಷಮಾಪಣೆಯ ಮಾರುತ್ತರ ನೀಡುತ್ತಾನೆ. ನಂತರ ಆಕೆ ದೆಹಲಿಯಲ್ಲಿರುವ



ಒಂದು ಪ್ರತ್ಯೇಕ ಶಬ್ದವನ್ನೂ ಬಳಸುತ್ತದೆ ನ್ಯಾಯಸ್ಥಾನ! ಆದರೆ ಅದೇ ಸಂದರ್ಭದಲ್ಲಿ ಆರೋಪಿಯೂ ಕೂಡ ಅಜ್ಞಾನಿ, ಅಶಿಕ್ಷಿತ (ಅಂದ ಮಾತ್ರಕ್ಕೆ ಅವರೆಲ್ಲ ಅತ್ಯಾಚಾರ ಮಾಡಿ ಬಿಡುತ್ತಾರಂತಲ್ಲ) ಆಗಿರಲಿಲ್ಲ. ಒಬ್ಬ ವಿದೇಶೀ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿದ, ಸಾಹಿತ್ಯದ ಕೃಷಿಯಲ್ಲಿಯೂ ತೊಡಗಿದ ಸಾಂಸ್ಕೃತಿಕ ಲೋಕದಲ್ಲಿಯೂ ಹೆಸರು ಗಳಿಸಿದ ವ್ಯಕ್ತಿಗೆ ತಾನು ಇನ್ನೊಬ್ಬರ ದೇಹದ ಮೇಲೆ ಮನಸ್ಸಿನ ಮೇಲೆ ಅತಿಕ್ರಮಿಸಬಾರದು ಎಂಬ ಜ್ಞಾನವಿಲ್ಲ ಎಂಬುದಾಗಿ ಯಾಕೆ ಯೋಚಿಸುವುದಿಲ್ಲ?

ಪುರುಷ ಪ್ರಧಾನ ಪಾಳೆಯಗಾರೀ ಮೌಲ್ಯಗಳ ಸಾಮರ್ಥ್ಯವನ್ನು ಗುರುತಿಸಬೇಕಾದುದು ಇಲ್ಲಿಯೇ. ಅದರ ಬೇರುಗಳು ಎಷ್ಟು ಗಟ್ಟಿಯಾಗಿವೆ ಎಂದರೆ ಅದು ಕೇವಲ ಅತ್ಯಂತ ಬಡ ಕೂಲಿ ಮಾಡಿ ಬದುಕುವ ಮಥುರಾ, ಸಮಾಜ ಸೇವೆಯಲ್ಲಿ ತೊಡಗಿಕೊಂಡು ಬಾಲ್ಯ ವಿವಾಹವನ್ನು ತಡೆಯುವ ಕಾಯಕದಲ್ಲಿ ತೊಡಗಿಕೊಂಡ ಭಾಂವ್ರಿದೇವಿ, ಗುರುವೆಂದು ನಂಬಿ ಪೂಜಿಸಿದ ಮಠದ ಸ್ವಾಮಿ ತನ್ನ ಮೇಲೆ ಅತ್ಯಾಚಾರ ನಡೆಸಿದರೆಂದು ನ್ಯಾಯಕ್ಕಾಗಿ ಕೇಳುತ್ತಿರುವ ಪ್ರೇಮಲತಾ ಇವರುಗಳು ಮಾತ್ರವಲ್ಲ ಅಮೇರಿಕಾದ ಪ್ರಜೆಯಾಗಿದ್ದು ರಾಜತಾಂತ್ರಿಕ ವ್ಯವಸ್ಥೆಯೇ ದೂರು ನೀಡಲು ಅಗತ್ಯವಾದ ಕ್ರಮಗಳನ್ನು ಕೈಗೊಂಡಾಗಲೂ ನ್ಯಾಯ ಸುಲಭವಾಗಿ ದಕ್ಕುವುದಿಲ್ಲ.

2006 ರಲ್ಲಿ ಓಂ ಪ್ರಕಾಶ್/ದಿಲ್ ಬಹಾರ್ ಪ್ರಕರಣದಲ್ಲಿ ಸಂತ್ರಸ್ತೆಯ ಹೇಳಿಕೆಯನ್ನಷ್ಟೇ ಪರಿಗಣಿಸಿ ಅತ್ಯಾಚಾರದ ಪ್ರಕರಣಗಳಲ್ಲಿ ತೀರ್ಪು ಒಪ್ಪಿಕೊಳ್ಳೋಣ ಆದರೆ ವೃತ್ತಿ ನ್ಯಾಯ (ಪ್ರೊಫೆಷನಲ್ ಎಥಿಕ್ಸ್) ಎಂಬುದು ಕೇವಲ ವೃತ್ತಿಪರರಿಗಷ್ಟೇ ಆದರೆ ಒಪ್ಪಿಕೊಳ್ಳಬಹುದು. ಆದರೆ ವೃತ್ತಿಯ ಜೊತೆ ಕಾನೂನು ಮಾಡುವ, ರಾಜಕಾರಣದಲ್ಲಿದ್ದು ಅಧಿಕಾರ ನಡೆಸುವ ಮಂತ್ರಿಗಳಾಗಿ ಕೂಡ ಇದ್ದಂಥಹ ಕಪಿಲ್ ಸಿಬಾಲ್ ರಂತವರು ಆರೋಪಿಯ ಪರವಾಗಿ ವಾದ ಮಂಡಿಸುತ್ತಾರೆ ಮತ್ತು ಅನುಮಾನದ ಲಾಭವನ್ನು ರಾಜತಾಂತ್ರಿಕ ಮಧ್ಯಪ್ರವೇಶದ ಭಾಗವನ್ನೂ ಕಡೆಗಣಿಸಿ ಆರೋಪಿಗೆ ಕೊಡಿಸುತ್ತಾರೆ! ಇದನ್ನು ಹೇಗೆ ಒಪ್ಪಿಕೊಳ್ಳುವುದು?. ಇಷ್ಟಾಗಿ ಆ ಮಹಿಳೆಗೆ ಸುಳ್ಳು ಮೊಕದ್ದಮೆ ದಾಖಲಿಸುವುದರಿಂದ ಸಿಗುವ ಲಾಭವೇನು?. ತನ್ನ ಮೇಲೆ ಆಕ್ರಮಣ ನಡೆದ ತಕ್ಷಣ ಅವಳು ತನ್ನ ಮಾತೃದೇಶಕ್ಕೆ ಹೊರಟೇ ಹೋದಳು. ಆರೋಪಿಯಿಂದ ತಾನು ಮಾಡಿದ ತಪ್ಪು ಒಪ್ಪಿಕೊಂಡಾದ ಮೇಲಷ್ಟೇ ಅವಳು ದೂರು ದಾಖಲಿಸಿದ್ದು. ತಪ್ಪು ಒಪ್ಪಿಕೊಂಡದ್ದು ಸಾಕ್ಷವಾಗಲಿಲ್ಲ ಎಂದರೆ ಇಲ್ಲಿನ ನ್ಯಾಯವ್ಯವಸ್ಥೆಯ ಕುರುಡು ತನವನ್ನು ಹೇಗೆ ಅರ್ಥೈಸೋಣ. ಮತ್ತೆ ಈ ಸಮಾಜ ಪ್ರಾಜ್ಞರು ಯೋಚಿಸಲಿ. ಎಂಥಹುದೇ ಸಂದರ್ಭದಲ್ಲಿಯೂ ಮಹಿಳೆಗೆ ನ್ಯಾಯ ಸಿಗದಂತೇ ಮಾಡಲು ಪಣ–ತೊಟ್ಟಂತೆ ಈ ವ್ಯವಸ್ಥೆ ನಿಂತಿರುವಾಗ ಪ್ರಾರಂಭದ ಹಂತದಲ್ಲಿಯೇ ಪ್ರಕರಣ ಸೋಲುವಂತೆ ಎಲ್ಲ ಕ್ರಮ ವಹಿಸುವ ಪೋಲೀಸ ತನಿಖಾಧಿಕಾರಿಗಳು ವಕೀಲರು ಕೊನೆಗೆ ನ್ಯಾಯಾಲಯ ಹೀಗೆ ಒಂದರ ಜೊತೆ ಇನ್ನೊಂದು ಕೈ ಜೋಡಿಸಿ ನಂತರ ದಾಖಲಾದ ಪ್ರಮಾಣದಲ್ಲಿ ಶಿಕ್ಷೆಯಾಗುವುದಿಲ್ಲ ಹಾಗಾಗಿ ಸುಳ್ಳು ಪ್ರಕರಣಗಳು ದಾಖಲಾಗುತ್ತಿವೆ ಎಂಬುದಾಗಿ ಹಲವು ವರ್ಷಗಳ ಪರಿಶ್ರಮದಿಂಧ ಪಡೆದ ಅಷ್ಟಿಷ್ಟು ಸೌಲಭ್ಯಗಳನ್ನು ನಿರಾಕರಿಸಲಾಗುತ್ತದೆ. ಈಗ ವರದಕ್ಷಿಣೆ ನಿಷೇಧ ಕಾನೂನು ಸಡಿಲಗೊಂಡಿದ್ದು ಹೀಗೆಯೇ. ಇನ್ನು ಮುಂಧೆ ಅತ್ಯಾಚಾರದ ಕಾನೂನು ಕೂಡ ಹೀಗೆ ಜಾಳಾದರೆ ಅಚ್ಚರಿ ಪಡಬೇಕಿಲ್ಲ. ಯಾಕೆಂದರೆ ಇದು ಪುರುಷ ಪ್ರಧಾನ ಪಾಳೆಯಗಾರೀ ಮೌಲ್ಯಗಳಲ್ಲಿ ಹೂತು ಹೋಗಿರುವ ಸಮಾಜ. ●

ಹೈದರಾಬಾದ್ ವಿವಿಯಲ್ಲಿಯೂ ಭಾರೀ ವಿಜಯ

ಪುಟ 1 ರಿಂದ

ಜತೆಗೂಡಿವೆ. ಈ ಹಿಂದೆ 2011-12ರಲ್ಲಿ ಅವು ಸ್ಪರ್ಧಿಸಿದ್ದವು. 'ಸಾಮಾಜಿಕ ನ್ಯಾಯದ ಮೈತ್ರಿಕೂಟ'ದಲ್ಲಿ ಈಗ ಒಂದುಗೂಡಿರುವ ವಿದ್ಯಾರ್ಥಿ ಸಂಘಟನೆಗಳು ಜನವರಿ 2016ರಲ್ಲಿ ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲಾ ಸಾವಿನ ನಂತರ ಈ ವಿಶ್ವವಿದ್ಯಾಲಯದಲ್ಲಿ ಮಾತ್ರವಲ್ಲ, ದೇಶಾದ್ಯಂತ ಸೌಹಾರ್ದ ಮತ್ತು ಬೆಂಬಲವನ್ನು ಪಡೆದ ಐಕ್ಯ ಆಂದೋಲನದ ಭಾಗವಾಗಿದ್ದವು. ಭಾರತದಾದ್ಯಂತ ಸಾರ್ವಜನಿಕ ವಿಶ್ವವಿದ್ಯಾಲಯಗಳ ವಿರುದ್ಧ ಆರೆಸ್ಸೆಸ್-ಬಿಜೆಪಿ-ಎಬಿವಿಪಿ ದಾಳಿಗಳನ್ನು ಹೆಚ್ಚಿಸುತ್ತಿರುವ ಹಿನ್ನೆಲೆಯಲ್ಲಿ ಮೈತ್ರಿಕೂಟವನ್ನು ರಚಿಸಿಕೊಂಡವು. ಕಳೆದ ಒಂದು ವರ್ಷದಲ್ಲಿ ಈ ವಿವಿಯ ಆಡಳಿತ ವಿದ್ಯಾರ್ಥಿ ಸಂಘದ ಸಂವಿಧಾನವನ್ನು ಬದಲಿಸಲು ಹಲವು ಪ್ರಯತ್ನಗಳನ್ನು ನಡೆಸಿತು, ವಿದ್ಯಾರ್ಥಿ ಅಂದೋಲನವನ್ನು ಹತ್ತಿಕ್ಕುವ ಪ್ರಯತ್ನಗಳ ಭಾಗವಾಗಿ ಸಂಘದ ಪದಾಧಿಕಾರಿಗಳ ಮೇಲೆ ಹಲವು ತನಿಖೆಗಳನ್ನು ಏರ್ಪಡಿಸಿತು.

ಈ ಚುನಾವಣೆಗಳಲ್ಲಿ 75% ವಿದ್ಯಾರ್ಥಿಗಳು ಭಾಗವಹಿಸಿದರು.

ಹೈದರಾಬಾದ್ ಕೇಂದ್ರೀಯ ವಿವಿಯಲ್ಲಿ ಸಾಮಾಜಿಕ ನ್ಯಾಯದ ಪರವಾದ ಶಕ್ತಿಗಳ ಭಾರೀ ವಿಜಯದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ "ನಮ್ಮ ಯುವಜನ ಎದ್ದು ನಿಲ್ಲುತ್ತಿದ್ದಾರೆ. ಭಾರತದಾದ್ಯಂತ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳು ಬಿಜೆಪಿಯ ದ್ವೇಷ, ದಮನ ಮತ್ತು ಒಡಕು ಬಿತ್ತುವ ರಾಜಕೀಯವನ್ನು ತಿರಸ್ಕರಿಸುತ್ತಿದ್ದಾರೆ" ಎಂದು ಟಿಪ್ಪಣಿ ಮಾಡಿದ್ದಾರೆ.

ವಿದ್ಯಾರ್ಥಿನಿಯರಿಗೆ ರಕ್ಷಣೆ ನೀಡದ ಕಾಶಿ ಹಿಂದೂ ವಿವಿ ಆಡಳಿತ

ಪುಟ 1 ರಿಂದ

ನೇರ ಬೆಂಬಲ ಸಿಗುತ್ತಿದೆ" ಎಂದು ಟೀಕಿಸಿದೆ. ವಿದ್ಯಾರ್ಥಿಗಳ ರಕ್ಷಣೆಯ ಬೇಡಿಕೆಗಳನ್ನು ಗಮನಿಸುವ ಬದಲು ಈಗಿನ ನಮೂನೆಯಂತೆ ಇದು 'ರಾಷ್ಟ್ರ-ವಿರೋಧಿ' ಮತ್ತು 'ಹೊರಗಿನಮಂದಿ'ಯ ಚಳುವಳಿ ಎಂದು ದೂಷಿಸಲಾಗುತ್ತಿದೆ. ಇದು ಉನ್ನತ ಶಿಕ್ಷಣದಲ್ಲಿ ಹಿಂದುತ್ವ ಬೆಂಬಲಿಗರು ತೂರಿಕೊಂಡಿರುವುದರ ಪರಿಣಾಮ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ. ಉಪಕುಲಪತಿಗಳನ್ನು ಮತ್ತೆ-ಮತ್ತೆ ವಿನಂತಿಸಿಕೊಂಡರೂ ಅವರು ವಿದ್ಯಾರ್ಥಿನಿಯರನ್ನು ಭೇಟಿಯಾಗದಿರುವ ಬಗ್ಗೆ ಅದು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ವಿದ್ಯಾರ್ಥಿಗಳ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸುತ್ತ ಎಐಡಿಡಬ್ಲ್ಯುಎ ಈ ಪೋಲೀಸ್ ಅಮಾನುಷ ವರ್ತನೆಗೆ ಕಾರಣರಾದ ಎಲ್ಲರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು, ಲೈಂಗಿಕ ಕಿರುಕುಳಕ್ಕೆ ಒಳಗಾದ ವಿದ್ಯಾರ್ಥಿನಿಯಿಂದ ಬೇಷರತ್ ಕ್ಷಮೆ ಕೇಳಬೇಕು ಮತ್ತು ವಿವಿಯ ಎಲ್ಲ ಅಧ್ಯಾಪಕ ಮತ್ತು ಅಧಿಕಾರ ವೃಂದಕ್ಕೆ ಲಿಂಗ ಸಂವೇದೀಕರಣವಾಗಬೇಕು, ಕ್ಯಾಂಪಸ್‌ನಲ್ಲೆಲ್ಲ ಉತ್ತಮ ಬೆಳಕಿನ ವ್ಯವಸ್ಥೆ ಮಾಡಬೇಕು, ಗಾರ್ಡ್‌ಗಳನ್ನು ನೇಮಿಸಬೇಕು ಮತ್ತು ವಿದ್ಯಾರ್ಥಿನಿಯರಿಗೆ ಸಮಯದ ಕರ್ಫ್ಯೂ ಹಾಕಿರುವುದನ್ನು ತೆಗೆಯಬೇಕು ಎಂದು ಆಗ್ರಹಿಸಿದೆ. ಎಐಡಿಡಬ್ಲ್ಯುಎನ ಎಲ್ಲ ಘಟಕಗಳು ಪ್ರತಿಭಟಿಸುತ್ತಿರುವ ವಿದ್ಯಾರ್ಥಿನಿಯರಿಗೆ ಬೆಂಬಲವನ್ನು ಅಣಿನೆರೆಸಬೇಕು ಎಂದು ಕರೆ ನೀಡಿದೆ.

ಸಪ್ಟಂಬರ್ 24 ರಂದು ಲಕ್ನೌನಲ್ಲಿ ಮತ್ತು ಸಪ್ಟಂಬರ್ 25ರಂದು ದಿಲ್ಲಿಯಲ್ಲೂ ವಿದ್ಯಾರ್ಥಿನಿಯರು ಮತ್ತು ವಿವಿಧ ಮಹಿಳಾ ಸಂಘಟನೆಗಳು ಬಿಹೆಚ್‌ಯು ವಿದ್ಯಾರ್ಥಿನಿಯರ ಮೇಲೆ ಪೋಲೀಸ್ ದಮನವನ್ನು ಪ್ರತಿಭಟಿಸಿ ರ್‍ಯಾಲಿಗಳನ್ನು ನಡೆಸಿದ್ದಾರೆ.

ಐಸಿಡಿಎಸ್‌ನ್ನು ಅಸ್ಥಿರಗೊಳಿಸುವ ಯೋಜನೆಗಳನ್ನು ಹಿಂತೆಗೆದುಕೊಳ್ಳಿ-ಎಐಡಿಡಬ್ಲ್ಯುಎ ಆಗ್ರಹ

ಅಪೌಷ್ಟಿಕತೆಯ ದರ ಅತಿ ಹೆಚ್ಚು ಇರುವ 130 ಜಿಲ್ಲೆಗಳ ಅಧಿಕಾರಿಗಳ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತಾಡುತ್ತ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಿ ಮನೇಕಾ ಗಾಂಧಿ, ಪೂರಕ ಪೋಷಕಾಂಶಗಳನ್ನು ಬಿಸಿ, ಬೇಯಿಸಿದ ಅಥವ ಮನೆಗೊಯ್ಯುವ ರೇಶನ್ ಬದಲು ಒಣ ಮಿಶ್ರಣಗಳೊಂದಿಗೆ ಪೋಷಕಾಂಶ ಪ್ಯಾಕೆಟ್‌ಗಳಲ್ಲಿ ಪೂರೈಸಲಾಗುವುದು ಎಂದು ಹೇಳಿರುವುದಾಗಿ ವರದಿಯಾಗಿದೆ. ಇವನ್ನು ಅಂಚೆ ಕಚೇರಿಗಳ ಮೂಲಕ ಪೂರೈಸಲಾಗುವುದೆಂದೂ ಅವರು ಹೇಳಿದ್ದಾರೆ! ಮನೆಗೊಯ್ಯುವ ರೇಶನ್ ಬದಲು ನೇರ ನಗದು ವಗಾವಣೆಯ ಪ್ರಸ್ತಾವವನ್ನೂ ಸಿದ್ಧಪಡಿಸಲಾಗಿದೆಯಂತೆ. ಇದನ್ನು 300 ಜಿಲ್ಲೆಗಳಲ್ಲಿ ಪ್ರಯೋಗಾತ್ಮಕವಾಗಿ ಆರಂಭಿಸಲಾಗುವುದು, ನಂತರ ಇಡೀ ದೇಶಕ್ಕೆ ವಿಸ್ತರಿಸಲಾಗುವುದು ಎಂದು ಹೇಳಲಾಗಿದೆ. ಇದನ್ನು ಬಲವಾಗಿ ವಿರೋಧಿಸುತ್ತ ಐಸಿಡಿಎಸ್‌ನ್ನು ಅಸ್ಥಿರಗೊಳಿಸುವ ಇಂತಹ ಯೋಜನೆಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಆಗ್ರಹಿಸಿದೆ.

'ಅಂಗನವಾಡಿಗಳು 20 ವರ್ಷಗಳ ಹಿಂದಿನಿಂದಲೇ ಒಂದು ಪರಿಣಾಮಕಾರಿ ಪೂರೈಕೆ ವ್ಯವಸ್ಥೆಯಾಗಿ ಉಳಿದಿಲ್ಲ' ಎಂಬ ಅವರ ಹೇಳಿಕೆಗೆ ಬಲವಾದ ಆಕ್ಷೇಪ ವ್ಯಕ್ತಪಡಿಸುತ್ತ ಈ ಮಂತ್ರಿಗೆ ನಮ್ಮ ದೇಶದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು ವಹಿಸುತ್ತಿರುವ ಮಹತ್ವದ ಪಾತ್ರದ ಅರಿವು ಏನೇನೂ ಇಲ್ಲ ಎಂದು ಅದು ಖಂಡಿಸಿದೆ. ಇಂತಹ ಆಧಾರಹೀನ ಹೇಳಿಕೆಗಳನ್ನು ಕೊಡುವ ಬದಲು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ವೇತನ ಕೊಡಲೆಂದು ನಿಯೋಜಿಸುವ ಹಣವನ್ನು ರಾಜ್ಯಗಳಿಗೆ ಕಳಿಸುವ ತನ್ನ ಜವಾಬ್ದಾರಿಯನ್ನು ಈಡೇರಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ಮಹಾರಾಷ್ಟ್ರ ಕೇಂದ್ರ ಸರಕಾರ ಕೊಡುವೆನೆಂದಿದ್ದ 450 ಕೋಟಿ ರೂ.ಗಳನ್ನು ಇನ್ನೂ ಕೊಟ್ಟಿಲ್ಲವಾದ್ದರಿಂದ ಅಲ್ಲಿ ನಾಲ್ಕು ತಿಂಗಳಿಂದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸಂಬಳ ಕೊಟ್ಟಿಲ್ಲ ಎಂಬ ಸಂಗತಿಯತ್ತ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.

1975ರಲ್ಲಿ ಆರಂಭಿಸಲಾದ ಐಸಿಡಿಎಸ್ ಮಕ್ಕಳು, ಗರ್ಭಿಣಿಯರು ಮತ್ತು ಎದೆಹಾಲು ಉಣಿಸುವ ಮಹಿಳೆಯರಲ್ಲಿ ಅಪೌಷ್ಟಿಕತೆಯನ್ನು ಎದುರಿಸುವಲ್ಲಿ ನೆರವಾಗಿದೆ. ಇದು ಗ್ರಾಮೀಣ ಪ್ರದೇಶಗಳಲ್ಲೂ, ನಗರಪ್ರದೇಶಗಳಲ್ಲೂ ಸಾಮಾನ್ಯ ಜನರಿಗೆ, ಅಸಂಘಟಿತ ದುಡಿಯುವ ಮಹಿಳೆಯರಿಗೆ ಅವರ ಮನೆಬಾಗಿಲಲ್ಲಿ ಲಭ್ಯವಾಗಿರುವ ಅತ್ಯುತ್ತಮ ಆಟದ ಶಾಲೆಯಾಗಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ(ಐಸಿಎಂಆರ್)ಯ ಮಹಾನಿರ್ದೇಶಕಿ ಡಾ. ಸೌಮ್ಯ ಸ್ವಾಮಿನಾಥನ್ ಮತ್ತಿತರ ವಿಶೇಷಜ್ಞರು ಬೇಯಿಸಿದ ಆಹಾರವೇ ಎಂದೆಂದಿಗೂ ಪ್ಯಾಕ್ ಮಾಡಿದ ಆಹಾರಕ್ಕಿಂತ ಆರೋಗ್ಯಕರ ಎನ್ನುತ್ತಾರೆ ಎಂಬುದನ್ನು ಎಐಡಿಡಬ್ಲ್ಯುಎ ಮಂತ್ರಿಗಳಿಗೆ ನೆನಪಿಸಿದೆ.

ಬೇಯಿಸಿದ ಆಹಾರ ಪೂರೈಸುವುದನ್ನು ನಿಲ್ಲಿಸಿ ನೇರ ನಗದು ವರ್ಗಾವಣೆಯ ಹೆಸರಲ್ಲಿ ಅಂತಿಮವಾಗಿ 13,49,091(2015ರ ಸಂಖ್ಯೆ) ಐಸಿಡಿಎಸ್ ಕೇಂದ್ರಗಳನ್ನು ಮುಚ್ಚಿ 26 ಲಕ್ಷ ಅಂಗನವಾಡಿ ಮತ್ತು ಸಹಾಯಕರನ್ನು ನಿರುದ್ಯೋಗಿಗಳಾಗಿ ಮಾಡುವ ಸರಕಾರದ ಪ್ರಯತ್ನಗಳ ಬಗ್ಗೆ ಎಐಡಿಡಬ್ಲ್ಯುಎ ಆಳವಾದ ಆತಂಕ ವ್ಯಕ್ತಪಡಿಸಿದೆ. ಮಕ್ಕಳು, ಗರ್ಭಿಣಿಯರು, ಹಾಲುಣಿಸುವ ತಾಯಂದಿರಿಗೆ ಅನುಕ್ರಮವಾಗಿ ದಿನಕ್ಕೆ 8ರೂ., 9.30ರೂ. ಮತ್ತು 12 ರೂ. ಪಾವತಿ ಮಾಡಲಾಗುವುದು ಎಂದು ವರದಿಯಾಗಿದೆ. ಇಂತಹ ನೇರ ನಗದು ವರ್ಗಾವಣೆ ಅಪೌಷ್ಟಿಕತೆಯನ್ನು ಎದುರಿಸುವಲ್ಲಿ ನೆರವಾಗುವುದಿಲ್ಲ, ಏಕೆಂದರೆ ಆ ಹಣವನ್ನು ಆಹಾರ ಖರೀದಿಸಲು ಬಳಸಲಾಗುವುದು ಎಂಬ ಗ್ಯಾರಂಟಿಯೇನಿಲ್ಲ. ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ(ಎನ್‌ಎಫ್‌ಹೆಚ್‌ಎಸ್) ಪ್ರಕಾರ 5ವರ್ಷಗಳ ಕೆಳಗಿನ ಮಕ್ಕಳಲ್ಲಿ 35.7% ಮಕ್ಕಳು ಕಡಿಮೆ ತೂಕ ಹೊಂದಿದ್ದಾರೆ. ಈ ಮಂತ್ರಾಲಯದ ಪ್ರಸ್ತಾವ ಪರಿಸ್ಥಿತಿ ಮತ್ತಷ್ಟು ಹದಗೆಡುವಂತೆ ಮಾಡಬಹದು ಎಂಬುದು ಎಐಡಿಡಬ್ಲ್ಯುಎ ಆತಂಕ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಕೂಡಲೇ ಒಣ ಪೋಷಕಾಂಶಗಳನ್ನು ಅಂಚೆ ಕಚೇರಿಯ ಮೂಲಕ ಪೂರೈಸುವ ಮತ್ತು ನೇರ ನಗದು ವರ್ಗಾವಣೆ ಮಾಡುವ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿರುವ ಎಐಡಿಡಬ್ಲ್ಯುಎ ಈ ಪ್ರಸ್ತಾವಗಳ ವಿರುದ್ಧ ಅಂಗನವಾಡಿ ಸಂಘಟನೆಗಳೊಂದಿಗೆ ಪ್ರತಿಭಟನೆಗಳನ್ನು ನಡೆಸಬೇಕು ಎಂದು ತನ್ನ ಘಟಕಗಳಿಗೆ ಕರೆ ನೀಡಿದೆ.

ಈ ಪ್ರತಿಭಟನೆಯ ಹಿನ್ನೆಲೆಯಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಒಂದು ಹೇಳಿಕೆ ನೀಡಿ ಈ ಬಗ್ಗೆ ಚರ್ಚೆ ನಡೆಯುತ್ತಿತ್ತಷ್ಟೇ, ಬಿಸಿಯೂಟವನ್ನು ನಿಲ್ಲಿಸುವ ಯೋಜನೆಯೇನೂ ಇಲ್ಲ ಎಂದು 'ಸ್ಪಷ್ಟೀಕರಣ' ನೀಡಿದ್ದಾರೆ. ಆದರೆ ಮಂತ್ರಿಗಳು ಅಂತಹ ಹೇಳಿಕೆ ಏಕೆ ನೀಡಿದರು, ಅಷ್ಟೇ ಅಲ್ಲ, ಮಹಾರಾಷ್ಟ್ರ ಸರಕಾರ ಆಹಾರ ಪ್ಯಾಕ್‌ಗಳ ಪೂರೈಕೆಗೆ ಟೆಂಡರ್‌ಗಳನ್ನೇಕೆ ಹೊರಡಿಸಿತು ಎಂಬುದಕ್ಕೆ ಸಮಜಾಯಿಷಿ ಸಿಕ್ಕಿಲ್ಲ. ಈಗ ಟೆಂಡರ್‌ಗಳನ್ನು ಹಿಂದಕ್ಕೆ ತಗೊಳ್ಳಲಾಗಿದೆಯಂತೆ. ಮಹಾರಾಷ್ಟ್ರದಲ್ಲಿ ಈ ಆಹಾರ ಪ್ಯಾಕ್‌ಗಳನ್ನು ಒದಗಿಸುವುದು 575 ಕೋಟಿ ರೂ.ಗಳ ಬಿಸಿನೆಸ್ ಎಂಬುದನ್ನು ಇಲ್ಲಿ ಗಮನಿಸಬಹುದು.

ನೇರ ನಗದು ವರ್ಗಾವಣೆಯ ಬಗ್ಗೆ ನಿರ್ಧಾರವಾಗಿಲ್ಲ, ಹಾಗೆ ಮಾಡುವುದು ಒಂದು ಪ್ರಮುಖ ನೀತಿ-ನಿರ್ಧಾರವಾಗುವುದರಿಂದ, ಆ ಬಗ್ಗೆ ಇನ್ನೂ ಚರ್ಚೆ ನಡೆಯುತ್ತಿದೆ ಎಂದು ಇಲಾಖೆಯ ಕಾರ್ಯದರ್ಶಿಗಳು ಹೇಳಿದ್ದಾರೆ.

ಲಿಂಗ ಸಂವೇದೀಕರಣ ಸಮಿತಿಯ ರದ್ಧತಿಯ ವಿರುದ್ಧ ಜೆಎನ್‌ಯು ಆಡಳಿತಕ್ಕೆ ಮಹಿಳಾ ಸಂಘಟನೆಗಳ ಎಚ್ಚರಿಕೆ ಮತ್ತು ಹೈಕೋರ್ಟ್ ನೋಟೀಸು

ಜವಹರಲಾಲ್ ನೆಹರೂ ವಿಶ್ವದ್ಯಾಲಯದ ಆಡಳಿಗಾರರು ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಹಿಂದುತ್ವ ಶಕ್ತಿಗಳಿಗೆ ಭಾರೀ ಪರಾಭವದ ನಂತರವೂ ತನ್ನ ಪ್ರಜಾಪ್ರಭುತ್ವ-ವಿರೋಧಿ ನಿಲುವನ್ನು ಬದಲಿಸಿಲ್ಲ. ಅದು ಲೈಂಗಿಕ ಕಿರುಕುಳದ ವಿರುದ್ಧ ಲಿಂಗ ಸಂವೇದೀಕರಣ ಸಮಿತಿಯನ್ನು ರದ್ದು ಮಾಡಿ ಅದರ ಬದಲು ಆಂತರಿಕ ದೂರುಗಳ ಸಮಿತಿಯನ್ನು ರಚಿಸಲು ಮುಂದಾಗಿದೆ, ಸಂವೇದೀಕರಣ ಸಮಿತಿಯಲ್ಲಿನ ದಾಖಲೆಗಳನ್ನು ಈ ಹೊಸ ಸಮಿತಿಗೆ ವರ್ಗಾಯಿಸುವಂತೆ ಹೇಳಿದೆ.

ಇದಕ್ಕೆ ವಿವಿಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಂದ ಬಲವಾದ ವಿರೋಧ ಬಂದಿದೆ. ಕೆಲವು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಇದರ ವಿರುದ್ಧ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದು ಅದು ಜೆಎನ್‌ಯು ಗೆ ಮತ್ತು ಇಂತಹ ಸಮಿತಿಗಳನ್ನು ರದ್ದು ಮಾಡಬೇಕೆಂದು ಹೇಳಿರುವ ಯುಜಿಸಿಗೆ ನೋಟೀಸುಗಳನ್ನು ಕಳಿಸಿದೆ.

ಈ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ಮುಖ್ಯ ನ್ಯಾಯಾಧೀಶರಾದ ಗೀತಾ ಮಿತ್ತಲ್ ಈ ವಿಷಯದಲ್ಲಿ ಗುಪ್ತತೆ ಕಾಯ್ದುಕೊಳ್ಳುವುದು ಪರಮ ಅಂಶವಾಗಬೇಕು ಎಂಬ ಅರ್ಜಿದಾರರ ಪರವಾದ ವಕೀಲರ ವಾದದ ಬಗ್ಗೆ ಸಹಮತ ವ್ಯಕ್ತಪಡಿಸುತ್ತ ಮುಂದಿನ ವಿಚಾರಣೆ ನಡೆಯುವ ವರೆಗೆ ಹಿಂದಿನ ಸಮಿತಿಯ ಕಚೇರಿಯಿಂದ ಯಾವುದೇ ದಾಖಲೆಗಳು ಹೋಗಬಾರದು, ಕಚೇರಿಯನ್ನು ಸೀಲ್ ಮಾಡಬೇಕು ಎಂದು ಹೇಳಿದೆ.

ಜೆಎನ್‌ಯು ವಿದ್ಯಾರ್ಥಿ ಸಂಘ ಮತ್ತು ಅಧ್ಯಾಪಕರ ಸಂಘ ಹೈಕೋರ್ಟಿನ ಈ ನಿಲುವಿನ ಬಗ್ಗೆ ಹರ್ಷ ವ್ಯಕ್ತಪಡಿಸಿವೆ.


ಇದಕ್ಕೆ ಮೊದಲು ಆರು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಜೆಎನ್‌ಯು ಉಪಕುಲಪತಿಗಳಿಗೆ ಪತ್ರ ಬರೆದು ವಿವಿಯ ಕ್ರಮದ ಬಗ್ಗೆ ಆತಂಕ ವ್ಯಕ್ತಪಡಿಸುತ್ತ ಲಿಂಗ ಸಂವೇದೀಕರಣ ಸಮಿತಿಯನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನ ನಡೆಸಬೇಡಿ ಎಂದು ಮನವಿ ಮಾಡಿಕೊಂಡಿದ್ದವು, ಹಾಗೇನಾದರೂ ಮಾಡಿದರೆ ಲಿಂಗ ನ್ಯಾಯದ ಬಗ್ಗೆ ಕಾಳಜಿ ಇರುವ ಸಮಾಜದ ಎಲ್ಲ ವಿಭಾಗಗಳಿಂದ ವಿರೋಧವನ್ನು ಎದುರಿಸಬೇಕಾಗಿ ಬರುತ್ತದೆ ಎಂದಿದ್ದವು, ಎಐಡಿಡಬ್ಲ್ಯುಎ, ಎಐಪಿಡಬ್ಲ್ಯುಎ, ಎನ್‌ಎಫ್‌ಐಡಬ್ಲ್ಯು, ಜೆಡಬ್ಲ್ಯುಪಿ ಮುಂತಾದ ಸಂಘಟನೆಗಳ ಮುಖಂಡರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಲಿಂಗ ಸಂವೇದೀಕರಣ ಸಮಿತಿ ಒಂದು ಮಾದರಿ ವ್ಯವಸ್ಥೆಯಾಗಿದ್ದು, ಜೆಎನ್‌ಯುನಲ್ಲಿ ಅದು 1999ರಿಂದಲೂ ಉತ್ತಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ, ಇದರ ಕಾರ್ಯನಿರ್ವಹಣೆಯ ಸ್ವಾಯತ್ತತೆಯನ್ನು ನಾಶ ಮಾಡುವುದು ಒಂದು ಅನ್ಯಾಯಯುತ ಪ್ರಯತ್ನ ಎಂದು ಈ ಪತ್ರದಲ್ಲಿ ಈ ಸಂಘಟನೆಗಳ ಮುಖ್ಯಸ್ಥರು ಹೇಳಿದ್ದಾರೆ. ಇಂತಹ ಚರಿತ್ರೆಯಿರುವ ಆಡಳಿತ ತಾನು ನೇಮಿಸಿದ ಸಮಿತಿಯಲ್ಲಿನ ಆಂತರಿಕ ದೂರುಗಳ ಸಮಿತಿಯಲ್ಲಿ ಚುನಾಯಿತ ಸದಸ್ಯರ ಸ್ಥಾನದಲ್ಲಿ 'ನಾಮಕರಣ' ಸದಸ್ಯರನ್ನು ತಂದು ಅದನ್ನು ಅಪಮೌಲ್ಯಗೊಳಿಸುತ್ತಿದೆ.

ಈ ಹಿಂದೆ ಜೆಎನ್‌ಯು ಆಡಳಿತ ಈ ಲಿಂಗ ಸಂವೇದೀಕರಣ ಸಮಿತಿಯ ಸ್ವತಂತ್ರ ನಿರ್ವಹಣೆಯನ್ನು ತಗ್ಗಿಸಲು, ಅದರ ನಿಯಮಾವಳಿಗಳನ್ನು ಉಲ್ಲಂಘಿಸಲು ಪ್ರಯತ್ನಿಸಿತ್ತು ಎಂಬುದರ ಬಗ್ಗೆ ಈ ಸಂಘಟನೆಗಳು ಖೇದ ವ್ಯಕ್ತಪಡಿಸಿದ್ದವು. ವಿವಿಯಲ್ಲಿ ಅಧಿಕಾರದ ಸ್ಥಾನಗಳಲ್ಲಿರುವ ಕೆಲವು ವ್ಯಕ್ತಿಗಳ ವಿರುದ್ಧ ಇದ್ದ ಲೈಂಗಿಕ ಕಿರುಕುಳದ ಕೇಸುಗಳನ್ನು ರದ್ದುಮಾಡಲು ವಿವಿ ಆಡಳಿತ ಕಾರ್ಯಕಾರಿ ಸಮಿತಿಯನ್ನು ಕೇಳಿಕೊಂಡಿತ್ತು. ಇಂತಹ ನೇರ ಹಸ್ತಕ್ಷೇಪಗಳನ್ನು ವಿವಿಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸದಾ ಪ್ರತಿರೋಧಿಸಿದ್ದಾರೆ. ಇಂತಹ ಹಸ್ತಕ್ಷೇಪದ ಚರಿತ್ರೆ ಹೊಂದಿರುವ ವಿವಿ ಆಡಳಿತ ಲಿಂಗ ಸಂವೇದೀಕರಣ ಸಮಿತಿಯ ಚುನಾಯಿತ ಸದಸ್ಯರ ಸ್ಥಾನದಲ್ಲಿ 'ನಾಮಕರಣ' ಸದಸ್ಯರನ್ನು ತರಲು ಪ್ರಯತ್ನಿಸುತ್ತಿರುವುದು ಈ ಸಂಸ್ಥೆಯ ಸ್ವಾಯತ್ತತೆಯ ಮೇಲಿನ ನೇರ ದಾಳಿ ಎಂದಿರುವ ಈ ಸಂಘಟನೆಗಳು ಇದು ಲೈಂಗಿಕ ಕಿರುಕುಳದ ಕೇಸುಗಳಲ್ಲಿ ಸಹಜ ನ್ಯಾಯದ ಭಾವನೆಗೆ ವಿರುದ್ಧವಾಗಿದೆ ಎಂದು ಟೀಕಿಸಿವೆ.

2015ರಲ್ಲಿ ಸರಕಾರದ ಮತ್ತು ಯುಜಿಸಿಯ ಪರಿಷ್ಕೃತ ಅಧಿಸೂಚನೆಗಳಿಗೆ ಅನುಗುಣವಾಗುವಂತೆ ಈ ಸಮಿತಿಯ ನಿಯಮಾವಳಿಗಳನ್ನು ಪರಾಮರ್ಶಿಸಲು ಈ ವಿಶ್ವವಿದ್ಯಾಲಯ ಒಂದು ಸಮಿತಿಯನ್ನು ರಚಿಸಿತ್ತು. ಅದು ಎಲ್ಲ ನಿಯಮಾವಳಿಗಳಿಗೆ ಅನುಗುಣವಾಗಿದೆ ಎಂದು ತಿಳಿಸಿತ್ತು. ಆದರೂ ಅದನ್ನು ನೆವ ಮಾಡಿಕೊಂಡು ವಿಶ್ವವಿದ್ಯಾಲಯ ಇದನ್ನು ರದ್ದು ಮಾಡಿ ತನ್ನದೇ ಸಮಿತಿಯನ್ನು ರಚಿಸಲು ಮುಂದಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

'ಸೌಭಾಗ್ಯ' ಇತ್ಯಾದಿ ಪದಜಾಲಗಳೂ, 'ಕುಲಗೆಡುತ್ತಿರುವ' ಆರ್ಥಿಕ ವ್ಯವಸ್ಥೆಯೂ



ಚುನಾವಣೆಗೆ ಸಿದ್ಧವಾಗುತ್ತಿರುವ ಗುಜರಾತಿನಲ್ಲಿ ಸರ್ದಾರ್ ಸರೋವರ ಆಣೆಕಟ್ಟು ಮತ್ತು ಬುಲೆಟ್ ರೈಲು ಉದ್ಘಾಟನೆಯ ನಂತರ ತನ್ನನ್ನು ಲೋಕಸಭೆಗೆ ಆರಿಸಿದ ವಾರಣಾಸಿಗೆ ಹೋಗಿ, ದೇಶದ ಆರ್ಥಿಕ ಸ್ಥಿತಿಯ ಬಗ್ಗೆ ಹೊರಗಿಂದ, ಒಳಗಿಂದ ಎಲ್ಲೆಡೆಗಳಿಂದ ಆತಂಕ ವ್ಯಕ್ತವಾಗುತ್ತಿರುವಾಗ, ತನ್ನ ಸರಕಾರ ವೋಟಿಗಾಗಿ ಕೆಲಸ ಮಾಡುತ್ತಿಲ್ಲ, ಏನೇ ಮಾಡಿದರೂ ಅಭಿವೃದ್ಧಿಗಾಗಿ ಎಂದರು ಪ್ರಧಾನ ಮಂತ್ರಿಗಳು. ಅಲ್ಲಿಂದ ದಿಲ್ಲಿಗೆ ಹೋಗಿ ಎಂದಿನ ಅಬ್ಬರದಿಂದ 'ಸೌಭಾಗ್ಯ'ದ ಉದ್ಘಾಟನೆ ಮಾಡಿದ್ದಾರೆ.

ಸೌಭಾಗ್ಯ ಎಂಬುದು 'ಪ್ರಧಾನ ಮಂತ್ರಿ ಸಹಜ್ ಬಿಜ್ಲಿ ಹರ್ ಘರ್ ಯೋಜನಾ'ದ ಹ್ರಸ್ವನಾಮ-ಮೊದಲಕ್ಷರಗಳ ಮತ್ತೊಂದು ಪದಜಾಲ. ಪ್ರತಿಮನೆಗೆ ವಿದ್ಯುತ್ ಒದಗಿಸುವ ಮತ್ತೊಂದು ಆಶ್ವಾಸನೆ. ಇಲ್ಲಿ 'ಸಹಜ್' ಕೇವಲ ಪ್ರಾಸಜೋಡಣೆಗೆ ಬಂದಿರುವಂತೆ ಕಾಣುತ್ತದೆ.

ಅದೇನೇ ಇರಲಿ, ಈ ಯೋಜನೆಯ ಮೂಲಕ ಸರಕಾರ ಪ್ರತಿಮನೆಗೆ, ಅದು ಎಲ್ಲೇ ಮೂಲೆಯಲ್ಲಿರಲಿ, ವಿದ್ಯುತ್ ಸಂಪರ್ಕ ಒದಗಿಸುತ್ತದೆ, ಬಡವರು ಯಾರೂ ಇದಕ್ಕೆ(ಅಂದರೆ ಸಂಪರ್ಕಕ್ಕೆ ಮಾತ್ರ) ಹಣ ತೆರಬೇಕಾಗಿಲ್ಲ, ಸರಕಾರವೇ ಹೋಗಿ ಅವರಿಗೆ ವಿದ್ಯುತ್ ಸಂಪರ್ಕ ಕೊಡುತ್ತದೆ. ಇದಕ್ಕಾಗಿ ಸರಕಾರ 16,000 ಕೋಟಿ ರೂ. ವೆಚ್ಚ ಮಾಡುತ್ತದೆ" ಎಂದಿದ್ದಾರೆ.

ಅಚ್ಛೇ ದಿನ್ ತರುವ ಇನ್ನೊಂದು ಹೊಸ ಯೋಜನೆ ಎಂದು ಭಕ್ತಗಣ ಚಪ್ಪಾಳೆ ತಟ್ಟುತ್ತಿದ್ದರೂ, ವಾಸ್ತವವಾಗಿ ಇದರಲ್ಲಿ ಬಹಳ ಹೊಸದೇನೂ ಇಲ್ಲ ಎನ್ನುತ್ತಾರೆ ಈ ವಲಯದ ವಿಶ್ಲೇಷಕರು. ಬಡಜನರಿಗೆ ಪುಕ್ಕಟೆ ವಿದ್ಯುತ್ ಒದಗಿಸುವುದಾಗಿ ಹೇಳಿಕೊಂಡಿರುವ ಯೋಜನೆಗಳಲ್ಲಿ ಇದು ಮೊದಲನೆಯದೂ ಅಲ್ಲ, ಇದುವರೆಗಿನ, ಅದರಲ್ಲೂ ಅಚ್ಛೇ ದಿನ್‌ಗಳ ಅನುಭವ ನೋಡಿದರೆ ಬಹುಶಃ ಕೊನೆಯದೂ ಅಲ್ಲ.

ಕಾಂಗ್ರೆಸ್ ನೇತೃತ್ವದ ಯುಪಿಎ-1 ಸರಕಾರ ಎಡಪಕ್ಷಗಳ ಬೆಂಬಲದ ಮೇಲೆ ನಿಂತಿದ್ದಾಗ 2005ರಲ್ಲಿ ಇದೇ ಗುರಿಯ ಯೋಜನೆಯೊಂದನ್ನು ಆರಂಭಿಸಿತ್ತು. ಅದರಲ್ಲಿ ರಾಜೀವ ಗಾಂಧಿಯವರ ಹೆಸರಿತ್ತು. ಅಚ್ಛೇ ದಿನ್‌ಗಳು ಆರಂಭವಾದಾಗ 2015ರಲ್ಲಿ ಅದು ದೀನ್‌ದಯಾಳ್ ಉಪಾಧ್ಯಾಯರ ಹೆಸರು ಪಡೆಯಿತು.

ಈಗ ಈ ಯೋಜನೆಯ ಮೂಲಕ ಅದು 'ವಿದ್ಯುತ್ ಸಂಪರ್ಕ ಪಡೆಯ ಬಯಸುವ' ಎಲ್ಲರಿಗೂ ವಿಸ್ತರಣೆಗೊಳ್ಳಲಿದೆಯಷ್ಟೇ ಎಂಬುದು ಪ್ರಸಕ್ತ ವಿದ್ಯುತ್ ಮಂತ್ರಿಗಳ ವಿವರಣೆಯಿಂದ ತಿಳಿಯುವ ಸಂಗತಿ. ಬಡತನದ ರೇಖೆಯ ಮೇಲಿರುವವರು ಇದಕ್ಕೆ 500ರೂ. ಕೊಡಬೇಕಷ್ಟೇ. ವಿದ್ಯುತ್ ಬಳಕೆಗೆ ಬಡತನದ ರೇಖೆಯ ಮೇಲಿರುವವರಂತೆ ಕೆಳಗಿರುವವರೂ ಹಣ ತೆರಬೇಕು ಎಂದು ಬೇರೆ ಹೇಳಬೇಕಾಗಿಲ್ಲ. ಪ್ರಿಪೇಯ್ಡ್ ಅಂದರೆ ಬಳಸಬಹುದಾದ ವಿದ್ಯುತ್‌ಗೆ ಮೊದಲೇ ತೆರಬೇಕಾದ ಮೀಟರ್ ತಗುಲಿಸಲಾಗುತ್ತದೆ. ಅದನ್ನು 'ರಿಚಾರ್ಜ್' ಮಾಡಲಾಗದಿದ್ದರೆ ವಿದ್ಯುತ್ ಪೂರೈಕೆ ನಿಂತು ಹೋಗುತ್ತದೆ-'ಸಹಜ'ವಾಗಿ! ಅಲ್ಲದೆ, ಈ 'ಸೌಭಾಗ್ಯ'ಕ್ಕೆ 2005/2015ರ ಯೋಜನೆಯಲ್ಲಿರುವ ಕೇಂದ್ರ ಸರಕಾರದ ಪಾಲು 90%ದಿಂದ 60%ಕ್ಕೆ ಇಳಿಯುತ್ತದೆ-ಬಡತನದ ರೇಖೆಯ ಮೇಲಿರುವವರಿಗೂ ವಿಸ್ತರಣೆಗೊಳ್ಳುವುದರಿಂದಾಗಿ ಅದೂ 'ಸಹಜ'ವೇ ಇರಬಹುದೇನೋ.

ಆದರೆ ಇದರಲ್ಲಿ 'ಸಂಪರ್ಕ ಪಡೆಯ ಬಯಸುವ' ಎಂಬುದು ಏಕೆ ಬಂತು ಎಂದು ವಿದ್ಯುತ್ ಮಂತ್ರಿಗಳ ವಿವರಣೆಯಿಂದ ತಿಳಿಯದಾಗಿದೆ. ಅಲ್ಲದೆ 'ಬಡವ'ರನ್ನು ಗುರುತಿಸಲು 2011ರ ಸಾಮಾಜಿಕ-ಆರ್ಥಿಕ ಮತ್ತು ಜಾತಿಗಣತಿಯನ್ನು ಆಧರಿಸಲಾಗುವುದು ಎನ್ನಲಾಗಿದೆ. ಆದರೆ ಹೇಗೆ ಎಂದು ತಿಳಿದಿಲ್ಲ. ಏಕೆಂದರೆ ಈ ಗಣತಿಯಲ್ಲಿ ವಿದ್ಯುತ್ ಸಂಪರ್ಕ ಇದೆಯೇ ಇಲ್ಲವೇ ಎಂಬ ಪ್ರಶ್ನೆ ಇರಲಿಲ್ಲವಂತೆ-ನಗರ ಪ್ರದೇಶದಲ್ಲಿ ವಿದ್ಯುತ್ತನ್ನು ಪ್ರಾಥಮಿಕ ಮೂಲವಾಗಿ ಎಷ್ಟು ಜನ ಬಳಸುತ್ತಿದ್ದಾರೆ ಎಂಬುದನ್ನಷ್ಟೇ ಅದು ಗುರುತಿಸಿತ್ತು ಎನ್ನಲಾಗಿದೆ.

ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಲ್ಲಿ ಡಿಸೆಂಬರ್ 2018ರ ವೇಳೆಗೆ ಸಂಪೂರ್ಣ ಗ್ರಾಮೀಣ ವಿದ್ಯುದೀಕರಣ ಸಾಧಿಸಲು 43,033 ಕೋಟಿ ರೂ. ಬೇಕು ಎಂದು ಅಂದಾಜು ಮಾಡಲಾಗಿತ್ತು. ಆದರೆ ಈ ಸಲದ ಬಜೆಟ್ ಹಣ ಸೇರಿದಂತೆ(ಅಂದರೆ 4 ವರ್ಷಗಳಲ್ಲಿ) ಕೊಟ್ಟಿರುವ ಹಣ ಇದರ 30%ದಷ್ಟೂ ಇಲ್ಲ, ಇದರ ಮೇಲೆ ಇನ್ನೂ 12,320 ಕೋಟಿ ರೂ.(16000 ಕೋಟಿಯ ಅಂದಾಜಿನ 60%) ನಿಜವಾಗಿಯೂ ಸರಕಾರದಿಂದ ಬರುತ್ತದೆಯೇ ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.

ರಾಜೀವ ಗಾಂಧಿ ಹೆಸರಲ್ಲಿದ್ದ ಯೋಜನೆಯ ಅಡಿಯಲ್ಲಿ ಎರಡು ಯುಪಿಎ ಸರಕಾರಗಳು 2005ರಿಂದ 2014ರ ನಡುವೆ 1,08,280 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದವು. ಅಂದರೆ ವರ್ಷಕ್ಕೆ ಸರಾಸರಿ 12030 ಹಳ್ಳಿಗಳಿಗೆ. ಆದರೆ 'ಅಚ್ಛೇ ದಿನ್' ಸರಕಾರಕ್ಕೆ 2014ರಿಂದ 2017ರ ನಡುವೆ 14528ಹಳ್ಳಿಗಳಿಗೆ, ಅಂದರೆ ವರ್ಷಕ್ಕೆ ಸರಾಸರಿ 4842 ಹಳ್ಳಿಗಳಿಗೆ ಮಾತ್ರ ವಿದ್ಯುತ್ ಸಂಪರ್ಕ ಒದಗಿಸಲು ಸಾಧ್ಯವಾಗಿದೆ ಎಂದು ಅಂಕಿ-ಅಂಶಗಳು ಹೇಳುತ್ತವೆಯಂತೆ.


ಈ ಹಿನ್ನೆಲೆಯಲ್ಲಿ 'ಸೌಭಾಗ್ಯ'ವೂ 10 ಕೋಟಿ ಉದ್ಯೋಗ ಇತ್ಯಾದಿಯಂತೆ 'ಅಚ್ಛೇ ದಿನ್' ದಾರಿ ಹಿಡಿಯುತ್ತದೆಯೇ ಎಂಬುದು ಈಗ ಕೇವಲ ಸಿನಿಕತನದ ಪ್ರಶ್ನೆಯಾಗಿ ಉಳಿದಿಲ್ಲ.


ಅಲ್ಲದೆ ದೇಶದ ಒಟ್ಟು ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೆಚ್ಚೆಚ್ಚು ಆತಂಕಕಾರಿ ಅಂಶಗಳು ಪ್ರಕಟವಾಗುತ್ತಿರುವಾಗ (ಈ ವಾರ ರಫ್ತು ಪ್ರಮಾಣ 14 ವರ್ಷಗಳಲ್ಲೇ ಕನಿಷ್ಟ ಮಟ್ಟಕ್ಕೆ ಇಳಿದಿದೆ, ಮುಂಗಾರು ಸೀಜನ್ನಿನಲ್ಲಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ 2.8% ಇಳಿಕೆಯಾಗಲಿದೆ, ಬ್ಯಾಂಕುಗಳ ಸುಸ್ತಿಸಾಲಗಳ ಪ್ರಮಾಣ ಮಾರ್ಚ್ 2016ರಲ್ಲಿ 7.7% ಇದ್ದದ್ದು ಜೂನ್ 2017ರ ವೇಳೆಗೆ 10.2%ಕ್ಕೆ ಏರಿದೆ) ಇಂತಹ 'ಸೌಭಾಗ್ಯ' ಇತ್ಯಾದಿ ಪದಜಾಲಗಳು ಅಂತಹ ಆತಂಕಗಳನ್ನು ಸರಿಪಡಿಸಬಲ್ಲವೇ ಎಂದು ಸರಕಾರದ ಟೀಕಾಕಾರರು ಮಾತ್ರವಲ್ಲ, ಬಿಜೆಪಿಯ ಮುಖಂಡರುಗಳೂ ಕೇಳಲಾರಂಭಿಸಿದ್ದಾರೆ.

ಹಿಂದಿನ ಬಿಜೆಪಿ ನೇತೃತ್ವದ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಯಶವಂತ ಸಿನ್ಹ ಸಪ್ಟಂಬರ್ 27ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದ ಲೇಖನ ಈಗ ಎಲ್ಲರ ಗಮನ ಸೆಳೆದಿದೆ. **ಈಗಿನ ಬಿಜೆಪಿ ಹಣಕಾಸು ಮಂತ್ರಿಗಳು ಆರ್ಥಿಕ ವ್ಯವಸ್ಥೆಯನ್ನು ಕುಲಗೆಡಿಸಿಬಿಟ್ಟಿದ್ದಾರೆ, ಪ್ರಧಾನ ಮಂತ್ರಿಗಳು ತಾನು ಬಡತನವನ್ನು ಹತ್ತಿರದಿಂದ ನೋಡಿದ್ದೇನ ಎಂದರೆ, ಅವರ ಹಣಕಾಸು ಮಂತ್ರಿ ಎಲ್ಲ ಭಾರತೀಯರೂ ಬಡತನವನ್ನು ಹತ್ತಿರದಿಂದ ನೋಡುವಂತೆ ಮಾಡುತ್ತಿದ್ದಾರೆ ಎಂದು ಟಿಪ್ಪಣಿ ಮಾಡಿದ್ದಾರೆ.** ತಾನು ಮಾತ್ರವಲ್ಲ,ಬಿಜೆಪಿಯೊಳಗೆ ಹಲವರಿಗೆ ಹೀಗನಿಸುತ್ತಿದೆ, ಅವರು ಹೇಳಲು ಭಯಪಡುತ್ತಿರಬಹುದು ಎಂದಿದ್ದಾರೆ. ಕೆಲವು ದಿನಗಳ ಹಿಂದೆ "ಭಯಪಡದ" ಮತ್ತೊಬ್ಬ ಬಿಜೆಪಿ ಮುಖಂಡ ಸುಬ್ರಮಣ್ಯ ಸ್ವಾಮಿಯವರು ಕೂಡ ಹೀಗೇ ಹೇಳಿದ್ದರು ಎಂದು ನೆನಪಿಸಿಕೊಳ್ಳಬಹುದು.

ಇವರಿಬ್ಬರೂ ಹಣಕಾಸು ಮಂತ್ರಿಗಳ ಹುದ್ದೆಯ ಮೇಲೆ ಕಣ್ಣಿಟ್ಟವರು, ಆದ್ದರಿಂದ ಹಾಗೆ ಹೇಳುತ್ತಿದ್ದಾರೆ ಎಂದು ಆಳುವ ಮಂದಿ ಇದನ್ನೆಲ್ಲ ತಳ್ಳಿ ಹಾಕಲು ಸಾಧ್ಯವೇ? ಅದಕ್ಕಿಂತಲೂ ಮುಖ್ಯವಾಗಿ ಇದು ಕೇವಲ ಪ್ರಸಕ್ತ ಹಣಕಾಸು ಮಂತ್ರಿಗಳ ವಿಫಲತೆ ಮಾತ್ರವೇ?

ಎಲ್ಲ ಗ್ರಾಮೀಣ ಕುಟುಂಬಗಳಿಗೆ 2019 ರೊಳಗೆ ವಿದ್ಯುತ್-ಪ್ರಧಾನಿ





ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ನವಭಾರತ ▶2022 !

ನೋಟುರದ್ದತಿ ಉದ್ದೇಶಗಳ ಈಡೇರಿಕೆಗೆ ಪೋಲಿಸರಿಗೆ ಆದೇಶ!

ಹೌದು, "ನೋಟು ರದ್ದತಿಯ ಉದ್ದೇಶಗಳು ಈಡೇರುವಂತಾಗಲಿಕ್ಕೆ" ನಾಗರಿಕರು ನಗದರಹಿತ ವ್ಯವಹಾರಗಳತ್ತ ಹೊರಳುವಂತೆ ಪ್ರೋತ್ಸಾಹಿಸಲು, ಮತ್ತು ಖೋಟಾ ನೋಟುಗಳು ಹಾಗೂ ರಾಷ್ಟ್ರ-ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕಲು ಏನೇನು ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ವರದಿ ನೀಡುವಂತೆ ಕೇಂದ್ರ ಗೃಹ ಮಂತ್ರಾಲಯ ದೇಶಾದ್ಯಂತ ಪೋಲಿಸ್ ಪಡೆಗಳಿಗೆ ಪತ್ರ ಬರೆದಿದೆ ಎಂದು ಸಪ್ಟಂಬರ್ 24 ರ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಹೇಳಿದೆ.

ಈ ಪರಿಯ ಮಾಧ್ಯಮ 'ಮಂಥನ'!

ಹಿಂದುಸ್ತಾನ್ ಟೈಮ್ಸ್ ನ ಮಾಲಕರು ಹಿಂದಿನ 16 ತಿಂಗಳಿಂದ ತಮ್ಮ ದೈನಿಕದ ಸಂಪಾದಕರಾಗಿದ್ದ ರಾಬಿನ್ ಘೋಷ್ ತಮ್ಮ ಹುದ್ದೆ ಬಿಟ್ಟು ನ್ಯೂಯಾರ್ಕಿಗೆ ಮರಳಿದ್ದಾರೆ(ಸರಳ ಮಾತುಗಳಲ್ಲಿ, ರಾಜೀನಾಮೆ ನೀಡಿದ್ದಾರೆ) ಎಂದು ಪ್ರಕಟಿಸುವ ಹಿಂದಿನ ದಿನ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದರೆಂದು ಮಾಧ್ಯಮಗಳು ವರದಿ ಮಾಡಿವೆ. ಘೋಷ್ ಅವರು ಈ ಬಗ್ಗೆ ಏನೂ ಹೇಳಿಕೆ ನೀಡಿಲ್ಲ, ಪತ್ರಿಕೆಯ ಮಾಲಕರು ಇದನ್ನು ನಿರಾಕರಿಸಿದರೂ ಬಹಳಷ್ಟು ಮಂದಿ ಅದನ್ನು ನಂಬಲು ಸಿದ್ಧರಿಲ್ಲ. ಏಕೆಂದರೆ ಬಹಳ ದಿನಗಳಿಂದ ಈ ಸಂಪಾದಕರ ಬರಹಗಳ ಬಗ್ಗೆ ಆಳುವ ಪಕ್ಷದ ಮುಖಂಡರಿಂದ, ಮತ್ತು ಇತರ ಬಲಪಂಥೀಯ ಶಕ್ತಿಗಳಿಂದ ಆಕ್ಷೇಪಗಳು ಮಾಲಕರಿಗೆ ಹೋಗುತ್ತಿದ್ದುವಂತೆ.

ಮುಖ್ಯವಾಗಿ ಇವರು ಇದೇ ಜುಲೈ 28ರಂದು ತಮ್ಮ ಪತ್ರಿಕೆಯಿಂದ 'ಹೇಟ್ ಟ್ರಾಕರ್'(ದ್ವೇಷದ ಜಾಡು ಪತ್ತೆ) ಎಂಬ ಪ್ರತ್ಯೇಕ ಮೈಕ್ರೊ ಸೈಟ್ ಆರಂಭಿಸಿದ್ದರು. ಧರ್ಮ, ಜಾತಿ, ಜನಾಂಗದ ಹೆಸರಲ್ಲಿ ನಡೆಯುವ ಅಪರಾಧಗಳ ಮಾಹಿತಿ ಕಲೆ ಹಾಕುವುದು ಇದರ ಉದ್ದೇಶ. ಇಂತಹ ಅಪರಾಧಗಳ ಬಗ್ಗೆ ಜನಗಳು ಕಳಿಸುವ ಮಾಹಿತಿಗಳನ್ನು ಇದು ಒಳಗೊಂಡಿದೆ. ಇದು ಆಳುವ ಪಕ್ಷದ ಮುಖಂಡರ ಕಣ್ಣುಗಳನ್ನು ಕೆಂಪಾಗಿಸಿವೆಯಂತೆ. ಸಪ್ಟಂಬರ್ 28, 2015 ರಿಂದ ಸಪ್ಟಂಬರ್ 19, 2017 ರವರೆಗೆ ನಡೆದ ಇಂತಹ 149 ಹಲ್ಲೆಗಳ, ಕನಿಷ್ಟ 40 ಸಾವುಗಳ ಮಾಹಿತಿ ಸದ್ಯಕ್ಕೆ ಇದರಲ್ಲಿದೆ. ಇದು ಮುಂದುವರಿಯುತ್ತದೋ ಗೊತ್ತಿಲ್ಲ.

ಇದಾದ ನಂತರ ಮಾಧ್ಯಮಗಳಲ್ಲಿ ಮತ್ತೊಂದು ಸುದ್ದಿ ಪ್ರಕಟವಾಗಿದೆ. ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದ ರಾಜಸ್ಥಾನದಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ ಕುರಿತ ಮೂರ್ತ ಅಧ್ಯಯನದ ಲೇಖನವನ್ನು ಆ ಪತ್ರಿಕೆ ತನ್ನ ವೆಬ್‌ಸೈಟ್‌ನಿಂದ ತೆಗೆದಿದೆ. ಅದನ್ನು ಬರೆದ ರೋಸಮ್ಮ ಥಾಮಸ್‌ಗೆ ವಾಟ್ಸ್‌ಆಪ್ ಬೆದರಿಕೆಗಳು ಬಂದಿವೆ ಎಂದು ವರದಿಯಾಗಿದೆ.

ಮೇಲಿನವರು ಆಳುವವರೊಂದಿಗೆ ಟೀ ಪಾರ್ಟಿ ಮಾಡುತ್ತಿದ್ದಾರೆ, ಕೆಳಗೆ ಸತ್ಯ ಬರೆವ ಪತ್ರಕರ್ತರು ಸಾವು ಎದುರಿಸುತ್ತಿದ್ದಾರೆ ಎಂದೊಬ್ಬ ಪತ್ರಕರ್ತರು ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

ಅಚ್ಛೇ ದಿನ್‌ಗಳಲ್ಲಿ ವಿಶ್ವವಿದ್ಯಾಲಯ: ಸಾವಿರ ಸಂವಾದಗಳ ಬದಲು 1000 ಎಫ್‌ಐಆರ್‌ಗಳು

ಕಾಶಿ ಹಿಂದೂ ವಿಶ್ವವಿದ್ಯಾಲಯದ ಆವರಣದಲ್ಲಿ ಲೈಂಗಿಕ ಕಿರುಕುಳಗಳಿಂದ ರಕ್ಷಣೆ ಕೇಳಿದ ವಿದ್ಯಾರ್ಥಿನಿಯರ ಮೇಲೆ ಸಪ್ಟಂಬರ್ 23 ರಂದು ಅಮಾನುಷ ಪೋಲಿಸ್ ದಮನ ನಡೆದಿದೆ. ಸಾಲದ್ದಕ್ಕೆ ಒಂದು ಸಾವಿರ ವಿದ್ಯಾರ್ಥಿನಿಯರ ಮೇಲೆ ಎಫ್‌ಐಆರ್ ಹಾಕಲಾಗಿದೆ.

ವಾರಣಾಸಿಯ ಜಿಲ್ಲಾಧಿಕಾರಿ ವಿವಿ ಆಡಳಿತ ಕಿರುಕುಳದ ದೂರನ್ನು ಸರಿಯಾಗಿ ನಿರ್ವಹಿಸದೇ ಇದ್ದುದರಿಂದಾಗಿ ಈ ಘಟನೆ ನಡೆದಿದೆ ಎಂದು ಪ್ರಾಥಮಿಕ ತನಿಖೆಯಿಂದ ಕಂಡು ಬಂದಿದೆ ಎಂದು ಹೇಳಿದ ಮೇಲೂ, ಇದು ಲೈಂಗಿಕ ಕಿರುಕುಳವಲ್ಲ, ಚುಡಾಯಿಸಿದ್ದಷ್ಟೇ, ಪ್ರತಿಯೊಬ್ಬ ಹುಡುಗಿಯ ಮಾತು ಕೇಳುತ್ತಿದ್ದರೆ ವಿಶ್ವವಿದ್ಯಾಲಯವನ್ನು ನಡೆಸಲು ಸಾಧ್ಯವಿಲ್ಲ ಎಂದ ಉಪಕುಲಪತಿಗಳು ವಿದ್ಯಾರ್ಥಿನಿಯರಿಗೆ ಅಭದ್ರತೆಯೇನೂ ಇಲ್ಲ ಎಂದೇ ಹೇಳುತ್ತಲೇ ಇದ್ದರು, ಇದೆಲ್ಲ ಹೊರಗಿನವರ ಕಿತಾಪತಿ, ಈ ವಿವಿಯನ್ನೂ ಜೆಎನ್‌ಯು, ದಿಲ್ಲಿ ವಿವಿಯಂತೆ 'ರಾಷ್ಟ್ರ-ವಿರೋಧಿ'ಗಳ ತಾಣವಾಗಿ ಮಾಡಬೇಕೆಂದಿದ್ದಾರೆ ಎಂದು ಹೇಳಿ ನಗೆಪಾಟಲಾಗುತ್ತಿದ್ದರು. ಅದನ್ನು ಒಪ್ಪಿಕೊಂಡಂತೆ ಕಾಣುತ್ತಿರುವ ರಾಜ್ಯದ ಮುಖ್ಯಮಂತ್ರಿಗಳು ಇನ್ನೂ ಮೌನವಾಗಿದ್ದಾರೆ. ವಿವಿಯ ಪ್ರಾಕ್ಟರ್ ಅಂದರೆ 'ಶಿಸ್ತುಪಾಲಕರು' 'ನೈತಿಕ ಹೊಣೆ' ಹೊತ್ತು ರಾಜೀನಾಮೆ ನೀಡಿದರು. ಉಪಕುಲಪತಿಗಳ ನೆಚ್ಚಿನ ಬಂಟರೆನಿಸಿದ ಇವರನ್ನು ಬಲಿಪಶು ಮಾಡಿರಬಹುದು ಎಂದು ಊಹಿಸಲಾಗಿದೆ. ಅವರೂ ಅದನ್ನು ಅಲ್ಲಗಳೆದಿಲ್ಲ.

ಈಗ ಕೊನೆಗೂ ಉಪಕುಲಪತಿಗಳನ್ನೂ ರಜಾದಲ್ಲಿ ಹೋಗಲು ಕೇಂದ್ರ ಸರಕಾರ ಹೇಳಿದೆ ಎಂದು ವರದಿಯಾಗಿದೆ. ಹೈದರಾಬಾದ್ ವಿವಿ ಉಪಕುಲಪತಿಯಂತೆ ಬಿಸಿ ಆರಿದ ಮೇಲೆ ಮತ್ತೆ ತರುತ್ತಾರೋ ಗೊತ್ತಿಲ್ಲ.

ಈ ನಡುವೆ ಎಂದಿನಂತೆ ಪ್ರಧಾನ ಮಂತ್ರಿಗಳ ಮೌನ ಮುಂದುವರೆದಿದೆ. ತಮ್ಮದೇ ಚುನಾವಣಾ ಕ್ಷೇತ್ರದಲ್ಲಿ ತಾವೇ 'ಬೇಟಿ'ಗಳೆಂದು ಅಕ್ಕರೆ ಪ್ರದರ್ಶಿಸುವವರ ಮೇಲೆ, ತಮ್ಮ ಭೇಟಿ ಕಾಲದಲ್ಲೇ ಹಿಂಸಾಚಾರ ನಡೆಸುತ್ತಿದ್ದಾಗ, ಅವರು ದಾರಿ ಬದಲಿಸಿ ಹೋಗಿರುವುದು, 'ಬೇಟಿ'ಗಳ ಮೊರೆಗೆ ಕಿವಿಗೊಡುವ ಬದಲು ಕಿವಿ ಮುಚ್ಚಿಕೊಂಡಿರುವುದು ಹಲವರಿಗೆ ಆಶ್ಚರ್ಯ ಉಂಟುಮಾಡಿದೆಯಂತೆ.

ಆದರೆ 'ಅಚ್ಛೇದಿನ್' ಗಳು ಆರಂಭವಾಗುತ್ತಿದ್ದಂತೆಯೇ ಇಲ್ಲಿ ಅಧಿಕಾರ ವಹಿಸಿಕೊಂಡು ವಿದ್ಯಾರ್ಥಿನಿಯರಿಗೆ 'ಸಂಸ್ಕೃತಿ'ಯ ಹೆಸರಲ್ಲಿ ಸಮಯದ, ಮೊಬೈಲ್ ಬಳಕೆಯ 'ಕರ್ಫ್ಯೂ ವಿಧಿಸಿದ ಈ ಉಪಕುಲಪತಿಗಳು ಅವರ ಪರಮ ನಂಬಿಕಸ್ಥರು ಎಂದು ಗೊತ್ತಿರುವವರಿಗೆ, ಇದರಿಂದೇನೂ ಆಶ್ಚರ್ಯವಾಗಬೇಕಿಲ್ಲ. ಯೆಚುರಿಯವರು ಹೇಳುವಂತೆ ಇದೀಗ ನಮ್ಮನ್ನು ಆಳುತ್ತಿರುವವರ 'ಮೌಲ್ಯ'ಗಳನ್ನು ತೋರಿಸುತ್ತದೆ, ಸಾವಿರವಿಚಾರಗಳು ಸ್ಪರ್ಧಿಸ ಬೇಕಾದ ವಿಶ್ವವಿದ್ಯಾಲಯ ಗಳಲ್ಲಿ ಸಾವಿರ ಎಫ್‌ಐಆರ್‌ಗಳು ಕಾಣಬರುತ್ತಿವೆ!



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿ ಹಿಂದಿ

ಬಿಜೆಪಿಯ ಅವಧಿಯಲ್ಲಿ ತೈಲಬೆಲೆ ಏರಿಕೆ



ಸುರ್ಜಿತ್ ದಾಸ್
ಅನು: ಭಾರತಿ ಗಾಂವ್ಕರ್

ಪೆಟ್ರೋಲ್‌ನ ಸರಾಸರಿ ಬೆಲೆ ಪ್ರತೀ ಲೀಟರ್‌ಗೆ 75 ರೂ. ಮತ್ತು ಡಿಸೆಲ್‌ನ ಸರಾಸರಿ ಬೆಲೆ ಪ್ರತೀ ಲೀಟರ್‌ಗೆ 62 ರೂ. ಸೆಪ್ಟೆಂಬರ್ ಮಧ್ಯದಲ್ಲಿ ಏರಿಕೆ ಆಗಿದೆ. ಇದರಿಂದಾಗಿ ದೇಶದ ಜನತೆ ಮತ್ತೆ ಬೆಲೆ ಏರಿಕೆಯಿಂದ ಬಳಲುತ್ತಿದೆ. 2013 ರ ದ್ವಿತಿಯಾರ್ಧ ಮತ್ತು 2014 ರ ಮೊದಲಾರ್ಧದಲ್ಲಿ ಪೆಟ್ರೋಲ್‌ನ ಚಿಲ್ಲರೆ ಬೆಲೆ ಈ ಮಟ್ಟದಲ್ಲಿ ಇತ್ತು ಅಂದರೆ ಅದು ಯು.ಪಿ.ಎ–2 ನೇ ಸರ್ಕಾರದ ಕೊನೆಯ ಅವಧಿ. ಸರಾಸರಿ ಅಂತರಾಷ್ಟ್ರೀಯ ಕಚ್ಚಾ ತೈಲದ ಬೆಲೆ ಆ ಅವಧಿಯಲ್ಲಿ 140 ಡಾಲರ್ ಪ್ರತೀ ಬ್ಯಾರಲ್ ಆಗಿತ್ತು (ಒಂದು ಬ್ಯಾರಲ್ = 159 ಲೀಟರ್, ಸರಿಸುಮಾರು). 2014 ಮೇ ಕೊನೆಯಲ್ಲಿ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂತು. ಅದೃಷ್ಟವಶಾತ್, 146.5 ಯು. ಎಸ್. ಡಾಲರ್ ಇದ್ದ ಅಂತರಾಷ್ಟ್ರೀಯ ಕಚ್ಚಾತೈಲದ ಬೆಲೆ (ಜೂನ್ 2014 ರಲ್ಲಿ) ಜನವರಿ 2015 ರೊಳಗೆ 62 ಯು.ಎಸ್. ಡಾಲರ್ ಪ್ರತೀ ಬ್ಯಾರಲ್ ಆಯಿತು. ಆದಾಗ್ಯೂ, ಅಂತರಾಷ್ಟ್ರೀಯ ಕಚ್ಚಾ ತೈಲದ ಬೆಲೆ ಶೆ. 55% ರಷ್ಟು ಕುಸಿತ ಕಂಡರೂ, ಪೆಟ್ರೋಲ್‌ನ ದೇಶಿಯ ಚಿಲ್ಲರೆ ಬೆಲೆ ಕೇವಲ 22% ರಷ್ಟು ಮಾತ್ರ ಇಳಿತ ಕಂಡಿತು.

ಆ ಮೂಲಕ, ಅಂತರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಯಲ್ಲಿ ಉಂಟಾದ ಕಡಿತದಲ್ಲಿ 50% ಕ್ಕಿಂತ ಕಡಿಮೆ ಲಾಭಾಂಶವನ್ನು ಮಾತ್ರ ಭಾರತದ ದೇಶಿಯ ಗ್ರಾಹಕರಿಗೆ ರವಾನಿಸಲಾಯಿತು. ಆ ನಂತರದ ದಿನಗಳಿಂದ ಅಂತರಾಷ್ಟ್ರೀಯ ಕಚ್ಚಾ ತೈಲದ ಬೆಲೆ, ಪ್ರತೀ ಬ್ಯಾರಲ್‌ಗೆ 70 ಡಾಲರ್‌ಗಿಂತ ಕಡಿಮೆ ಇತ್ತು. ಯು.ಪಿ.ಎ.–2 ಸರ್ಕಾರದ ಅವಧಿಗೆ ಹೋಲಿಸಿದರೆ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ದೇಶಿಯ ಮತ್ತು ಅಂತರಾಷ್ಟ್ರೀಯ ತೈಲಬೆಲೆಯಲ್ಲಿ ನಡುವಿನ ವ್ಯತ್ಯಾಸ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗಿದೆ. ಯು.ಪಿ.ಎ. ಅವಧಿಯಲ್ಲಿ ಪೆಟ್ರೋಲ್ ಬೆಲೆ ಪ್ರತೀ ಲೀಟರ್‌ಗೆ ಸುಮಾರು 80 ರೂ. ಏರಿಕೆ ಆಗಿದೆ. ಇದಕ್ಕೆ ಮುಖ್ಯ ಕಾರಣ ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಅಧಿಕವಾಗಿರುವುದು.

ಆದರೆ, ಇತ್ತೀಚೆಗೆ ಪೆಟ್ರೋಲ್ ಪ್ರತೀ ಲೀಟರ್‌ಗೆ 75 ರೂ.(ಮುಂಬೈ ಮತ್ತು ಇನ್ನಿತರ ಕಡೆಗಳಲ್ಲಿ 80 ರೂ.) ಆಗಿರುವುದು ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಆಗಿರುವದರಿಂದಾಗಿ ಅಲ್ಲ. ಬದಲಾಗಿ ಶುದ್ದೀಕರಣ, ವಿಕ್ರಯ (ತೈಲ ವಿಕ್ರಯ (Markets) ಕಂಪನಿಗಳು ಲಾಭವನ್ನು ಒಳಗೊಂಡು) ಮತ್ತು ತೆರಿಗೆಗಳಿಂದಾಗಿ. ಕಳೆದ ಮೂರು ವರ್ಷಗಳಲ್ಲಿ ಗಮನಾರ್ಹ ರೀತಿಯಲ್ಲಿ ವ್ಯತ್ಯಾಸವಾದ ತೆರಿಗೆಯ ವಿಭಾಗಗಳನ್ನು ಹೊರತುಪಡಿಸಿ ಇನ್ನೇನಾದರೂ ಗಣನೀಯವಾಗಿ ಏರಿಕೆ ಆಗಿದೆ ಎಂದು ಸೂಚಿಸಲು ಯಾವುದೇ ಆಧಾರಗಳಿಲ್ಲ. ರಾಜ್ಯ ಸರ್ಕಾರಗಳಿಗೆ ಸೇರ್ಪಡೆಗೊಳ್ಳುವ, ಜಿಡಿಪಿಯ ಭಾಗವಾಗಿರುವ, ಪೆಟ್ರೋಲ್–ಉತ್ಪನ್ನಗಳ ವ್ಯಾಪಾರ ತೆರಿಗೆಯ ಆದಾಯ ಸಹ ಏರಿಕೆ ಆಗಿಲ್ಲ. ಆದಾಗ್ಯೂ, ಜಿಡಿಪಿಯ ಭಾಗವಾಗಿರುವ ಪೆಟ್ರೋಲಿಯಂ ಉತ್ಪನ್ನಗಳಿಂದ ಕೇಂದ್ರ ಸರ್ಕಾರದ ತೆರಿಗೆಯ ಆದಾಯ ಕಳೆದ 2 ವರ್ಷಗಳಲ್ಲಿ 0.9% ರಿಂದ 1.8% ಕ್ಕೆ ಏರಿ ದ್ವಿಗುಣವಾಗಿದೆ. ಹಾಗಾಗೆ, ಈ ಅವಧಿಯಲ್ಲಿ, ಪೆಟ್ರೋಲ್ ಉತ್ಪನ್ನಗಳಿಂದ ಕೇಂದ್ರ ಸರ್ಕಾರದ ಹೆಚ್ಚಿನ ತೆರಿಗೆ ಸಂಗ್ರಹವಾಗಿರುವ ಕಾರಣಕ್ಕಾಗಿ ಬೆಲೆ ಏರಿಕೆ ಪ್ರಮುಖವಾಗಿ ಆಗಿರುವುದಕ್ಕೆ ಕಾರಣ. ಬಿಜೆಪಿ ಅವಧಿಯಲ್ಲಿ ತೈಲ ಬೆಲ ಏರಿಕೆ ಆಗಲು ಕಾರಣವಾಗಿರುವುದರ ಹಿಂದಿರುವ ಮುಖ್ಯ ಕಥೆ. ಈ ವಾದವನ್ನು ಕೆಳಕಂಡ ಪ್ರಯೋಗಿಕ ಸಾಕ್ಷ್ಯದ ಸಹಾಯದಿಂದ ದೃಡೀಕರಿಸಬಹುದು.

ಮೇಲೆ ಕೊಟ್ಟಂತಹ ಪಟ್ಟಿಯಲ್ಲಿ, ಜನವರಿ 2010 ರಿಂದ ಸೆಪ್ಟೆಂಬರ್ 2017 ರವರೆಗೆ ಪ್ರತೀ ತಿಂಗಳು 3 ಚರಾಂಕಗಳ ಮೇಲೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

ತೈಲ ಬೆಲೆ ನೀತಿಯಲ್ಲಿ ಎನ್.ಡಿ.ಎ. ಮತ್ತು ಯು.ಪಿ.ಎ.–2 ಸರ್ಕಾರ ಆಢಳಿತಾವದಿ ನಡುವಿನ ವ್ಯತ್ಯಾಸ ಸ್ಪಷ್ಟವಾಗಿದೆ. 2015 ಜನವರಿಯಿಂದ 40 ರೂ. ಪ್ರತೀ ಲೀಟರ್‌ನಂತೆ ಹೆಚ್ಚಿನ ಬೆಲೆಯನ್ನು ಕಾಯ್ದುಕೊಳ್ಳುವಂತೆ ಮಾಡಲಾಗಿದೆ. ಯು.ಪಿ.ಎ. ಆಢಳಿತ ಅವಧಿಯಲ್ಲಿ ಪ್ರತೀ ಲೀಟರ್‌ಗೆ 23 ರೂ.ದಿಂದ ಇದ್ದ ಅಂತರವನ್ನು ಎನ್.ಡಿ.ಎ. ಆಡಳಿತಾವಧಿಯಲ್ಲಿ ರೂ. 40ಕ್ಕೆ ಏರಿಸಲಾಗಿದೆ ಎಂದು ಕಂಡುಬರುತ್ತದೆ.

ಅಂತರಾಷ್ಟ್ರೀಯ ಕಚ್ಚಾತೈಲದ ಸರಾಸರಿ ಬೆಲೆ (ಡೇ–ಟೆಡ್ ಬ್ರೆಂಟ್, ಪಶ್ಚಿಮ ಟೆಕ್ಸಾಸ್ ಮತ್ತು ದುಬೈ ಘಟಹಗಳ ಸಾಮಾನ್ಯ ಸರಾಸರಿ), ಐ.ಎಂ.ಎಫ್ ನ ಪ್ರಾಥಮಿಕ ಸರಕುಗಳ ಬೆಲೆಯ ದತ್ತಪರಿಚಯ (Datebase) ದಿಂದ ಪ್ರತಿ ಬ್ಯಾರಲ್‌ಗೆ ಯು.ಎಸ್. ಡಾಲರ್ ಅಂಕಿ ಅಂಶದ ಪಟ್ಟಿಯಿಂದ ಪ್ರತೀ ಯು. ಎಸ್. ಡಾಲರ್‌ಗೆ ರೂಪಾಯಿ ಮೀರಿರುವುದರ, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ನಿಂದ (IOCL) ಆರ್.ಬಿ.ಐ. ಮತ್ತು ಪ್ರತೀ ಲೀಟ–ರ್‌ಗೆ ದೇಶಿಯ ಸರಾಸರಿ ಬೆಲೆ, (ದೆಹಲಿ, ಕೊಲ್ಕತಾ, ಮುಂಬೈ ಮತ್ತು ಚನ್ನೈ ನಾಲ್ಕು ಮೆಟ್ರೋ ನಗರಗಳಿಗೆ) ತೆಗೆದುಕೊಳ್ಳಲಾಗಿದೆ.

ಇಡೀ ಅವಧಿಯನ್ನು 2 ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಯು.ಪಿ.ಎ–2 ಆಡಳಿತಾವಧಿ (ಅಂದರೆ 2014 ರ ತನಕ) ಮತ್ತು ಎನ್.ಡಿ.ಎ. ಆಡಳಿತಾವಧಿ (ಜೂನ್ 2014 ನಂತರದ ಸಮಯ). ಪ್ರತೀ ಬ್ಯಾರಲ್‌ಗೆ ಯು.ಎಸ್. ಡಾಲರ್‌ನ ಪ್ರಕಾರ ಸರಾಸರಿ ಅಂತರರಾಷ್ಟ್ರೀಯ ಕಚ್ಚಾ ತೈಲದ ಬೆಲೆಯಲ್ಲಿ ಉಂಟಾದ ಏರಿಳಿತ ಕೋಷ್ಟಕದಲ್ಲಿ ಹೆಚ್ಚು ಕಂಡು ಬರುತ್ತದೆ. 2010 ರ ಮಧ್ಯದಲ್ಲಿ ಪ್ರತಿ ಬ್ಯಾರಲ್ ಗೆ 100 ಡಾಲರ ಆಗಿದ್ದ ಇದು 2011 & 12 ರ ವೇಳೆಗೆ 160 ಡಾಲರ್ ಏರಿಕೆ ಆಯಿತು. ಜೂನ್ 2014 ರ ಹೊತ್ತಿಗೆ ಪ್ರತಿ ಬ್ಯಾರಲ್‌ಗೆ ಸುಮಾರು 140 ಡಾಲರ್‌ರಷ್ಟಿತ್ತು. ನಂತರ ಪ್ರತೀ ಬ್ಯಾರಲ್‌ಗೆ 70 ಡಾಲರುಗಳಾಗಿ, ಗಣನೀಯ ಕುಸಿತ ಕಂಡಿತು. ಪ್ರತೀ ಡಾಲರಗೆ ರೂಪಾಯಿ ವಿನಿಮಯ ದರವನ್ನು ಚುಕ್ಕಿಗಳ ರೇಖೆಯಲ್ಲಿ ಉಂಟಾದ ಏರಿಳಿತದಿಂದ ತಿಳಿಯುತ್ತದೆ. ಈ ಅವಧಿಯಲ್ಲಿ ಪ್ರತೀ ಡಾಲರ್‌ಗೆ ಸರಾಸರಿ 45 ರೂ. ಇಂದ 65 ಕ್ಕೆ ಏರಿಕೆ ಆಗಿದೆ. ವಿನಿಮಯ ದರದ ಸಹಾಯದಿಂದ, ಪ್ರತೀ ಲೀಟರ್ ರೂಪಾಯಿ ಸರಣಿ ಬೆಲೆಗೆ ಅಂತರಾಷ್ಟ್ರೀಯ ಕಚ್ಚಾ ತೈಲದ ಸರಣೀ ಬೆಲೆ ಪ್ರತಿ ಡಾಲರ್‌ಗೆ ಎಷ್ಟೆಂದು ನಾವು ಪರಿವರ್ತಿಸಬಹುದು. ಸ್ಪಷ್ಟವಾಗಿ, 2010 ರ ಆರಂಭದಲ್ಲಿ ಇದು ಪ್ರತೀ ಲೀಟರ್‌ಗೆ 30 ರೂ. ಗಳಿಂದ ಸೆಪ್ಟೆಂಬರ್ 2013ರ ವೇಳೆಗೆ 59 ಕ್ಕೆ ಹೆಚ್ಚಾಗಿದೆ. ಜೂನ್ 2014 ರಲ್ಲಿ, ಪ್ರಸ್ತುತ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡಾಗ 55 ರೂಪಾಯಿಗಿಂತಲೂ ಹೆಚ್ಚಿತ್ತು. ಆದಾಗೂ 2015 ಜನವರಿ ವೇಳೆಗೆ ಅದೃಷ್ಟವಶಾತ್ ಇದು ಪ್ರತೀ ಲೀಟರ್‌ಗೆ 25 ರೂ ಇಳಿಯಿತು.

ಇದೀಗ ಪ್ರತೀ ಲೀಟರ್‌ಗೆ 30 ರೂ. ಇದೆ. ಅಂತರಾಷ್ಟ್ರೀಯ ಕಚ್ಚಾ ತೈಲದ ಬೆಲೆ 30 ರೂ. ಇಂದ 60 ಏರಿಕೆ ಆದಾಗ ದೇಶಿಯ ಪೆಟ್ರೋಲ್‌ಬೆಲೆ ರೂ. 45 ರಿಂದ ರೂ. 80 ಕ್ಕೆ ಏರಿಕೆ ಆಯಿತು. ಆದಾಗ್ಯೂ, ಅಂತರಾಷ್ಟ್ರೀಯ ಬೆಲೆ 55 ರಿಂದ 25 ರೂ ಗೆ ಇಳಿದಾಗ ದೇಶಿಯ ಪೆಟ್ರೋಲ್‌ನ ಬೆಲೆ 78 ರೂ. ಇಂದ ಕೇವಲ 62 ರೂ ಪ್ರತೀ ಲೀಟರ್‌ಗೆ ಇಳಿಯಿತು. ಆದ್ದರಿಂದ, ದೇಶಿಯ ಗ್ರಾಹಕರು ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಯಲ್ಲಿ ಉಂಟಾದ ಇಳಿಕೆಯ ಲಾಭ ಪಡೆಯುವಲ್ಲಿ ವಂಚಿತರಾದರು.

ಹಾಗಾದರೆ ತೈಲ ಬೆಲೆ ನೀತಿಯಲ್ಲಿ ಎನ್.ಡಿ.ಎ. ಮತ್ತು ಯು.ಪಿ.ಎ.–2 ಸರ್ಕಾರ ಆಢಳಿತಾವದಿ ನಡುವಿನ ವ್ಯತ್ಯಾಸ ಸ್ಪಷ್ಟವಾಗಿದೆ. 2015 ಜನವರಿಯಿಂದ 40 ರೂ. ಪ್ರತೀ ಲೀಟರ್‌ನಂತೆ ಹೆಚ್ಚಿನ ಬೆಲೆಯನ್ನು ಕಾಯ್ದುಕೊಳ್ಳುವಂತೆ ಮಾಡಲಾಗಿದೆ. ಯು.ಪಿ.ಎ. ಆಢಳಿತ ಅವಧಿಯಲ್ಲಿ ಪ್ರತೀ ಲೀಟರ್‌ಗೆ 23 ರೂ.ದಿಂದ ಇದ್ದ ಅಂತರವನ್ನು ಎನ್.ಡಿ.ಎ. ಆಢಳಿತಾವದಿಯಲ್ಲಿ ರೂ. 40ಕ್ಕೆ ಏರಿಸಲಾಗಿದೆ ಎಂದು ಕಂಡುಬರುತ್ತದೆ. ಈ ಮೊದಲೇ ಹೇಳಿದ ಹಾಗೆ, ಈ ರೀತಿ ಬೆಲೆ ಏರಲು ಮುಖ್ಯ ಕಾರಣ ಕೇಂದ್ರಸರ್ಕಾರದ ಪೆಟ್ರೋಲಿಯಂನಿಂದ ಬೃಹತ್ ಪ್ರಮಾಣದ ತೆರಿಗೆ ಸಂಗ್ರಹಿಸುವದರಿಂದಾಗಿದೆ. ಹಾಗಾಗಿ ಇತ್ತೀಚೆಗೆ ಬೆಲೆ ಏರಿಕೆ ಆದದ್ದು ಕಡ್ಡಾಯ ಕಾರಣಗಳಿಂದಾಗಿ ಅಲ್ಲ ಬದಲಾಗಿ ಸರಕಾರದ ಉದ್ದೇಶ ಪೂರಕ ಬೆಲೆ ಏರಿಕೆ ನೀತಿಯಿಂದಾಗಿ ಆದದ್ದು.

ಪ್ರಸ್ತುತ ಎನ್.ಡಿ.ಎ. ಸರ್ಕಾರದ ಪ್ರವಾಸೋದ್ಯಮ ಸಚಿವ ಕೆ.ಜೆ. ಅಲ್ಫೋನ್ಸ್ ದಾಖಲೆ ಮೂಲಕ ಇದನ್ನು ಸ್ಪಷ್ಟಪಡಿಸಿದ್ದಾರೆ. "ಇದು ಸರ್ಕಾರದ ಉದ್ದೇಶ ಪೂರ್ವಕ ನಿರ್ಧಾರವಾಗಿದೆ. ತೆರಿಗೆ ಪಾವತಿಸಲು ಸಶಕ್ತರಾದವರಿಗೆ ನಾವು ತೆರಿಗೆ ವಿಧಿಸುತ್ತೇವೆ. ಕೆಳವರ್ಗದ ಕಲ್ಯಾಣಕ್ಕಾಗಿ ನಾವು ಈ ಕಾರ್ಯ ಮಾಡುತ್ತಿದ್ದೇವೆ. ಪ್ರತಿಯೊಬ್ಬರಿಗೂ ವಿದ್ಯುತ್, ಮನೆ, ಶೌಚಾಲಯಗಳನ್ನು ಖಾತರಿ ಪಡಿಸುತ್ತವೆ, ಎಂಬ ಹೇಳಿಕೆ ಮೂಲಕ ಸರ್ಕಾರದ ನಿರ್ಧಾರ ದೃಢಪಡಿಸಿದ್ದಾರೆ.


ಆದಾಗ್ಯೂ, ಭಾರತೀಯ ಸನ್ನಿವೇಶದಲ್ಲಿ, ತೈಲ ಬೆಲೆ ಏರಿಕೆಯಿಂದಾಗಿ ಅಭಿವೃದ್ಧಿ ಮತ್ತು ಹಣದುಬ್ಬರದ ಮೇಲೆ ಗಂಭೀರ ನಕಾರಾತ್ಮಕ ಪರಿಣಾಮ ಬೀಳುವುದು ಎಂದು ಹಲವರ ಅಧ್ಯಯನಗಳು ತೋರಿಸಿಕೊಟ್ಟಿದೆ. ಬಡಜನರ ಪರವಾದ ಸಾಮಾಜಿಕ ವಲಯಕ್ಕೆ ಖರ್ಚು ಮಾಡುವುದರ ವಿರುದ್ಧವಾಗಿ ಯಾರೂ ಇಲ್ಲ. ಆದರೆ ಒಂದರ ವಿರುದ್ಧ ಇನ್ನೊಂದನ್ನು ತರುವುದ ಒಂದು ಕ್ಲೀಷೆಯ ತಂತ್ರವೆನಿಸುತ್ತದೆ.

ತೆರಿಗೆ ಪಾವತಿಸುವ ಸಾಮರ್ಥ್ಯಇರುವವರಿಗೆ, ಪರೋಕ್ಷ ತೆರಿಗೆಗಳಿಲ್ಲ, ಬದಲಾಗಿ ನೇರ ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಬಡ ಜನರ ಕಲ್ಯಾಣದ ಹೆಸರನ್ನು ಮುಂದಿಟ್ಟುಕೊಂಡು, ತೆರಿಗೆ ಪಾವತಿಸುವ ಸಾಮರ್ಥ್ಯ ಹೊಂದಿರುವ ಜನರಿಂದ ಆದಾಯ ಮತ್ತು ಲಾಭದ ತೆರಿಗೆಗಳಂತರ ಗಂಭೀರವಾಗಿ ತೆರಿಗೆಯನ್ನು ಸಂಗ್ರಹಿಸಲು ಸರ್ಕಾರ ಮುಂದಾಗಿದೆ.

ಏನೇ ಆದರೂ, ಅಂತರಾಷ್ಟ್ರೀಯ ತೈಲಬೆಲೆ ಸ್ಥಿರವಾಗಿದ್ದಾಗ, ತೆರಿಗೆಯು ಕಾರಣದಿಂದಾಗಿ ದೇಶಿಯ ಪೆಟ್ರೋಲ್ ಉತ್ಪನ್ನಗಳಲ್ಲಿ ಬೆಲೆ ಏರಿಕೆ ಮಾಡುವುದು ನ್ಯಾಯ ಸಮ್ಮತವಲ್ಲ. ಇದರಿಂದಾಗಿ, ಆರ್ಥಿಕತೆಯಲ್ಲಿ ಉಳಿದ ಎಲ್ಲ ವಲಯಗಳಲ್ಲಿ ಬೆಲೆ ಏರಿಕೆ ಉಂಟಾಗುತ್ತದೆ ಮತ್ತು ಆರ್ಥಿಕ ಕುಸಿತಕ್ಕೆ ಕಾರಣವಾಗುತ್ತಿದೆ. ಪೆಟ್ರೋಲಿಯಂಗೆ ಸಬ್ಸಿಡಿಯನ್ನು ಒದಗಿಸುವ ಬದಲು, ಈ ವಲಯವನ್ನು ಸರ್ಕಾರದ ಖಜಾನೆ ತುಂಬಿಸುವ ಒಂದು ಸಾಧನವಾಗಿ ಬಳಸಿಕೊಂಡರೆ ದೇಶದ ಜನಸಾಮಾನ್ಯರ ಹಿತಾಸಕ್ತಿಗೆ ವಿರುದ್ಧವಾದ ಕಾರ್ಯ ಮಾಡಿದಂತಾಗುತ್ತದೆ.

ಜನ–ಪರ ನೀತಿಯುಳ್ಳ ಸರ್ಕಾರದ ದಿಶೆ, ಪೆಟ್ರೋಲ್ – ಉತ್ಪನ್ನಗಳ ಮೇಲಿನ ಕೇಂದ್ರ ಸರ್ಕಾರದ ತೆರಿಗೆ ಕಡಿತಮಾಡಿ, ಶ್ರೀಮಂತ ಆದಾಯ ಮತ್ತು ಲಾಭದ ಮೇಲೆ ಹೆಚ್ಚು ಹೆಚ್ಚು ನೇರ ತೆರಿಗೆಯನ್ನು ವಿಧಿಸಿ ಜನರ ಕಲ್ಯಾಣ ಮಾಡುವಂತಹದ್ದಾಗಿರಬೇಕು. ●

Graph: Price of Petrol in India and International Oil Price in US$ & in Rupees



Source: Indian Oil Corporation Limited (IOCL), Reserve Bank of India (RBI) and International Monetary Fund (IMF).

ಝಾರ್ಖಂಡ್ : ಕರಾಳ ಮಸೂದೆಗಳನ್ನು ತಕ್ಷಣ ವಾಪಾಸ್ ತಗೊಳ್ಳಿ–ಎಡಪಕ್ಷಗಳ ಆಗ್ರಹ

ಸೆಪ್ಟಂಬರ್ 25ರಂದು ರಾಂಚಿಯಲ್ಲಿ ನಡೆದ ಎಡಪಕ್ಷಗಳು, ಸಾಮೂಹಿಕ ಸಂಘಟನೆಗಳು ಮತ್ತು ಸಾಮಾಜಿಕ ಸಂಘಟನೆಗಳ ರಾಜ್ಯ ಮಟ್ಟದ ಸಮಾವೇಶ ಝಾರ್ಖಂಡ್‌ನ ಬಿಜೆಪಿ ನೇತೃತ್ವದ ಸರಕಾರ ತಕ್ಷಣವೇ ಎರಡು ಕರಾಳ ಮಸೂದೆಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ. ಝಾರ್ಖಂಡ್ ಧಾರ್ಮಿಕ ಸ್ವಾತಂತ್ರ್ಯ ಮಸೂದೆ, 2017 ಮತ್ತು ಭೂಸ್ವಾಧೀನ, ಮರುವಸತಿ ಮತ್ತು ಮರುನೆಲೆಯಲ್ಲಿ ಸರಿಪಡಿಕೆ ಮತ್ತು ನ್ಯಾಯಯುತ ಹಾಗೂ ಪಾರದರ್ಶಕತೆಯ ಹಕ್ಕು ಮಸೂದೆ–2017 ಇವೇ ಆ ಎರಡು ಮಸೂದೆಗಳು.

ಮೊದಲನೆಯದ್ದು ಬಿಜೆಪಿ ಸರಕಾರ ಕೊನೆಗೂ ಹಿಂತೆಗೆದುಕೊಳ್ಳಬೇಕಾಗಿ ಬಂದ ಶತಮಾನದಷ್ಟು ಹಳೆಯ ಛೋಟಾನಾಗ್ಪುರ ಗೇಣಿ ಕಾಯ್ದೆ ಮತ್ತು ಸಂತಾಲ್ ಪರಗಣ ಗೇಣಿ ಕಾಯ್ದೆ ತಿದ್ದುಪಡಿಗಳ ವಿರುದ್ಧ ದೀರ್ಘ ಹೋರಾಟದಲ್ಲಿ ಬೆಸೆದ ಬುಡಕಟ್ಟು ಜನಗಳ ಚಾರಿತ್ರಿಕ ಐಕ್ಯತೆಯನ್ನು ಮುರಿಯುವ ಉದ್ದೇಶ ಹೊಂದಿದ್ದರೆ, ಎರಡನೆಯದ್ದು, ಕಾರ್ಪೊರೇಟ್‌ಗಳ ಪ್ರಯೋಜನಕ್ಕೆ ಭೂಮಿಯನ್ನು ಕಸಿದುಕೊಳ್ಳುವ ಉದ್ದೇಶ ಹೊಂದಿದೆ. ಇದು ಕೇಂದ್ರದ ಬಿಜೆಪಿ ಸರಕಾರ ತರಲು ಪ್ರಯತ್ನಿಸಿ ದೇಶಾದ್ಯಂತ ರೈತರ ಕಡು ವಿರೋಧದಿಂದಾಗಿ ಕೈಬಿಡಬೇಕಾಗಿ ಬಂದ ಮಸೂದೆಯನ್ನು ರಾಜ್ಯದಲ್ಲಾದರೂ ತಂದು ರೈತರನ್ನು ವಂಚಿಸಲು ಹೊರಟಿರುವಂತದ್ದು.

ಸೆಪ್ಟಂಬರ್ 22 ರಂದು 1000ದಿನಗಳನ್ನು ಮುಗಿಸಿರುವುದನ್ನು ರಘುಬೀರ್ ದಾಸ್ ಸರಕಾರ ಸಾರ್ವಜನಿಕ ಖಜಾನೆಯ ಹಣದಿಂದ ಆಚರಿಸುತ್ತಿರುವ ಸಂದರ್ಭದಲ್ಲಿ ಇದು '1000ದಿನಗಳ ದುರಂತದ ಆಚರಣೆ' ಎಂದು ಎಡಶಕ್ತಿಗಳ ಸಮಾವೇಶ ವರ್ಣಿಸಿದೆ. ಈ ದುರಂತಮಯ ಆಳ್ವಿಕೆಯ ವಿರುದ್ಧ ಪ್ರಚಾರಾಂದೋಲನವನ್ನು ತೀವ್ರಗೊಳಿಸಲು, ಇದಕ್ಕಾಗಿ ಅಕ್ಟೋಬರ್ 2ರಿಂದ 15 ರವರೆಗೆ ಎಲ್ಲ ಜಿಲ್ಲಾ ಮುಖ್ಯಾಲಯಗಳಲ್ಲಿ ಪ್ರತಿಭಟನೆಗಳನ್ನು ಸಂಘಟಿಸಲು ಸಮಾವೇಶ ನಿರ್ಧರಿಸಿದೆ.

ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಎಸ್‌ಯುಸಿಐ(ಸಿ) ಮತ್ತು ಎಂಸಿಸಿ ಈ ಐದು ಎಡಪಕ್ಷಗಳ ಮತ್ತು ವಿವಿಧ ಸಾಮೂಹಿಕ ಹಾಗೂ ಸಾಮಾಜಿಕ ಸಂಘಟನೆಗಳ 300ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದರು.

ಮೋದಿ ಸರಕಾರದ ವಚನಭ್ರಷ್ಟತೆಯನ್ನು ಖಂಡಿಸಿದ್ದಲ್ಲದೆ, ರಾಜ್ಯದಲ್ಲಿ ಇತ್ತೀಚೆಗೆ 8 ರೈತರ ಆತ್ಮಹತ್ಯೆಗಳು, 4 ತಿಂಗಳಲ್ಲಿ 162 ಮಕ್ಕಳ ಸಾವು, ಕಳ್ಳಬಟ್ಟಿ ಸೇವನೆಯಿಂದ 20 ಸಾವುಗಳು, ಕೆಟ್ಟ ಆರೋಗ್ಯ ಸವಲತ್ತುಗಳು, ತೀವ್ರವಾಗಿ ಹದಗೆಟ್ಟಿರುವ ಕಾನೂನು–ವ್ಯವಸ್ಥೆ, ಆಹಾರ ಭದ್ರತೆಯ ಕೊರತೆ, ಪಡಿತರ ವ್ಯವಸ್ಥೆಯಲ್ಲಿ ಅನಿಯಮಿತತೆಗಳತ್ತ ಸಮಾವೇಶ ಗಮನ ಸೆಳೆಯಿತು.

ಆರಂಭದಲ್ಲಿ ಇತ್ತೀಚೆಗೆ ಕೊಲೆಯಾದ ಪ್ರಖ್ಯಾತ ಪತ್ರಕರ್ತೆ ಗೌರಿ ಲಂಕೇಶ್ ಹಾಗೂ ರಾಜ್ಯದಲ್ಲಿ ಭೂಕಾನೂನುಗಳನ್ನು ರೈತರ ವಿರುದ್ಧವಾಗಿ ತಿದ್ದುಪಡಿ ಮಾಡುವ ಸರಕಾರದ ಪ್ರಯತ್ನಗಳ ವಿರುದ್ಧ ಪ್ರತಿಭಟನೆಗಳಲ್ಲಿ ಬರ್ಕಗನ್(ಹಝಾರಿಬಾಗ್), ಗೋಲ ಹಾಗೂ ಖುಂಟಿಯಲ್ಲಿ ಪೋಲಿಸ್ ಗುಂಡುಗಳಿಗೆ ಬಲಿಯಾದ ಹುತಾತ್ಮ ರೈತರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಕೆ.ಬಕ್ಷಿ, ಸಿಪಿಐ(ಎಂಎಲ್) ರಾಜ್ಯ ಕಾರ್ಯದರ್ಶಿ ಜನಾರ್ಧನ ಪ್ರಸಾದ್ ಮತ್ತು ಶಾಸಕ ರಾಜಕುಮಾರ್ ಯಾದವ್, ಸಿಪಿಐನ ರಾಜ್ಯ ಕಾರ್ಯದರ್ಶಿ ಮತ್ತು ಮಾಜಿ ಎಂಪಿ ಯಾದ ಬಿ ಪಿ ಮೆಹ್ತ ಮತ್ತಿತರರು ಸಮಾವೇಶವನ್ನುದ್ದೇಶಿಸಿ ಮಾತಾಡಿದರು.

ರಾಜ್ಯಗಳ ಸುತ್ತ



ಪಕ್ಷದ ಸಮ್ಮೇಳನಗಳ ಸಂದರ್ಭದಲ್ಲಿ ಪರಿಸರ ನಿಯಮಾವಳಿಗಳನ್ನು ಅನುಸರಿಸಲು ಕೇರಳ ಸಿಪಿಐ(ಎಂ) ನಿರ್ಧಾರ

ಸಿಪಿಐ(ಎಂ)ನ 22ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಶಾಖಾ ಮಟ್ಟದಿಂದ ರಾಜ್ಯಮಟ್ಟದ ವರೆಗೆ ನಡೆಯುವ ಸಮ್ಮೇಳನಗಳಲ್ಲಿ ಪಕ್ಷದ ಘಟಕಗಳು ಮತ್ತು ಕಾರ್ಯಕರ್ತರು ಹಸಿರು ನಿಯಮಾವಳಿಗಳನ್ನು ಅನುಸರಿಸಬೇಕು ಎಂದು ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ನಿರ್ದೇಶನಗಳನ್ನು ನೀಡಿದ್ದಾರೆ.

ಪಕ್ಷದ ಕಾರ್ಯಕರ್ತರು ಪ್ರಚಾರ ಸಾಮಗ್ರಿಗಳಿಗೆ ಫ್ಲೆಕ್ಸ್ ಬೋರ್ಡ್‌ಗಳನ್ನು ಬಳಸದೆ ಪರಿಸರಕ್ಕೆ ಹಾನಿ ತರದ ಮರುಬಳಕೆಗೆ ತರಬಹುದಾದ ಸಾಮಗ್ರಿಗಳನ್ನು ಬಳಸಬೇಕು ಎಂದು ಅವರು ಹೇಳಿದ್ದಾರೆ.

ಸಮ್ಮೇಳನಗಳಿಗೆ ಬೇಕಾಗುವ ಬೋರ್ಡುಗಳು, ಬ್ಯಾನರುಗಳಲ್ಲದೆ, ಅಲಂಕರಣ ಐಟಂಗಳು, ತಟ್ಟೆಗಳು, ಲೋಟಗಳು ಮುಂತಾದವುಗಳಿಗೂ ಪರಿಸರ–ಸ್ನೇಹಿ ವಸ್ತುಗಳನ್ನೇ ಬಳಸಬೇಕು.

ರಾಜ್ಯ ಕಶ್ಮಲ ನಿರ್ವಹಣೆಯ ದೊಡ್ಡ ಸವಾಲನ್ನು ಎದುರಿಸುತ್ತಿರುವುದರಿಂದ ಎಲ್‌ಡಿಎಫ್ ಸರಕಾರ ಹರಿತ ಕೇರಳಂ ಮುಂತಾದ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿರುವಾಗ ಜನಗಳಿಗೆ ಪರಿಸರ–ಸ್ನೇಹಿಯಾಗುವ ಸರಿಯಾದ ಸಂದೇಶ ಹೋಗುವಂತೆ ಮಾಡುವಲ್ಲಿಯೂ ಪಕ್ಷದ ಕಾರ್ಯಕರ್ತರು ಮುಂಚೂಣಿಯಲ್ಲಿರಬೇಕು ಎಂದು ಕೊಡಿಯೇರಿಯವರು ಹೇಳಿದ್ದಾರೆ.

ಕೇರಳ: ದೇವಸ್ಥಾನದ ಬಗ್ಗೆ ಹುಸಿ ಸುದ್ದಿ ಹರಡಿಸಿ ಗಲಭೆ ಸೃಷ್ಟಿಸುವ ಆರೆಸ್ಸೆಸ್ ಪ್ರಯತ್ನ ಬಯಲು

ಕೇರಳದಲ್ಲಿ ದೇವಸ್ಥಾನದ ಹೆಸರಿನಲ್ಲಿ ಸುಳ್ಳು ಸುದ್ದಿ ಹರಡಿಸುವ ಕೋಮುವಾದಿಗಳ ಮತ್ತೊಂದು ಪ್ರಯತ್ನ ಬಯಲಿಗೆ ಬಂದಿದೆ.

ಕೇರಳ ಸರಕಾರ ತ್ರಿಶೂರ್ ಜಿಲ್ಲೆಯ ಗುರುವಾಯೂರಿನ ಪಾರ್ಥಸಾರಥಿ ದೇವಸ್ಥಾನದ ನಿಧಿಯನ್ನು ವಶಪಡಿಸಿಕೊಳ್ಳಲು ಅದನ್ನು ಕೈವಶ ಮಾಡಿಕೊಳ್ಳುತ್ತಿದೆ ಎಂಬ ಸುದ್ದಿಯನ್ನು ಕಳೆದ ಕೆಲವು ವಾರಗಳಿಂದ ಹರಡಿಸಲಾಗಿದೆ.

ಈ ಹಿಂದೆ 2009ರಲ್ಲಿ ಈ ದೇವಸ್ಥಾನದ ಆರೆಸ್ಸೆಸ್ ಹತೋಟಿಯ ಆಡಳಿತ ಸಮಿತಿ ಹಣ ನುಂಗಿ ಹಾಕುತ್ತಿದೆ, ಆದ್ದರಿಂದ ಅದನ್ನು ಮಲಬಾರ್ ದೇವಸ್ಥಾನಗಳ ಮಂಡಳಿ(ಎಂಡಿಬಿ)ಯ ನಿರ್ವಹಣೆಗೆ ಒಳಪಡಿಸಬೇಕು ಎಂದು ಈ ದೇವಸ್ಥಾನಕ್ಕೆ ಬರುವ ಭಕ್ತಜನಗಳು ಆಗ್ರಹಿಸಿ ವಿವಾದ ಕೋರ್ಟಿಗೆ ಹೋಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ಕೋರ್ಟ್ ಎಂಡಿಬಿ ಇದನ್ನು ವಹಿಸಿಕೊಳ್ಳಬೇಕು ಎಂದು ತೀರ್ಪು ಕೊಟ್ಟಿತು.

ಎಂಡಿಬಿ, ಅದರಂತೆ, ಈ ದೇವಸ್ಥಾನದ ಉಸ್ತುವಾರಿಯನ್ನು ವಹಿಸಿಕೊಂಡಿತು. ಆದರೆ ಹಿಂದಿನ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಲಾಕರುಗಳು ಮತ್ತು ಹುಂಡಿಪೆಟ್ಟಿಗೆಯ ಬೀಗದ ಕೈಗಳನ್ನು ಎಂಡಿಬಿ ಗೆ ಕೊಡಲು ನಿರಾಕರಿಸಿದರು, ಬಹುಶಃ ಅವರ ಅವ್ಯವಹಾರಗಳು ಬಯಲಿಗೆ ಬರಬಹುದೆಂಬ ಭೀತಿಯಿಂದ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು. ಆದರೆ ಹೈಕೋರ್ಟ್ ಈ ತಡೆಯಾಜ್ಞೆಯನ್ನು ತೆರವುಗೊಳಿಸಿ ಎಂಡಿಬಿ ಅಧಿಕಾರಿಗಳಿಗೆ ಈ ದೇವಸ್ಥಾನವನ್ನು ವಹಿಸಿಕೊಳ್ಳಲು ಅವಕಾಶ ನೀಡಿತು.

ಇದರ ಪ್ರಕಾರ ಸೆಪ್ಟಂಬರ್ 21ರಂದು ಆಡಳಿತ ವಹಿಸಿಕೊಳ್ಳುವ ಕಲಾಪಗಳನ್ನು ಪೂರೈಸಲು ಎಂಡಿಬಿ ಅಧಿಕಾರಿಗಳು ಬಂದಾಗ ಆರೆಸ್ಸೆಸ್ ಮಂದಿ ಪುಂಡಾಟಿ–ಕೆಗೆ ಇಳಿದರು. ಬಲವಂತದಿಂದ ದೇವಸ್ಥಾನದ ಮುಖ್ಯದ್ವಾರವನ್ನು ಮುಚ್ಚಿಸಿ ದೂರದೂರದಿಂದ ಬಂದ ಭಕ್ತಾದಿಗಳಿಗೂ ಪ್ರವೇಶಿಸಲು ಬಿಡಲಿಲ್ಲ.

ಈ ನಡುವೆ ಬಿಜೆಪಿ ರಾಜ್ಯ ಅಧ್ಯಕ್ಷ ಕುಮ್ಮನಂ ರಾಜಶೇಖರನ್‌ರವರು ಸರಕಾರ ಈ ದೇವಸ್ಥಾನವನ್ನು ಕೈವಶ ಮಾಡಿಕೊಳ್ಳುತ್ತಿದೆ ಎಂದು ಸುಳ್ಳು ಭಾವನೆ ಉಂಟಾಗುವ ಹೇಳಿಕೆ ನೀಡಿದರು. ಜತೆಗೆ ದೇವಸ್ಥಾನದ ಮೇಲೆ ದಾಳಿ ನಡೆಸಲಾಗಿದೆ, ಭಕ್ತಾದಿಗಳು ಪ್ರತಿಭಟಿಸುತ್ತಿದ್ದಾರೆ, ಮಾಧ್ಯಮಗಳು ಇದನ್ನು ಪ್ರಕಟಿಸುತ್ತಿಲ್ಲ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡಿಸಲಾರಂಭಿಸಿದರು.

ಆದರೆ ದೇವಸ್ಥಾನದ ಹಣದ ದುರುಪಯೋಗ ತಡೆಯಲು ಅದನ್ನು ಎಂಡಿಬಿಯ ಅಡಿಗೆ ತಂದು ಅದರ ಲೆಕ್ಕಪತ್ರಗಳ ಆಡಿಟ್ ನಡೆಸುವುದು ಅಗತ್ಯ ಎಂದು ಹಲವರು ಪ್ರತಿಕ್ರಿಯಿಸಿದರು.

ಎಲ್‌ಡಿಎಫ್ ಸರಕಾರದ ದೇವಸ್ಥಾನಗಳ ಮಂತ್ರಿ ಕಡಕಮಪಳ್ಳಿ ಸುರೇಂದ್ರನ್ ಸರಕಾರ ಯಾವುದೇ ಹೊಸ ಕ್ರಮವನ್ನು ಕೈಗೊಂಡಿಲ್ಲ, ನ್ಯಾಯಾಲಯದ ನಿರ್ಣಯದಂತೆ ವರ್ತಿಸುತ್ತಿದೆಯಷ್ಟೇ ಎಂದು ಸ್ಪಷ್ಟೀಕರಣ ನೀಡಿ ಬಿಜೆಪಿಯ ರಾಜ್ಯ ಅಧ್ಯಕ್ಷರ ಮತ್ತು ಆರೆಸ್ಸೆಸ್‌ನ ಸಾಮಾಜಿಕ ಮಾಧ್ಯಮಪಡೆಗಳ ಸುಳ್ಳುಗಳನ್ನು ಬಯಲಿಗೆಳೆದರು. ಕೇವಲ ಹಿಂದೂ ದೇವಸ್ಥಾನಗಳನ್ನು ಮಾತ್ರವಲ್ಲ, ಹಲವು ಚರ್ಚ್‌ಗಳು, ಮಸೀದಿಗಳಲ್ಲೂ ಇಂತಹುದೇ ವಿವಾದಗಳು ಉಂಟಾಗಿದೆ, ಕೆಲವು ಮುಚ್ಚಿವೆ ಎಂಬ ಸಂಗತಿಯನ್ನು ಅವರು ಬಿಜೆಪಿ ರಾಜ್ಯಾಧ್ಯಕ್ಷರ ಗಮನಕ್ಕೆ ತಂದು ಗಲಭೆಕೋರರು ಗಂಭೀರ ಪರಿಸ್ಥಿತಿ ಸೃಷ್ಟಿಸದಂತೆ ಸಲಹೆ ನೀಡಿ ಎಂದರು.

ಆರೆಸ್ಸೆಸ್ ನೇತೃತ್ವದ ದೇವಸ್ಥಾನ ಸಮಿತಿಗಳು ಹಣ ನುಂಗಿ ಹಾಕುವದಲ್ಲದೆ, ದೇವಸ್ಥಾನಗಳನ್ನು ಹಿಂದುತ್ವ ಸಂಘಟನೆಗಳು ಶಸ್ತ್ರ ತರಬೇತಿಗೆ ಮತ್ತು ತಮ್ಮ ಸೈದ್ಧಾಂತಿಕ ಪ್ರಚಾರಕ್ಕೆ ಬಳಸುತ್ತಿವೆ ಎಂಬ ಆಪಾದನೆಗಳೂ ಇವೆ.

(ನ್ಯೂಸ್‌ಕ್ಲಿಕ್.ಇನ್, ಸೆಪ್ಟಂಬರ್ 23).


ಪ.ಬಂಗಾಲ: ಅಕ್ಟೋಬರ್ ಅಂತ್ಯದಿಂದ ಜನ–ವಿರೋಧಿ ಧೋರಣೆಗಳ ವಿರುದ್ಧ ಎಡ ಸಾಮೂಹಿಕ ಸಂಘಟನೆಗಳ ಆಂದೋಲನ

'ಬಂಗಾಲ ಸಾಮೂಹಿಕ ಸಂಘಟನೆಗಳ ವೇದಿಕೆ'(ಬಿಪಿಎಂಒ) ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನ–ವಿರೋಧಿ ಧೋರಣೆಗಳ ವಿರುದ್ಧ ರಾಜ್ಯಾದ್ಯಂತ ಅಕ್ಟೋಬರ್ ಅಂತ್ಯದಿಂದ ಸಾಮೂಹಿಕ ಆಂದೋಲನ ನಡೆಸಲು ನಿರ್ಧರಿಸಿದೆ.

ಸಣ್ಣ ರ್‍ಯಾಲಿಗಳಲ್ಲದೆ, 11 ದೊಡ್ಡ ರ್‍ಯಾಲಿಗಳನ್ನು ನಡೆಸಲು ಎಡಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳು ನಿರ್ಧರಿಸಿರುವುದಾಗಿ ವೇದಿಕೆಯ ಸಂಯೋಜಕರಾದ ಶ್ಯಾಮಲ್ ಚಕ್ರವರ್ತಿ ಹೇಳಿದ್ದಾರೆ.

ಬಿಪಿಎಂಒ ಕಾರ್ಮಿಕರು, ರೈತರು, ಅಧ್ಯಾಪಕರು ಮತ್ತಿತರ ವಿಭಾಗಗಳ ಸಂಘಟನೆಗಳು ಸೇರಿ ರಚಿಸಿರುವ ಒಂದು ವೇದಿಕೆ.

ಸೆಪ್ಟಂಬರ್ 21ರಂದು ಬಿಹಾರದ ರಾಜಧಾನಿ ಪಟ್ನಾದಲ್ಲಿ ಒಂದು ಬೃಹತ್ 'ಜನಾಕ್ರೋಶ' ರ್‍ಯಾಲಿ ನಡೆಯಿತು. ಅಂದು ರಾಜ್ಯ ಮತ್ತು ಕೇಂದ್ರ ಸರಕಾರಗಳ ಧೋರಣೆಗಳ ವಿರುದ್ಧ ರಾಜ್ಯದ ನಾಲ್ಕು ಮೂಲೆಗಳಿಂದ ಹೊರಟ ಜಾಥಾಗಳು ಪಾಟ್ನಾದಲ್ಲಿ ಬಂದು ಸೇರಿದ್ದವು. ಪ್ರವಾಹಪೀಡಿತರಿಗೆ ಸರಿಯಾದ ಪರಿಹಾರ, ಪ್ರವಾಹಗಳನ್ನು ತಡೆಯಲು ಶಾಶ್ವತ ರಚನೆಗಳ ನಿರ್ಮಾಣ, ಸ್ವಾಮಿನಾಥನ್ ಆಯೋಗದ ಶಿಫಾರಸಿನ ಜಾರಿ, ಕೃಷಿ ಮತ್ತು ಆಹಾರ ಭದ್ರತೆಯಲ್ಲಿ ಆಧಾರ್ ಕಡ್ಡಾಯಕ್ಕೆ ವಿರೋಧ, ರೇಗಾದಲ್ಲಿ ಕೂಲಿ ಸಂದಾಯ, ಗರಿಷ್ಟ ಕೆಲಸ, 3000ರೂ. ಸಾಮಾಜಿಕ ಭದ್ರತಾ ಪೆನ್ಶನ್ ಮತ್ತು ಕೋಮುವಾದಿ, ವಿಭಜನಕಾರಿ ರಾಜಕೀಯಕ್ಕೆ ಕೊನೆ ಆಗ್ರಹಿಸಿ ಈ ಜಾಥಾಗಳು, ರ್‍ಯಾಲಿಗಳು ನಡೆದವು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಪಿಬಿ ಸದಸ್ಯರಾದ ಸುಭಾಷಿಣಿ ಅಲಿ ಮತ್ತು ಹನ್ನನ್ ಮೊಲ್ಲ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.



ಕಳೆದ ವಾರ ತ್ರಿಪುರಾದಲ್ಲಿ ಬಿಜೆಪಿ ಬೆಂಬಲಿತ ಐಪಿಎಫ್‌ಟಿ ಪ್ರತ್ಯೇಕತಾವಾದಿಗಳು ಹತ್ಯೆ ಮಾಡಿದ ಪ್ರಗತಿಶೀಲ ಪತ್ರಕರ್ತ ಶಂತನು ಭೌಮಿಕ್ ಅವರ ದುಃಖತಪ್ತ ಕುಟುಂಬದವರನ್ನು ರಾಜ್ಯಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರ ಮನೆಗೆ ಹೋಗಿ ಸಂತೈಸಿದರು.




ಉಗ್ರ ಬಲಪಂಥಿಯರ ಪಾರ್ಲಿಮೆಂಟ್ ಪ್ರವೇಶ

ಜರ್ಮನ್ ಪಾರ್ಲಿಮೆಂಟ್ ಅತಂತ್ರ: ಮೆರ್ಕೆಲ್‌ಗೆ ಗೆಲುವಿನಲ್ಲೂ ಸಂಕಟ

ಜಗದ ಸುತ್ತ

ಶರತ್‌ಚಂದ್ರ


ಮೆರ್ಕೆಲ್

ಈ ಚುನಾವಣೆಗಳು ಜರ್ಮನಿಯಲ್ಲಿ ಮಾತ್ರವಲ್ಲ, ಯುರೋಪಿನ ತುಂಬಾ ನಡುಕ ತಂದಿವೆ. ಬ್ರಿಟನ್, ಹಾಲಂಡ್‌ಗಳಲ್ಲಿ ನವ–ನಾಜಿ ಫ್ಯಾಸಿಸ್ಟ್ ರೀತಿಯ ಉಗ್ರ ಬಲಪಂಥೀಯರು ಹಿನ್ನಡೆ ಅನುಭವಿಸಿದ ಮೇಲೆ ಮತ್ತು ಫ್ರಾನ್ಸಿನಲ್ಲಿ ಅವರು ಮುನ್ನಡೆ ಸಾಧಿಸಿದರೂ ಅವರನ್ನು ಅಧಿಕಾರದಿಂದ ಹೊರಗಿಡುವುದು ಸಾಧ್ಯವಾದಾಗ ನಿರಾಳವಾಗಿದ್ದ ಜನ ಪುನಃ ಆತಂಕಿತರಾಗಿದ್ದಾರೆ. ಇದು ಒಂದು ಆತಂಕಕಾರಿ ಬೆಳವಣಿಗೆ.

ಜರ್ಮನ್ ಪಾರ್ಲಿಮೆಂಟ್ ಚುನಾವಣೆಗಳ ಫಲಿತಾಂಶ ಬಂದಿದ್ದು ಒಂದು ರೀತಿಯ ಅತಂತ್ರ ಫಲಿತಾಂಶ ಬಂದಿದೆ. ಈಗಿನ ಛಾನ್ಸಲರ್(ಪ್ರಧಾನಿ) ಎಂಜೆಲಾ ಮೆರ್ಕೆಲ್ ಅವರ ಪಕ್ಷ ಸಿಡಿಯು/ಸಿಎಸ್.ಯು ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ್ದರೂ ಸರಕಾರ ನಡೆಸಲು 2–3 ಸಣ್ಣ ಪಕ್ಷಗಳ ಬೆಂಬಲಕ್ಕೆ ಪರದಾಡುವ ಸ್ಥಿತಿ ಬಂದಿದೆ. ಎರಡನೇ ಮಹಾಯುದ್ಧದ ನಂತರ ಮೊದಲ ಬಾರಿಗೆ ಉಗ್ರ ಬಲಪಂಥೀಯ (ಹೆಚ್ಚು ಕಡಿಮೆ ನಾಜಿ ನೀತಿಗಳನ್ನು ಹೊಂದಿರುವ) ಪಕ್ಷ ಎ.ಎಫ್.ಡಿ (ಜರ್ಮನಿಗಾಗಿ ಒಕ್ಕೂಟ) ಹೆಚ್ಚಿನ ಮತ ಗಳಿಸಿ ಪಾರ್ಲಿಮೆಂಟ್ ಪ್ರವೇಶಿಸಿದೆ. ಮೂರನೇ ಅತಿ ದೊಡ್ಡ ರಾಜಕೀಯ ಶಕ್ತಿಯಾಗಿ ಅದು ಹೊಮ್ಮಿದೆ.

ಸಿಡಿಯು/ಸಿಎಸ್.ಯು ಮತ್ತು ಎಸ್.ಪಿ.ಡಿ. (ಸೋಶಲಿಸ್ಟ್) – ಹಿಂದಿನ ಆಳುವ ಕೂಟದ ಎರಡೂ ಪಕ್ಷಗಳು ಮತಗಳಿಕೆಯಲ್ಲಿ ಭಾರಿ ಕುಸಿತ ಕಂಡಿವೆ. ಸಿಡಿಯು/ಸಿಎಸ್.ಯು ಶೇ. 8.5 ಮತ ಗಳಿಕೆ ಕುಸಿತ ಕಂಡರೆ, ಎಸ್.ಪಿ.ಡಿ. (ಸೋಶಲಿಸ್ಟ್) ಶೇ. 5.2 ರಷ್ಟು ಮತ ಕಳೆದುಕೊಂಡಿದೆ. ಎಡ ಮತ್ತು ಗ್ರೀನ್ ಪಕ್ಷಗಳು ಹೆಚ್ಚು ಕಡಿಮೆ ಯಥಾಸ್ಥಿತಿ ಕಾಪಾಡಿಕೊಂಡಿದ್ದು, ಸ್ವಲ್ಪ ಮತಗಳಿಕೆ (ಶೇ. 0.5–0.6) ಏರಿಕೆ ಸಾಧಿಸಿವೆ. ಎ.ಎಫ್.ಡಿ ಶೇ. 7.9ರಷ್ಟು ಮತಗಳಿಕೆಯಲ್ಲಿ ಭಾರೀ ಏರಿಕೆ ಕಂಡಿದೆ. ಅದೇ ರೀತಿ ಬಲಪಂಥೀಯ ಎಫ್.ಡಿ.ಪಿ.(ಫ್ರೀ ಡೆಮೊಕ್ರಾಟ್ಸ್) ಶೇ. 5.9ರಷ್ಟು ಮತಗಳಿಕೆ ಹೆಚ್ಚಿಸಿಕೊಂಡಿದೆ. ಇವೆರಡೂ ಪಕ್ಷಗಳು 2013ರ ಚುನಾವಣೆಯಲ್ಲಿ ಶೆ. 5 ಕ್ಕಿಂತ ಕಡಿಮೆ ಮತಗಳಿಸಿ, ಪಾರ್ಲಿಮೆಂಟಿನಲ್ಲಿ ಯಾವುದೇ ಪ್ರಾತಿನಿಧ್ಯ ಪಡೆದಿರಲಿಲ್ಲ. ಎ.ಎಫ್.ಡಿ (ಮತ್ತು ಯಾವುದೇ ಉಗ್ರ ಬಲಪಂಥೀಯ ಪಕ್ಷ) ಮೊದಲ ಬಾರಿಗೆ ಶೇ. 5 ಮಿತಿ ದಾಟಿದೆ. ಫ್ರೀ ಡೆಮೊಕ್ರಾಟ್ಸ್ ಹಿಂದೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಪಡೆದಿದ್ದು ಕಳೆದ ಚುನಾವಣೆಯಲ್ಲಿ ಮಾತ್ರ ಅವರ ಬೆಂಬಲ ಕುಸಿದಿತ್ತು. ಜರ್ಮನಿಯ ಆರು ಪ್ರಮುಖ ಪಕ್ಷಗಳ ಮತಗಳಿಕೆ, ಸೀಟುಗಳಿಕೆ, ಕಳೆದ ಚುನಾವಣೆಗೆ ಹೋಲಿಸಿದರೆ ಏರಿಕೆ/ಇಳಿಕೆಗಳನ್ನು ಕೋಷ್ಟಕದಲ್ಲಿ ಕೊಟ್ಟಿದೆ.

ಜರ್ಮನಿಯ ಚುನಾವಣಾ ಪದ್ಧತಿ ಮತ್ತು ಪಾರ್ಲಿಮೆಂಟಿನಲ್ಲಿ ಪಕ್ಷಗಳ ಸೀಟು ಲೆಕ್ಕ ಹಾಕುವ ವಿಧಾನ ಸಾಕಷ್ಟು ಸಂಕೀರ್ಣವಾಗಿದೆ. ಪ್ರತಿಯೊಬ್ಬ ಮತದಾರನಿಗೆ ಎರಡು ಮತಗಳು ಇರುತ್ತವೆ ಒಂದು ನಮ್ಮ ರೀತಿಯ ನಿಗದಿತ ಮತ ಕ್ಷೇತ್ರದಲ್ಲಿ ಪಕ್ಷ ಅಥವಾ ಪಕ್ಷೇತರ ಅಭ್ಯರ್ಥಿಗೆ ಕೊಡುವ ಮತ ಮತ್ತು ಇನ್ನೊಂದು ಪಕ್ಷಕ್ಕೆ ನೀಡುವ ಮತ. ಮೊದಲನೆಯ ಮತದಿಂದ ಅತ್ಯಂತ ಹೆಚ್ಚು ಮತ ಪಡೆದ 299 ಅಭ್ಯರ್ಥಿಗಳು ನೇರವಾಗಿ ಆಯ್ಕೆಯಾಗುತ್ತಾರೆ. 2ಕ್ಕಿಂತ ಹೆಚ್ಚು ನೇರ ಸೀಟುಗಳಲ್ಲಿ ಗೆಲ್ಲದ ಅಥವಾ ಶೇ.5 ಕ್ಕಿಂತ ಕಡಿಮೆ ಮತಗಳಿಕೆ ಮಾಢಿದ ಪಕ್ಷಗಳಿಗೆ ಪ್ರಾತಿನಿಧ್ಯವಿಲ್ಲ. ಉಳಿದ ಸೀಟುಗಳನ್ನು ಪಕ್ಷ ಒಟ್ಟು ಪಡೆದ ಮತಪ್ರಮಾಣ, ರಾಜ್ಯಗಳಲ್ಲಿ ಪಡೆದ ಮತಪ್ರಮಾಣ, ರಾಜ್ಯಗಳ ಸೀಟು ಪ್ರಮಾಣ ಇತ್ಯಾದಿಗಳನ್ನು ಗಮನಕ್ಕೆ ತೆಗೆದುಕೊಂಡು ಒಟ್ಟು ಮತಗಳಿಕೆಯ ಪ್ರಮಾಣದಲ್ಲಿ ಸೀಟು ಪ್ರಾತಿನಿಧ್ಯ ಇರುವಂತೆ ಹಂಚಲಾಗುತ್ತದೆ. ಈ ವಿಧಾನ ದೇಶದ ಕೆಲವು ರಾಜ್ಯಗಳಲ್ಲಿ ಪ್ರಬಲವಾಗಿರುವ ಆದರೆ ಒಟ್ಟಾರೆಯಾಗಿ ದೇಶದಲ್ಲಿ ದುರ್ಬಲವಾಗಿರುವ ಸಣ್ಣ ಪಕ್ಷಗಳಿಗೆ ನ್ಯಾಯ ಒದಗಿಸಲು ಪ್ರಯತ್ನಿಸುತ್ತದೆ. ಈ ವಿಧಾನದಲ್ಲಿ ಒಟ್ಟು ಪಾರ್ಲಿಮೆಂಟಿನ ಸೀಟುಗಳ ಸಂಖ್ಯೆ ಜಾಸ್ತಿಯಾಗಬಹುದು! ಸಾಮಾನ್ಯವಾಗಿ 598 ಇರುವ ಪಾರ್ಲಿಮೆಂಟಿನ ಒಟ್ಟು ಸೀಟುಗಳು ಕಳೆದ ಬಾರಿ 631 ಮತ್ತು ಈ ಬಾರಿ 703 ಇವೆ!

ಮೆರ್ಕೆಲ್ ಅವರ ನಾಯಕತ್ವದ ನಡು–ಬಲಪಂಥೀಯ ಸಿಡಿಯು/ಸಿ.ಎಸ್.ಯು ಅತ್ಯಂತ ಹೆಚ್ಚು ಮತ ಪಡೆದಿದ್ದರೂ, ಮತ ಕುಸಿತದ ಮತ್ತು ಸರಕಾರ ರಚಿಸಲು ಪರದಾಟಗಳಿಂದಾಗಿ ಮೆರ್ಕೆಲ್ ಅವರಿಗೆ 4ನೇ ಬಾರಿ ಗೆದ್ದರೂ, ಗೆದ್ದೂ ಸೋತಂತಹ ಸ್ಥಿತಿ ಬಂದಿದೆ. ಕಳೆದ ಬಾರಿಯೂ ಸುಮಾರು ಇಂತಹುದೇ ಅತಂತ್ರ ಪರಿಸ್ಥಿತಿ ಬಂದಿದ್ದರೂ, ಸೋಶಲಿಸ್ಟ್ ಪಕ್ಷದ ಜತೆ ಮಹಾ ಮೈತ್ರಿ ಸಾಧಿಸಿ ಸರಕಾರ ರಚನೆ ಸಾಧ್ಯವಾಗಿತ್ತು. ಈ ಬಾರಿಯೂ ಆ ಆಯ್ಕೆ (ಈ ಎರಡು ಪಕ್ಷಗಳ ಸೀಟುಗಳ ಕೂಟಕ್ಕೆ ನಿಚ್ಚಳ ಬಹುಮತ ಇದೆ) ಇದ್ದರೂ, ಸೋಶಲಿಸ್ಟ್ ಪಕ್ಷ ತಾನು ಸಿಡಿಯು/ಸಿ.ಎಸ್.ಯು ಜತೆ ಸರಕಾರಕ್ಕೆ ಸೇರುವುದಿಲ್ಲ. ಸರಕಾರ ರಚಿಸುವ ಪ್ರಯತ್ನವೂ ಮಾಡುವುದಿಲ್ಲ. ವಿರೋಧ ಪಕ್ಷವಾಗಿರಲು ನಿರ್ಧರಿಸಿದೆ. ಕಳೆದ ಬಾರಿಯ ಮಹಾಮೈತ್ರಿ ಸೋಶಲಿಸ್ಟ್ ಪಕ್ಷದ ನೆಲೆಗೆ ಭಾರಿ ಹಾನಿ ಉಂಟು ಮಾಡಿದೆ ಎಂದು ಅದು ನಿರ್ಧರಿಸಿದೆ.

ಎ.ಎಫ್.ಡಿ. ಉಗ್ರ ಬಲಪಂಥೀಯ ಪಕ್ಷ ಎಲ್ಲರಿಗೂ ಅಪಥ್ಯ. ಆದ್ದರಿಂದ ಸಿಡಿಯು/ಸಿ.ಎಸ್.ಯು ಉಳಿದ ಒಂದೇ ದಾರಿ. ಗ್ರೀನ್ ಮತ್ತು ಎಫ್.ಡಿ.ಪಿ.(ಫ್ರೀ ಡೆಮೊಕ್ರಾಟ್ಸ್) ಗಳ ಜತೆ ಮೈತ್ರಿ ಕೂಟ ರಚನೆ. ಗ್ರೀನ್ ನಡು–ಎಡ ಪಂಥೀಯ ಮತ್ತು ಎಫ್.ಡಿ.ಪಿ ಬಲಪಂಥೀಯ ಪಕ್ಷವಾಗಿದ್ದು ಹಲವು ಸಾಮಾಜಿಕ ಆರ್ಥಿಕ ರಾಜಕೀಯ ವಿಷಯಗಳ ಬಗ್ಗೆ ಅವುಗಳ ನಡುವೆ ತೀವ್ರ ಮತಬೇಧಗಳಿವೆ. ಎರಡೂ ಪಕ್ಷಗಳ ಒಳಗೆ ಸಹ ಇನ್ನೊಂದು ಪಕ್ಷ ಇರುವ ಮೈತ್ರಿಕೂಟ ಸೇರಬೇಕೆ ಎಂಬುದರ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಇನ್ನೊಂದು ಸಾಧ್ಯತೆ ಇರುವುದು ಸೋಶಲಿಸ್ಟ್, ಎಡ ಪಕ್ಷ, ಗ್ರೀನ್, ಫ್ರೀ ಡೆಮೊಕ್ರಾಟ್ ಗಳ ಮಹಾಮೈತ್ರಿ. ಎಡ ಪಕ್ಷ ಈ ಮಹಾಮೈತ್ರಿಯನ್ನು ನಿರಾಕರಿಸಿದೆ. ಇದರಿಂದಾಗಿ ಹೊಸ ಸರಕಾರ ರಚನೆ ಬಹಳ ವಿಳಂಬವಾಗಬಹುದು ಎಂದು ಹೇಳಲಾಗಿದೆ.

ಚುನಾವಣಾ ಫಲಿತಾಂಶಗಳು ಏನು ಹೇಳುತ್ತವೆ?

ಈ ಚುನಾವಣಾ ಫಲಿತಾಂಶಗಳು ಏನು ಹೇಳುತ್ತವೆ? ಜರ್ಮನಿಯ ಮುಖ್ಯ ಆಡಳಿತ ಪಕ್ಷಗಳಾಗಿದ್ದ ನಡುಪಂಥೀಯ ಸಿಡಿಯು/ಸಿಎಸ್.ಯು ಮತ್ತು ಸೋಶಲಿಸ್ಟ್ ಪಕ್ಷಗಳು ಸತತವಾಗಿ ತಮ್ಮ ಬೆಂಬಲ ಕಳೆದುಕೊಳ್ಳುತ್ತಿವೆ. ಯುರೋಪಿನ ಪ್ರಬಲ ಆರ್ಥಿಕವೂ ಆಗಿದ್ದ, ಯುರೋ ಒಕ್ಕೂಟದಲ್ಲಿ ಯಜಮಾನಿಕೆಯನ್ನು ಹೊಂದಿದ್ದ, ಹಿಂದಿನ ಪ್ರಬಲ ಸಂಘಟಿತ ಕಾರ್ಮಿಕ ವರ್ಗದ ಶಕ್ತಿಯಿಂದ ಕಲ್ಯಾಣ ಪ್ರಭುತ್ವ (ವೆಲ್ಫೇರ್ ಸ್ಟೇಟ್) ಜಾರಿಯಲ್ಲಿ ಗರಿಷ್ಟ ಮಟ್ಟ ಮುಟ್ಟಿದ್ದರ ರಾಜಕೀಯ ಪರಿಣಾಮವಾಗಿ ಈ ನಡುಪಂಥೀಯ ಪಕ್ಷಗಳು ಆಡಳಿತ ನಡೆಸಿದ್ದವು. ನವ–ಉದಾರವಾದದ ದಾಳಿಯಿಂದ ಇವೆಲ್ಲವೂ ಶಿಥಿಲವಾಗತೊಡಗಿವೆ. ಯುರೋ ಕೂಟದ ಅತ್ಯಂತ ಹೆಚ್ಚಿನ ಪ್ರಯೋಜನೆ ಪಡೆದದ್ದು ಜರ್ಮನಿ. ಯು–ರೋ ಕೂಟದ ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದೆ. ಅದರಿಂದಾಗಿ ಅದರ ಯಜಮಾನಿಕೆಗೂ ಕುತ್ತು ಬರುತ್ತಿದೆ. ಯುರೋ ಕೂಟದ ನೆಪದಲ್ಲಿ ಸಂಘಟಿತ ಕಾರ್ಮಿಕ ವರ್ಗದ ಒತ್ತಡದಿಂದ ಕಟ್ಟಿದ ಕಲ್ಯಾಣ ಯೋಜನೆಗಳನ್ನು ಕಿತ್ತು ಹಾಕಲಾಗುತ್ತಿದೆ. ಯುರೋ ಕೂಟದ ನವ–ಉದಾರವಾದಿ ದಾಳಿಯ ಅಧಿಕೃತ ಪ್ರತಿನಿಧಿಗಳು ಈ ಎರಡೂ ಪಕ್ಷಗಳು ಎಂದು ಜನ ಭಾವಿಸುತ್ತಾರೆ. ಅದು ನೂರಕ್ಕೆ ನೂರು ನಿಜ ಕೂಡಾ. ಆದ್ದರಿಂದ ನವ–ಉದಾರವಾದಿ ದಾಳಿಯ ವಿರುದ್ಧ ಅತೃಪ್ತಿ ಅವರ ವಿರುದ್ಧ ತಿರುಗಿದೆ. ಆ ವರೆಗಿನ "ನೀನು ಸತ್ತಂತೆ ಮಾಡು, ನಾನು ಅತ್ತಂತೆ ಮಾಡುತ್ತೇನೆ" ಎಂಬ ಸೋಗು ಬಿಟ್ಟು ಕಳೆದ ಬಾರಿ ಅವರು ಜಂಟಿ ಸರಕಾರ ಮಾಡಿದ್ದರಿಂದ ಪರಿಣಾಮ ಇನ್ನಷ್ಟು ಜೋರಾಗಿದೆ. ಸೋಶಲಿಸ್ಟ್ ಪಕ್ಷ ಎರಡನೇ ಮಹಾಯುದ್ಧದ ನಂತರ ಅತ್ಯಂತ ಕಡಿಮೆ ಮತಗಳಿಕೆ ಮಾಡಿದೆ. ಒಂದು ನಡು–ಎಡಪಂಥೀಯ ಪಕ್ಷವಾಗಿ ದುಡಿಯುವ ಜನರ ಹಿತಾಸಕ್ತಿಗಳ ಪರವಾಗಿ ನಿಲ್ಲದೆ ಇರುವುದರಿಂದ ಅದು ಕಳೆದ 3 ಚುನಾವಣೆಗಳಲ್ಲಿ ಸತತ ಕುಸಿತ ಎದುರಿಸುತ್ತಿದೆ. ನವ–ಉದಾರವಾದಿ ದಾಳಿಯ ವಿರುದ್ಧ ಸಾಕಷ್ಟು ದೃಢ ನಿಲುವು ತೆ–ಗೆದುಕೊಂಡ ಎಡ ಮತ್ತು ಗ್ರೀನ್ ಪಕ್ಷಗಳತ್ತ ಈ ಅತೃಪ್ತ ಮತದಾರರರು ಹೊರಳಿಲ್ಲ ಎಂಬುದನ್ನು ಈ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಜನ ನಂಬಬಹುದಾದ ಗಟ್ಟಿ ನವ–ಉದಾರವಾದಿ ವಿರೋಧಿ ಪರ್ಯಾಯ ಕಟ್ಟುವವರೆಗೆ ಅವರು ಗಮನಾರ್ಹ ಮುನ್ನಡೆ ಸಾಧಿಸುವುದು ಸಾಧ್ಯವಿಲ್ಲ.




ಮೆರ್ಕೆಲ್ ದೊಡ್ಡ ಸಂಖ್ಯೆಯಲ್ಲಿ ಸಿರಿಯಾ ಮುಂತಾದ ಮುಸ್ಲಿಂ ನಿರಾಶ್ರಿತರನ್ನು ದೇಶದೊಳಗೆ ಬಿಟ್ಟುಕೊಂಡದ್ದು ಎರಡೂ ಆಳುವ ಪಕ್ಷಗಳಿಗೆ ಮುಳುವಾಯಿತು. ಇಲ್ಲದಿದ್ದರೆ ಏನೂ ಸಮಸ್ಯೆಯಿರಲಿಲ್ಲ ಎಂದು ಬೂರ್ಜ್ವಾ ಮಾಧ್ಯಮಗಳು ಬಿಂಬಿಸುತ್ತಿವೆ. ಆದರೆ ಇದು ನಿಜವಲ್ಲ. ನವ–ಉದಾರವಾದಿ ದಾಳಿಯ ಫಲವಾಗಿ ಉಂಟಾಗಿರುವ ಆಕ್ರೋಶ ಮತ್ತು ಅಭದ್ರತೆಯ ಭಾವನೆ ಕೆಲವು ಜನವಿಭಾಗಗಳಲ್ಲಿ ಮುಸ್ಲಿಂ ನಿರಾಶ್ರಿತರ ವಿರೋಧಿ ಧೋರಣೆಗೆ ಅವಕಾಶ ಮಾಡಿಕೊಟ್ಟಿದೆ. ಅದನ್ನು ಉಗ್ರ ಬಲಪಂಥೀಯ ಎ.ಎಫ್.ಡಿ. ಬಳಸಿ ತನ್ನ ಬಲ ಹೆಚ್ಚಿಸಿಕೊಂಡಿದೆ ಎಂಬುದು ನಿಜ. ಆದರೆ ಇದು ಸಾರ್ವತ್ರಿಕ ಮೂಲ ಕಾರಣವಲ್ಲ. ಆಗಿದ್ದರೆ ನಿರಾಶ್ರಿತರ ಪರ ವಾದಿಸುತ್ತಿದ್ದ ಗ್ರೀನ್, ಎಡ ಪಕ್ಷಗಳ ಬೆಂಬಲ ಸಹ ಕುಸಿಯಬೇಕಾಗಿತ್ತು. ಮಾತ್ರವಲ್ಲ, ಈಗಾಗಲೇ ಪ್ರಾದೇಶಿಕ ಅಸಮಾನತೆಯಿಂದ ನರಳುತ್ತಿರುವ ನವ–ಉದಾರವಾದಿ ದಾಳಿಯ ದುಷ್ಪರಿಣಾಮವನ್ನು ಹೆಚ್ಚಾಗಿ ಎದುರಿಸಿರುವ ಪೂರ್ವ ಜರ್ಮನಿಯ ಪ್ರದೇಶಗಳಲ್ಲಿ ಗಮನಾರ್ಹವಾಗಿ ಎ.ಎಫ್.ಡಿ. ಬೆಂಬಲ ಹೆಚ್ಚಿದೆ. ಈ ಪ್ರದೇಶಗಳಲ್ಲಿ ಸಿಡಿಯು/ಸಿಎಸ್.ಯು ಮತ್ತು ಸೋಶಲಿಸ್ಟ್ ಪಕ್ಷಗಳು ಹೆಚ್ಚಿನ ಕುಸಿತ ಕಂಡಿವೆ. ಹಾಗೆನೇ ಈ ಪಕ್ಷಗಳ ಕುಸಿತದ ಒಂದು ಭಾಗ ಮಾತ್ರ ಎ.ಎಫ್.ಡಿ. ಗೆ ಹೋಗಿದೆ. ಈ ಕಾರಣಗಳಿಂದ ನವ–ಉದಾರವಾದಿ ದಾಳಿಯ ದುಷ್ಪರಿಣಾಮ ಮೂಲಕಾರಣ. ನಿರಾಶ್ರಿತರ ಬಗ್ಗೆ ಅಭದ್ರತೆ ಭಾವನೆಯ ಸಮಸ್ಯೆ ಅದರಿಂದ ಉದ್ಭವಿಸಿದ್ದು ಸ್ಪಷ್ಟವಾಗುತ್ತದೆ.

ಭಾರಿ ಮುನ್ನಡೆ ಸಾಧಿಸಿದ ಎ.ಎಫ್.ಡಿ.ಯಲ್ಲೂ ಬಿಕ್ಕಟ್ಟು ತೋರಿ ಬಂದಿದೆ. ಪಕ್ಷದ ನಾಯಕಿ ಸೇರಿದಂತೆ ಒಂದು ವಿಭಾಗ ಎಲ್ಲಾ ಪಕ್ಷಗಳಿಗೆ ಬಹಳಷ್ಟು ಜನವಿಭಾಗಗಳಿಗೆ ಅಸ್ಪೃಶ್ಯವಾಗುವ ಅಪಥ್ಯವಾಗುವ ಉಗ್ರ ನಾಜೀ ರೀತಿಯ ನೀತಿಗಳು ಬೇಡ ಎಂದು ವಾದಿಸುತ್ತಿದೆ. ಇದು ಇನ್ನೂ ಹೆಚ್ಚಿನ ಮುನ್ನಡೆಗೆ ತಡೆಯಾಗುವುದು ಎಂದು ಅವರು ವಾದಿಸುತ್ತಿದ್ದಾರೆ. ಚುನಾವಣಾ ಫಲಿತಾಂಶ ನಾಜಿವಾದದಂತಹ ಇನ್ನಷ್ಟು ಉಗ್ರಬಲಪಂಥೀಯ ನೀತಿಗಳಿಗೆ ಜನರ ಒಲವು ಇದೆ ಎನ್ನುತ್ತದೆ ಎಂದು ಇನ್ನೊಂದು ವಿಭಾಗ ಹೇಳುತ್ತಿದೆ. ಬಿಕ್ಕಟ್ಟು ಆಗಲೇ ಮೊದಲ ವಿಭಾಗದ ನಾಯಕಿ ಪಕ್ಷ ಬಿಟ್ಟು ಸ್ವತಂತ್ರಳಾಗಿ ಪಾರ್ಲಿಮೆಂಟಿನಲ್ಲಿ ಕುಳಿತುಕೊಳ್ಳುವ ಘೋಷಣೆ ಮಟ್ಟಕ್ಕೆ ಹೋಗಿದೆ.

ಈ ಚುನಾವಣೆ ಫಲಿತಾಂಶಗಳು ಜರ್ಮನಿಯಲ್ಲಿ ಮಾತ್ರವಲ್ಲ, ಯುರೋಪಿನ ತುಂಬಾ ನಡುಕ ತಂದಿವೆ. ಬ್ರಿಟನ್, ಹಾಲಂಡ್‌ಗಳಲ್ಲಿ ನವ–ನಾಜಿ ಫ್ಯಾಸಿಸ್ಟ್ ರೀತಿಯ ಉಗ್ರ ಬಲಪಂಥೀಯರು ಹಿನ್ನಡೆ ಅನುಭವಿಸಿದ ಮೇಲೆ ಮತ್ತು ಫ್ರಾನ್ಸಿನಲ್ಲಿ ಅವರು ಮುನ್ನಡೆ ಸಾಧಿಸಿದರೂ ಅವರನ್ನು ಅಧಿಕಾರದಿಂದ ಹೊರಗಿಡುವುದು ಸಾಧ್ಯವಾದಾಗ ನಿರಾಳವಾಗಿದ್ದ ಜನ ಪುನಃ ಆತಂಕಿತರಾಗಿದ್ದಾರೆ. ಇದು ಒಂದು ಆತಂಕಕಾರಿ ಬೆಳವಣಿಗೆ. ಜರ್ಮನಿಯಲ್ಲಿ ಫ್ಯಾಸಿಸ್ಟ್–ವಿರೋಧಿ ಚಳುವಳಿ ದೇಶದ ತುಂಬಾ ಪ್ರತಿಭಟನೆಯನ್ನು ನಡೆಸಿದೆ.

ಮಾತೆಂದರೆ ಇದು



"ವ್ಯಕ್ತಿಯ ಜೀವನದಲ್ಲಿ ಒದಗಿ ಬರುವ ಕೆಲವು ಕ್ಷಣಗಳು ವಿಶಿಷ್ಟವಾದುವು. ಗಡಿಯ ರೇಖೆಯನ್ನು ತಲಪಿದಾಗ ಅದು ಆ ಪಯಣದ ಕೊನೆಯ ಕ್ಷಣವೆಂತ ಅನುಭವವಾಗುತ್ತಿದ್ದಂತೆ ಮರುಘಳಿಗೆ ಅದು ಅಲ್ಲಿಂದ ಮುಂದೆ ಹೊಸ ದಿಗಂತವೊಂದನ್ನು ತೆರಿದಿಟ್ಟಂತೆ ಭಾಸವಾಗುವಂತೆ..ಅಂಥ ಪರಿವರ್ತನಾ ಕ್ಷಣದಲ್ಲಿ ನಾವು ನಡೆದು ಬಂದ ದಾರಿಯ ಪುನರಾವಲೋಕಿಸುವ ಹಂಬಲಕ್ಕೂ ಒತ್ತಡಕ್ಕೂ ಸಿಕ್ಕಿಕೊಳ್ಳುತ್ತೇವೆ. ಈ ಹಿಂದೆ ಆದುದನ್ನೆಲ್ಲ ತೀವ್ರ ವಿಚಿಕಿತ್ಸಕ ದೃಷ್ಟಿಯಿಂದ ಪನರ್ವಿಮರ್ಶೆಗೆ ಒಳಪಡಿಸಿಕೊಳ್ಳುತ್ತೇವೆ.

ತನ್ಮೂಲಕ ನಮ್ಮ ಸದ್ಯದ ವಾಸ್ತವತೆಯ ಸ್ಪಷ್ಟಕಲ್ಪನೆಯೂ ದೊರಕುತ್ತದೆ. ನಮ್ಮಷ್ಟಕ್ಕೆ ಹಾಡೊಂದನ್ನು ಗುನುಗಬಹುದು. ಕಾರಣ ಅದು ಗೂಡಿನಿಂದ ಚಿಟ್ಟೆ ಒಡೆದುಕೊಂಡು ಹೊರಬರುವ ಸಂಭ್ರಮದ ಕ್ಷಣದಂತೆ. ಅದು ಒಂದು ಹಂತದಲ್ಲಿ ಹಂಸಗೀತೆಯ ಘಳಿಗೆಯೂ ಹೌದು..ಹಾಗೂ ಹೊಸದೊಂದು ಕವಿತ್ವ ಮೊಗ್ಗೊಡೆದು ಹೂವರಳುವ ಕ್ಷಣವೂ ಹೌದು.

ಕಾಮನಬಿಲ್ಲಿನ ಸಪ್ತ ವರ್ಣಗಳೂ ಒಂದರೊಳಗೊಂದು ಹದವರಿತು ಹೊಂದಿ ಹಿತಮಿತವಾಗಿ ಸ್ಥಾಯೀಸ್ಥಿತಿ ತಲುಪುವ ಕ್ಷಣ ಇದು. ಇಷ್ಟೆಲ್ಲಾ ಆದರೂ ಆ ಹಿಂದೆ ಸರಿದವಕ್ಕೆ ನಮ್ಮ ಗತ ಜೀವನದ ಸುಂದರ ನೆನಪಿಗೆ ಒಂದು ಸ್ಮಾರಕವನ್ನು ನಿರ್ಮಿಸಬೇಕು. ಆಗಾಗ್ಗೆ ಅದನ್ನು ನೋಡುತ್ತಾ ನಮ್ಮ ಕಳೆದುಹೋದ ಭಾವಾವೇಶದ ಕ್ಷಣಗಳನ್ನು ಮತ್ತೊಮ್ಮೆ ಅನುಭವಿಸಲು ಅಂಥವು ಬೇಕೆನಿಸುತ್ತದೆ."

– ಕಾರ್ಲ್ ಮಾರ್ಕ್ಸ್
(ಅನುವಾದ : ಕೆ.ಎಸ್.ಪಾರ್ಥಸಾರಥಿ)

ಪ್ರಜಾವಾಣಿಯ ಹೀಗೊಂದು ಸಂಪಾದಕೀಯ!!

ಆಪ್ ಆಧಾರಿತ ಟ್ಯಾಕ್ಸಿ ಸೇವೆಗೆ ಸಾರಿಗೆ ಇಲಾಖೆ ಕನಿಷ್ಠ ದರವನ್ನು ನಿಗದಿಮಾಡಬಾರದಂತೆ. ಅಂತಹ ಉಸಾಬರಿಯನ್ನು ಇಲಾಖೆ ಬಿಡಬೇಕಂತೆ. ಇದು ಅತಿಯಾದ ನಿಯಂತ್ರಣವಂತೆ. ಇದು ಪ್ರಗತಿ ವಿರೋಧಿಯಂತೆ! ಇದರಿಂದ ಪ್ರಾಯಾಣಿಕರಿಗೆ ಹೊರೆಯಾಗುತ್ತದಂತೆ. ಹಾಗಾದರೆ ಟ್ಯಾಕ್ಸಿ ಚಾಲಕರು ಮತ್ತು ಮಾಲೀಕರು ಹೆಚ್ಚು ದರ ನಿಗದಿಪಡಿಸುವ ಮೂಲಕ, ಪ್ರಯಾಣಿಕರನ್ನು ಸುಲಿಗೆಮಾಡಿ, ಹೆಚ್ಚು ಲಾಭಗಳಿಸಿ ತಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳಲು ಟ್ಯಾಕ್ಸಿಸೇವೆಗೆ ಬಂದಿದ್ದಾರೆಯೇ? ಜೀವನದ ನಿರ್ವಹಣೆಗಾಗಿ ಅದನ್ನೊಂದು ಉದ್ಯೋಗವನ್ನಾಗಿ ಮಾಡಿಕೊಂಡ ಬಡವರು ಅವರು. ಚಾಲಕ ಮತ್ತು ಮಾಲೀಕರ ಹಿತರಕ್ಷಣೆಯೂ ಸಾರಿಗೆ ಇಲಾಖೆಯ ಜವಾಬ್ದಾರಿ ಎಂಬುದನ್ನು ಈ ಸಂಪಾದಕರು ಮರೆತಿದ್ದಾರೆ. ಹಾಗಾದರೆ, ಸಾರಿಗೆ ಇಲಾಖೆಯ ಅಸ್ಥಿತ್ವವಾದರೂ ಏಕೆ ಬೇಕು ಎಂಬ ಪ್ರಶ್ನೆ ಮೂಡುತ್ತದೆ.

ಎಲ್ಲಾ ವೆಚ್ಚಗಳನ್ನು ಲೆಕ್ಕ ಹಾಕಿದರೆ ಪ್ರತಿ ಕಿ.ಮೀ.ಗೆ ಸರಾಸರಿ 2 ರೂ ಇತರೆ ವೆಚ್ಚ ಬರುತ್ತದೆ. ಡೀಸಲ್ ವೆಚ್ಚ 4 ರೂ ಎಂದು ಇಟ್ಟುಕೊಂಡರೂ ಪ್ರತಿ ಕಿ.ಮೀ.ಗೆ 6 ರೂ ವೆಚ್ಚವಾಗುತ್ತದೆ. ಕಂಪನಿ ಪಡೆಯುವ ಕಮೀಶನ್ ಕಳೆದು ಚಾಲಕ/ಮಾಲೀಕನಿಗೆ ಸಿಗುವುದಕ್ಕಿಂತ ರೂ 1.20 ರಷ್ಟು ಅಧಿಕ ವೆಚ್ಚವಾಕಗುತ್ತದೆ. ಇನ್ನು ಚಾಲಕನ ವೇತನ ದಿನವೊಂದಕ್ಕೆ ಕನಿಷ್ಠ 500 ರೂ ಎಂದಿಟ್ಟುಕೊಂಡರೂ ಕಿ.ಮೀ.ಗೆ 2 ರಿಂದ 3 ರೂ (ದಿನಕ್ಕೆ 150ರಿಂದ 250 ಕಿ.ಮೀ. ದೂರ ಚಾಲನೆ ಎಂದಿಟ್ಟುಕೊಂಡರೂ) ಚಾಲಕನ ವೇತನಕ್ಕೆ ಹೋಗುತ್ತದೆ. ಇದಲ್ಲದೆ ಸಣ್ಣ ವಾಹನ ಖರೀದಿಗೆ ಬ್ಯಾಂಕಿನಿಂದ ಪಡೆದ 3ರಿಂದ 4 ಲಕ್ಷ ಸಾಲಕ್ಕೆ 3 ವರ್ಷಗಳ ಕಾಲ, ಪ್ರತಿ ತಿಂಗಳು 12 ರಿಂದ 15 ಸಾವಿರ ಕಂತು ಕಟ್ಟಬೇಕು. ಇನ್ನುಳಿದ ಬಂಡವಾಳಕ್ಕಾಗಿ ಬ್ಯಾಂಕಿನ ಹೊರಗೆ ಖಾಸಗಿ ಲೇವಾದೇವಿದಾರರಿಂದ ಅಧಿಕ ಬಡ್ಡಿ ದರಕ್ಕೆ ಸಾಲ ಪಡೆದವರೇ ಹೆಚ್ಚು. ಇಷ್ಟೆಲ್ಲಾ ಸಂಕಷ್ಠಗಳಿಗೆ ಚಾಲಕ/ಮಾಲೀಕರು ಸಿಲುಕಿ ನರಳಾಡುತ್ತಿದ್ದಾರೆ. ದಿನದಲ್ಲಿ 14ರಿಂದ 18 ಗಂಟೆ ಮೊಬೈಲ್ ಆಪ್ ಆನ್ ನಲ್ಲಿಟ್ಟು ನಿದ್ರೆಗೆಟ್ಟು ಕಾಯುತ್ತಿದ್ದಾರೆ. ಕಂಪನಿಗಳು ಒಡ್ಡುವ ಅಲ್ಪ ಪ್ರಮಾಣದ ಪ್ರೋತ್ಸಾಹ ಧನಕ್ಕಾಗಿ ಅವುಗಳ ಕಠಿಣ ಷರತ್ತುಗಳನ್ನು ಪೂರೈಸಲು ಇಷ್ಟೆಲ್ಲಾ ಶ್ರಮ ಪಡುವ ಅನಿವಾರ್ಯತೆಗೆ ಸಿಲುಕಿದ್ದಾರೆ. ಸಂಚಾರ ಒತ್ತಡದ ಕಾರಣದಿಂದ ನಿಗದಿತ ಸ್ಥಳಕ್ಕೆ ತಲುಪಲು ಒಂದೆರೆಡು ನಿಮಿಷ ತಡವಾಗಿ, ಪ್ರಯಾಣಿಕರು ರದ್ದುಗೊಳಿಸಿದರೆ ಚಾಲಕರಿಂದ ದಂಡ ವಸೂಲಿ ಮಾಡಿದ ಉದಾಹರಣೆಗಳೂ ಇವೆ.

ಇಷ್ಟಕ್ಕೂ ಪ್ರಯಾಣಿಕರಿಗೆ ಕಿ.ಮೀ.ಗೆ 6ರ ದರದಲ್ಲಿ ಸೇವೆ ಸಲ್ಲಿಸಲಾಗುತ್ತಿದೆಯೇ? ಬೇಡಿಕೆ ಆಧಾರಕ್ಕೆ ತಕ್ಕಂತೆ ದರದಲ್ಲಿ ಏರುಪೇರುಗಳಾಗುತ್ತಿಲ್ಲವೆ? ನಿರ್ಧಿಷ್ಠ ದೂರಕ್ಕೆ ಎರಡು ಮೂರು ಪಟ್ಟು ದರ ವಸೂಲಿ ಮಾಡಿದ ಉದಾಹರಣೆಗಳೂ ಸಾಕಷ್ಟಿವೆ. ಕೆಲವು ವೇಳೆ ಪ್ರಯಾಣಿಕರಿಂದ ಎಷ್ಟು ದರ ಪಡೆದರೆಂಬುದೇ ಸೇವೆ ಮಾಡಿದ ಚಾಲಕನ ಗಮನಕ್ಕೆ ಬರುವುದಿಲ್ಲ. ಈ ವಿದೇಶಿ ಮೂಲದ ಮತ್ತು ವಿದೇಶಿ ಬಂಡವಾಳ ಹೊಂದಿರುವ ಸ್ವದೇಶಿ ಮೂಲದ ಆಪ್ ಕಂಪನಿಗಳು ಟ್ಯಾಕ್ಸಿ ಚಾಲಕರು/ಮಾಲೀಕರು ಮತ್ತು ಗ್ರಾಹಕರನ್ನು ಈ ರೀತಿ ವಂಚಿಸುತ್ತಿದ್ದರೂ, ನಮ್ಮ ಸಾರಿಗೆ ನಿಯಮಗಳನ್ನು ಉಲ್ಲಂಘಿಸುತ್ತಿದ್ದರೂ, ಅವುಗಳನ್ನು ನಿಯಂತ್ರಿಸುವುದು ಬೇಡ ಎಂಬ ಸಂಪಾದಕರ ವಾದ ಎಷ್ಟು ಸರಿ?

– ಸಿದ್ದಯ್ಯ ಚಿಕ್ಕಮಾದೇಗೌಡ

ಈ ವಾರ ಚರಿತ್ರೆಯಲ್ಲಿ

ಸೆಪ್ಟೆಂಬರ್ 28, 1907 ಕ್ರಾಂತಿಕಾರಿ ಭಗತ್ ಸಿಂಗ್ ಜನ್ಮದಿನ



ಭಗತ್ ಸಿಂಗ್ ಹುಟ್ಟಿದ ದಿನ ಕ್ರಾಂತಿಕಾರಿಯಾಗಿ ಬೆಳೆದ ಬಗೆ ಇಲ್ಲಿದೆ. ಪಂಜಾಬಿನ ಕ್ರಾಂತಿಕಾರಿಗಳ ಪಕ್ಷ ಗದರ್ ಪಕ್ಷ ಪಂಜಾಬಿನಲ್ಲಿ ಮನೆಮಾತಾಗಿತ್ತು. ಭಗತ್ ಸಿಂಗ್ ನ ತಂದೆ, ಚಿಕ್ಕಪ್ಪ ಗದರ್ ಪಕ್ಷದಲ್ಲಿದ್ದರು. ಭಗತರ ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಪ್ರೇಮದ ಗಾಳಿ ಉಸಿರಾಡುತ್ತಿದ್ದ ಬೆಳೆದರು. ಲಾಹೋರ್ ಅಂದಿನ ಸ್ವಾತಂತ್ರ್ಯ ಚಳುವಳಿಯ ಕೇಂದ್ರ. ಲಾಲಾ ಲಜಪತ ರಾಯ್ ರವರ ಚಟುವಟಿಕೆಯ ಕೇಂದ್ರ. ಭಗತ್ ಸಿಂಗ್ ರವರು ಅಧ್ಯಯನ ಮಾಡಿದ ಕಾಲೇಜು ಅಂತಹ ಒಂದು ಕೇಂದ್ರವಾಗಿತ್ತು. ಅಲ್ಲಿನ ಮೊದಲ ಎಡಪಂಥೀಯ ಪತ್ರಿಕೆ, ಮೊದಲ ಕಮ್ಯುನಿಸ್ಟರ ಸಂಪಾದಕತ್ವದ "ಕೀರ್ತಿ" ಪತ್ರಿಕೆಯಲ್ಲಿ ಕೆಲಸ ಮಾಡಿದರು. ಸಮಾಜವಾದಿ ವಿಚಾರಗಳ ಪರಿಚಯ ಮಾಡಿಕೊಂಡರು.

ಕಮ್ಯುನಿಸ್ಟರು ಆರಂಭಿಸಿದ್ದ ಕಾರ್ಮಿಕ ರೈತ ಪಕ್ಷದ ಸಮಾವೇಶದಲ್ಲಿ ಪಾಲ್ಗೊಂಡರು. ಅದರ ಅಂಗವಾಗಿಯೇ ಭಾರತ ನವ ಜವಾನ್ ಸಭಾ ಸ್ಥಾಪಿಸಿದರು. ಜನರಿಗಾಗಿ ಸ್ವಾತಂತ್ರ್ಯ ಎಂಬ ವಿಚಾರ ಮೈಗೂಡಿಸಿಕೊಂಡರು. ಭಾರತದ ಮೊದಲ ಜಾತ್ಯತೀತ ಕ್ರಾಂತಿಕಾರಿ ಸಂಘಟನೆ ಸ್ಥಾಪಿಸಿದರು. ಅಲ್ಲಿಯವರೆಗೆ ಹಿಂದೂ ಧಾರ್ಮಿಕ ಆಚರಣೆಗಳನ್ನು ಆಧರಿಸಿಯೇ ಕ್ರಾಂತಿಕಾರಿ ಗುಂಪುಗಳು ರೂಪುಗೊಂಡಿದ್ದವು. ರಿಪಬ್ಲಿಕ್ ಮತ್ತು ಸೋಷಿಯಲಿಸ್ಟ್ ಎಂಬ ಹೆಸರಿನಲ್ಲಿ ಕ್ರಾಂತಿಕಾರಿ ಸಂಘಟನೆ ಸ್ಥಾಪಿಸಿದ್ದು ಹೊಸ ಬೆಳವಣಿಗೆ. ನಂತರವೂ ಕಮ್ಯುನಿಸ್ಟ್ ವಿಚಾರಗಳನ್ನು ಅಧ್ಯಯನ ಮಾಡುತ್ತಾ ಶೋಷಿತರ ಸಂಘಟನೆ ಮತ್ತು ಅವರ ಸಾಮೂಹಿಕ ಚಳುವಳಿಯೇ ಕ್ರಾಂತಿಯ ದಾರಿ ಎಂಬುದನ್ನು ಕಂಡುಕೊಂಡರು.

ಅದರಿಂದಾಗಿ ಕಮ್ಯುನಿಸ್ಟರು ಮತ್ತು ಕಾರ್ಮಿಕ ಚಳುವಳಿಯನ್ನು ದಮನ ಮಾಡುವ ಕಾನೂನುಗಳನ್ನು ಅಂಗೀಕರಿಸುವ ಸಮಯದಲ್ಲಿ ಬಾಂಬ್ ಹಾಕಿದರು. ಅದೇ ಸಮಯದಲ್ಲಿ ಜನ ಚಳುವಳಿ ಮಾಡಲು ಕರೆ ನೀಡುವ ಕರಪತ್ರ ಹಂಚಿದರು. ಮತ್ತು ಮರಣ ದಂಡನೆ ಖಾತ್ರಿಯೆಂದು ಗೊತ್ತಿದ್ದರೂ ತಪ್ಪಿಸಿಕೊಳ್ಳಲಿಲ್ಲ. ತಾವಾಗಿಯೇ ಬಂಧನಕ್ಕೊಳಗಾದರು. # ಈ ಕೃತ್ಯ, ಮತ್ತು ಅವರ ಮರಣ ದಂಡನೆ ಹತ್ತಾರು ಸಾವಿರ ಜನರನ್ನು ಕಮ್ಯುನಿಸ್ಟ್ ಚಳುವಳಿಯ ಕಡೆ ಸೆಳೆಯಿತು. ಇ.ಎಂ. ಎಸ್ ನಂಬೂದರಿಪಾದ್ ರವರೂ ಸೇರಿದಂತೆ ಅನೇಕ ನಾಯಕರು ಕಮ್ಯುನಿಸ್ಟ್ ವಿಚಾರಗಳಿಗೆ ಆಕರ್ಷಿತರಾದರು.

ಭಗತ್ ಸಿಂಗ್ ರವರು ಬಂಧನಕ್ಕೊಳಗಾಗಿ ಜೈಲು ಸೇರಿದ ಮೇಲೆ ಅಪಾರವಾಗಿ ಅಧ್ಯಯನ ಮಾಡಿದರು. ಅವರು ಅಧ್ಯಯನ ಮಾಡಿದ ಪುಸ್ತಕಗಳ ಪಟ್ಟಿ ಅವರ ಜೈಲು ದಿನಚರಿ ಎಂಬ ಪುಸ್ತಕದಲ್ಲಿ ಲಭ್ಯವಿದೆ . ಈ ಪಟ್ಟಿಯನ್ನು ನೋಡಿದರೆ ಮಾರ್ಕ್ಸ್ ವಾದದ ವಿವಿಧ ಆಯಾಮಗಳನ್ನು ಅರ್ಥ ಮಾಡಿಕೊಳ್ಳುವ ಅವರ ತವಕ ಗೊತ್ತಾಗುತ್ತದೆ. ಈ ಅಧ್ಯಯನದಿಂದ ಅವರು ಜನ ಸಮುದಾಯಗಳನ್ನು ಸಂಘಟಿಸಿ ಚಳುವಳಿ ಮಾಡುವ ದಾರಿಯೇ ಸರಿಯಾದ ಮಾರ್ಗ ಎಂಬುದನ್ನು ಕಂಡುಕೊಂಡರು. ನಾನೇಕೆ ನಾಸ್ತಿಕನಾದೆ ಎಂಬ ಬಗ್ಗೆ ಒಂದು ದೀರ್ಘ ಪ್ರಬಂಧವನ್ನೇ ಮಂಡಿಸಿದರು.

ಅವರ ಬರಹ ಮತ್ತು ವಿಚಾರಗಳನ್ನು ಅಧ್ಯಯನ ಮಾಡುವುದು, ಆ ದಾರಿಯಲ್ಲಿ ಸಾಗುವುದು ಭಗತ್ ಸಿಂಗ್ ರವರ ನೆನಪನ್ನು ಮಾಡಿಕೊಳ್ಳುವ ಅತ್ಯುತ್ತಮ ವಿಧಾನ.

ಅವರ ಬಲಿದಾನದ ಮೂಲಕ ಲಕ್ಷಾಂತರ ಯುವಜನರನ್ನು ಎಚ್ಚರಿಸಿದರು. ಸಾವಿರಾರು ಜನರನ್ನು ಜನ ಚಳುವಳಿಯ ಕಡೆಗೆ ಸೆಳೆದರು.

ನಮ್ಮ ಚುರು-ಟ್ವೀಟ್

Peglet
@PedestrianPoet

ಮಹಿಳೆಯರು: ನಮ್ಮ ಒತ್ತಾಯ ನಮ್ಮ ಮೇಲೆ ದೌರ್ಜನ್ಯ ಆಗಬಾರದು ಎಂಬುದಷ್ಟೇ
ಬಿಜೆಪಿ: ನಿಮ್ಮ ಒತ್ತಾಯ ರಾಜಕೀಯ ದುರುದ್ಧೇಶದ್ದು

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**